ಜಯಂತಿ

ಸಂಪಾದಕರು
ಬೆಟಗೇರಿ ಕೃಷ್ಣಶರ್ಮ

ಸಂಪುಟ ೧೦ ★ ಸಂಚಿಕೆ ೮

ನಮ್ಮ ಹೊಸ ವಿಭಾಗ

卐

ಜಯಂತಿಗೆ ಜಾಹೀರಾತುಗಳನ್ನು ಒದಗಿಸಲಿಕ್ಕೂ ಚಂದಾದಾರರನ್ನು ಕೂಡಿಸಲಿಕ್ಕೂ ಶ್ರೀ. ವಾಜೀರಾವ ಮೇಲಗಿರಿ ಯವರು ವ್ಯವಸ್ಥಾಪಕರಾಗಿ ಕಾರ್ಯ ಮಾಡುತ್ತಿದ್ದಾರೆ. ಜಯಂತಿಯ ಅಭಿಮಾನಿಗಳೆಲ್ಲರೂ ಅವರಿಗೆ ನೆರವು ಕೊಡುತ್ತಿರಬೇಕಾಗಿ ಬೇಡಿಕೆ. ಜಾಹೀರಾತುಗಳ ಬಗೆಗೆ ವಿಶೇಷ ವಿವರಗಳನ್ನು ಬಯಸುವವರು ಕೆಳಗೆ ಕಾಣಿಸಿದ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಶ್ರೀ ವಾಜೀರಾವ ಮೇಲಗಿರಿ
ಅಡ್ವರ್ಟಾಯಿಜಿಂಗ್ ಮ್ಯಾನೇಜರ್
ಜಯಂತಿ ಕಾರ್ಯಾಲಯ
ಧಾರವಾಡ.

ಜನವರಿ ● ೧೯೪೪

ಬೆಲೆ ೮ ಆಣೆ.

ಸಂಪಾದಕರು : ಬೆಟಗೇರಿ ಕೃಷ್ಣಶರ್ಮರು

ಸಂಪುಟ ೧೦	೨ನೆಯ ಜನವರಿ ೧೯೪೮	ಸಂಚಿಕೆ ೮

ಮುಖ್ಯ ವಿಷಯಗಳು

ಮನೆಗೆ ಮಾರಿಯಾದ ಮುಂದಾಳ್ತನ (ಸಂಪಾದಕೀಯ)	ಸಂಪಾದಕರು	೨೧೩
ಬೀರಣ್ಣನ ಬಡಿನುಡಿಗಳು (ವ್ಯಂಗ್ಯವಿಮರ್ಶೆ)	'ಗುಡದಪ್ಪ'	೨೧೫
ಸಾದರ ಸ್ವೀಕಾರ	....	೨೧೭
ಮಾತನಾಡುವ ಕಲ್ಲು (ಸಣ್ಣ ಕತೆ)	'ಆನಂದಕಂದ'	೨೧೮
ಸಾಹಿತ್ಯ ಮತ್ತು ಸ್ವಾತಂತ್ರ್ಯ (ಪ್ರಬಂಧ)	ಶ್ರೀ. ಮ. ಸಿ. ಸೋಮಶೇಖರ ಶರ್ಮ, ಬನಾರಸ	೨೨೦
ವಿಶ್ವಸಾರ (ಕವನ)	ಶ್ರೀ. ಸಿ. ಕೆ. ತಿರುಮಲೇಶ ಮದರಾಸ	೨೨೧
ನಿತ್ಯಪೂಜೆ (ಕವನ)	ಶ್ರೀ. ಮುದೇನೂರ ಸಂಗಣ್ಣ, ಮದನಪಲ್ಲಿ	೨೨೨
ದೀಪಾವಳಿ (ರೇಡಿಯೋ ನಾಟಕ)	ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೨೨೨
ಏಕ್‌ಪೈಸಾ ನಾಹೇಜ್ (ವಿ. ಪ್ರ. ಪ್ರಬಂಧ)	ಶ್ರೀ. ಗ. ನಾ. ಕುರಡಿ ಬಿ.ಎ. (ಆನರ್ಸ್) ಮುಂಬಯಿ	೨೨೦
ನಿರೀಕ್ಷೆ (ಕವನ)	ಶ್ರೀ. ಕೆ. ಜಿ. ಶಾಸ್ತ್ರಿ ಬಿ.ಎ. (ಆನರ್ಸ್) ಗೋಕರ್ಣ	೨೨೨
ಏಕೀಕರಣವೊಂದೇ ಕಲ್ಪವೃಕ್ಷ! (ಪರಿಚಯಾತ್ಮಕ)	ಶ್ರೀ. ಮುಂಗಳವೀಡು ಶ್ರೀನಿವಾಸರಾಯರು, ಹುಬ್ಬಳ್ಳಿ	೨೨೨
ಹಿಮ್ಮತ್ ಬೀಬಿ (ಸಣ್ಣಕತೆ)	ಶ್ರೀ. ಕೆ. ಅಶ್ವತ್ಥನಾರಾಯಣರಾಯರು, ಬನಾರಸ	೨೨೨
ಪುಸ್ತಕ ನಗೀರಕರಣ (ವಾಚನಾಲಯ ಶಾಸ್ತ್ರ)	ಶ್ರೀ. ಶ್ರೀನಿವಾಸ ಏರಣಿ ಬಿ.ಎ. (ಆನರ್ಸ್) ಸಾಂಗ್ಲಿ	೨೨೪
ರಾಜಕೀಯ ಲೋಕದ ಅವಲೋಕನ	'ರಾಯರ ಅಪ್ಪಾಜಿ'	೨೨೫

ನಮ್ಮ ವಾಚಕ ವರ್ಗಕ್ಕೆ:-

ಪ್ರಿಯ ಮಹನೀಯರೇ,

★

ಜಯಂತಿಗೆ ಚಂದಾದಾರರು ಸಾಕಷ್ಟು ಇರದಿದ್ದರೂ ಅದನ್ನು ಪ್ರೀತಿಸುವ ವಾಚಕವರ್ಗ ಸಾಕಷ್ಟು ಇರುವುದೆಂಬುದನ್ನು ನಾವು ಅರಿತಿರುವೆವು. ದಿನದಿನಕ್ಕೂ ಆರ್ಥಿಕ ಪರಿಸ್ಥಿತಿ ಹದಗೆಡುತ್ತ ನಡೆದುದರಿಂದ, ಬರಿಯ ಪ್ರೀತಿಯಿಂದ ಜಯಂತಿಯ ಜೀವನ ನಡೆಯಲಾರದು. ಒಳ್ಳೆಯ ದಿನಗಳು ಬಂದಾವೆಂಬ ನಿರೀಕ್ಷೆಯಿಂದ ಜಯಂತಿಯ ಸಂಚಾಲಕ ಸಮಿತಿ ಇದುವರೆಗೂ ಆರ್ಥಿಕ ಹೊಣೆ ಹೊತ್ತು ಕೊಸರು ಈಗ ಬೇಸತ್ತು ಹೋಗಿದೆ. ಕಾಗದ-ಮುದ್ರಣದ ತಲೆಕೊರೆಯಾದ ಬೆಲ್ಲವು ಸಂಚಾಲಕರನ್ನು ಕಂಗೆಡಿಸಿಬಿಟ್ಟಿದೆ. ಜಯಂತಿ ಬದುಕಿ ಕರ್ನಾಟಕದಲ್ಲಿ ಕಾರ್ಯ ಮಾಡುತ್ತಿರಬೇಕೆಂದು ಬಯಸುವವರು ತುಂಬ ಜನರು ಇದ್ದಾರೆ. ಅವರೆಲ್ಲ ತಾವು ಸ್ವತಃ ಚಂದಾದಾರರಾಗುವುದಲ್ಲದೆ ತಮ್ಮ ಪರಿಚಿತ ಮಿತ್ರರನ್ನೂ ಚಂದಾದಾರರನ್ನಾಗಿ ಮಾಡಿಕೊಟ್ಟು ಸಹಕಾರ ನೀಡಬೇಕಾಗಿ ವಿನ್ನಹ. ಜಯಂತಿ ಇನ್ನೂ ಒಳ್ಳೆಯದಾಗಬೇಕೆಂದು ನಮ್ಮ ಉತ್ಕಟವಾದ ಆಶೆ. ಅದು ಹೆಚ್ಚು ಒಳ್ಳೆಯದಾಗುವುದು ಹೇಗೆಂಬುದರ ಕಲ್ಪನೆಯೂ ಇಲ್ಲದೆ ಇಲ್ಲ. ಆದರೆ ಕಲ್ಪನೆಯಂತೆ ಕೆಲಸ ನಡೆಯಬೇಕಾದರೆ ಹಣ ಬೇಕು; ಆ ಹಣವನ್ನು ನಮ್ಮ ವಾಚಕವರ್ಗ ಒದಗಿಸಿಕೊಡಬೇಕು. ನಮಗೆ ಪುಕ್ಕಟೆ ಹಣ ಬೇಡ. ಜಯಂತಿಯನ್ನು ತೆಗೆದುಕೊಳ್ಳಿರಿ; ಕೇವಲ ಅದರ ಚಂದಾಹಣ ಕೊಡಿರಿ! ಹಣದ ಚಿಂತೆ ಬಿಟ್ಟರೆ ಅದು ಹೇಗೆ ಕೆಲಸ ಮಾಡಬಲ್ಲದೆಂಬುದನ್ನು ನೋಡಿರಿ.

'ಜಯಂತಿ' ಕಾರ್ಯಾಲಯ,
ಧಾರವಾಡ.
೧–೧–೧೯೪೮

ತಮ್ಮ
ಬೆಟಗೇರಿ ಕೃಷ್ಣಶರ್ಮ
ಸಂಪಾದಕ.



ವಾರ್ಷಿಕ ಚಂದಾ
೪—೮—೦

ಪ್ರತಿತಿಂಗಳ ೧೫ನೆಯ ತಾರೀಖಿಗೆ
ಪ್ರಕಟವಾಗುವುದು.

ಸಂಪುಟ ೧೦ | ೧೯೩೮ನೆಯ ಜನವರಿ ೧೫ನೆಯ ದಿನ | ಸಂಚಿಕೆ ೮

ಸಂಪಾದಕೀಯ

ಮನೆಗೆ ಮಾರಿಯಾದ ಮುಂದಾಳ್ತನ

'ಕರ್ನಾಟಕ ಸಿಂಹ' ಗಂಗಾಧರರಾಯರು ಒಂದು ಪ್ರಕಟನೆ ಹೊರಡಿಸಿ, ಅಖಿಲಕರ್ನಾಟಕದ ಜನರೂ ದಿವಂಗತ ನರಸಿಂಹ ಬಂತಾವಣಿ ಕೇಳಕರ ಅವರ ಸ್ಮಾರಕನಿಧಿಗಾಗಿ ತಮ್ಮ ಕಾಣಿಕೆ ಸಲ್ಲಿಸಬೇಕೆಂದು ಬಿನ್ನವಿಸಿಕೊಂಡಿರುವರು; ಅಲ್ಲದೆ ಆ ಪ್ರಕಟನೆಯಲ್ಲಿ ಕನ್ನಡಿಗರು ಈ ನಿಧಿಗೆ ಕರ್ತವ್ಯಬುದ್ಧಿಯಿಂದ ಕಾಣಿಕೆ ಸಲ್ಲಿಸಬೇಕೆಂಬುದಕ್ಕೆ ಕೆಲವು ಕಾರಣಗಳನ್ನೂ ಕಲ್ಪಿಸಿ ಮಂಡಿಸಿರುವರು.

ದಿವಂಗತ ಕೇಳಕರರ ಅಭ್ಯಾಸ, ಪಾಂಡಿತ್ಯ, ಸಂಸ್ಕಾರ, ತಮ್ಮ ಪ್ರಾಂತ್ಯದ ಸಂಪೂರ್ಣ ಉನ್ನತಿಗಾಗಿ ವಹಿಸಿದ ನಿರಂತರವಾದ ಹೊಣೆಗಾರಿಕೆ ಇವುಗಳ ಬಗೆಗೆ ಅವರು ನಮಗೆಲ್ಲ ಆದರ್ಶಪುರುಷರು; ಮನ್ನಣೆಗೆ ಪಾತ್ರರು. ಅದರಂತೆಯೆ ಮಹಾರಾಷ್ಟ್ರದ ಜನರು, ದಿವಂಗತರ ವ್ಯಕ್ತಿತ್ವದ ಮಟ್ಟು ತಮ್ಮ ಪ್ರಾಂತ್ಯಕ್ಕೆ ಸಲ್ಲಿಸಿದ ಸೇವೆಯ ಮಹತ್ತ್ವವನ್ನರಿತು, ಅವರ ಯೋಗ್ಯತೆಗೆ ತಕ್ಕ ಸ್ಮಾರಕವನ್ನು ನಿರ್ಮಿಸಲಿರುವುದೂ ಅಭಿನಂದನೀಯ ಸಂಗತಿ. ಪ್ರಾಂತ್ಯಕ್ಕೆ ಕರ್ತವ್ಯನಿಷ್ಠೆಯಿಂದ ಸೇವೆ ಸಲ್ಲಿಸಿದ ಧುರೀಣನ ಸ್ಮಾರಕವನ್ನೇರ್ಪಡಿಸುವುದು ಆ ಪ್ರಾಂತದ ಜನರ ಕರ್ತವ್ಯವೇ ಸರಿ. ಆದರೆ ಮಹಾರಾಷ್ಟ್ರದಲ್ಲಿ ನಿರ್ಮಿಸಲಿರುವ ಈ ಮಹಾರಾಷ್ಟ್ರೀಯ ಧುರೀಣನ ಮಹಾಸ್ಮಾರಕಕ್ಕಾಗಿ, ಕನ್ನಡಿಗರು ಕಾಣಿಕೆ ಸಲ್ಲಿಸಬೇಕೆಂದು ಬಿನ್ನವಿಸಿಕೊಳ್ಳುವುದು, ಕರ್ನಾಟಕ ಧುರೀಣರೆನಿಸಿಕೊಳ್ಳುವವರ ಕರ್ತವ್ಯವೆನಿಸೀತೆ? ಈ ವಿಷಯವನ್ನು ಕನ್ನಡಿಗರೆಲ್ಲರೂ ವಿಚಾರ-ವಿಮರ್ಶೆಗಳಿಂದ ತಿಳಿದುಕೊಳ್ಳಬೇಕಾಗಿದೆ.

'ಕಸ್ತೂರಬಾ' ನಿಧಿಯಂತಹ ಅಖಿಲ ಭಾರತೀಯ ನಿಧಿಗೆ ಕನ್ನಡಿಗರು ಕೊಡುಗೈಯಿಂದ ದಾನವಾಡಿದರು; ಅದನ್ನು ಸರಿಯಲ್ಲವೆಂದು ಯಾರೂ ಹೇಳರು. ಅದರಂತೆಯೆ ಬೇರೆ ಬೇರೆ ಗಂದಾಂತರಗಳಲ್ಲಿ ಸಿಕ್ಕ ಪರಪ್ರಾಂತೀಯ ಜನರಿಗಾಗಿ ಕನ್ನಡಿಗರು ಆಗಾಗ ಹಣ-ಕೊಡಿಸಿ ಕೂಟ್ಟರು: ಅದನ್ನೂ ತಪ್ಪೆಂದು ಯಾರೂ ಹೇಳಲಾರರು. ಕಸ್ತೂರಬಾ ನಿಧಿಯಂತಹ ನಿಧಿಗಳಿಂದ ಕರ್ನಾಟಕವೂ ಪ್ರಯೋಜನ ಪಡೆಯಬಲ್ಲದು. ಗಂದಾಂತರಕ್ಕೊಳಗಾದ ಜನರಿಗೆ ಸಲ್ಲಿಸಿದ ಸಹಕಾರನಿಧಿಯು ಕನ್ನಡಿಗರ ಮಾನವಸಹಜ ಸಹಾನುಭೂತಿ, ಕರ್ತವ್ಯ ಬುದ್ಧಿಯ ನಿದರ್ಶನವಾಗಿರುವುದು. ಆದರೆ ದಿವಂಗತ ಕೇಳಕರರ ಸ್ಮಾರಕನಿಧಿಗೆ ಕನ್ನಡಿಗರು ಹಣಕೊಡುವುದರಿಂದ ಯಾವ ಪ್ರಯೋಜನವನ್ನು ಸಾಧಿಸಿದಂತಾಗಬಹುದು?

ಮಹಾರಾಷ್ಟ್ರೀಯರು ತಮ್ಮ ಪ್ರಾಂತ್ಯವನ್ನು ಭದ್ರವಾದ ತಳಹದಿಯ ಮೇಲೆ ಕಟ್ಟುತ್ತ ಹೊರಟಿದ್ದಾರೆ. ಇಂತಹ ಸ್ಮಾರಕ ಸಂದರ್ಭಗಳನ್ನೆಲ್ಲ ತಮ್ಮ ಪ್ರಾಂತ್ಯದ ಸಂಘಟನೆಗಾಗಿ ಅಲ್ಲಿಯ ಜನರು ಉಪಯೋಗಿಸಿಕೊಳ್ಳುತ್ತಿರುವರು. ಅದರಂತೆಯೆ ಕೇಳಕರ ಸ್ಮಾರಕನಿಧಿಯಾದರೂ ಸಂಪೂರ್ಣವಾಗಿ ಮಹಾರಾಷ್ಟ್ರದ ಸಂಘಟನೆಗಾಗಿ ಮಾತ್ರ ಉಪಯೋಗವಾಗುವುದೇ ಹೊರತು, ಮಿಕ್ಕವರಾರೂ ಅದರಿಂದ ಪ್ರಯೋಜನವನ್ನು ಅಪೇಕ್ಷಿಸುವಂತಿಲ್ಲ. ಇಂತಹ ಸಂದರ್ಭ

ಗಳನ್ನು ತಂತಮ್ಮ ಪ್ರಾಂತ್ಯದ ಸಂಘಟನೆಗಾಗಿ ಉಪಯೋಗಿಸಿಕೊಳ್ಳಬೇಕಾದುದು ಪ್ರತಿಯೊಂದು ಪ್ರಾಂತ್ಯದವರ ಕರ್ತವ್ಯವೇ ಆಗಿದೆ. ಆದರೆ ಮನೆಯಿಲ್ಲದೆ ಬಯಲಲ್ಲಿ ಕುಳಿತವರ ಮುಂದಾಳೊಬ್ಬ, ಮಹಡಿಯ ಮನೆ ಕಟ್ಟಿಸಲಿರುವ ಸಿರಿವಂತನಿಗೆ ಹಣದ ಸಹಾಯ ಮಾಡಬೇಕೆಂದು ತನ್ನ ಅನುಯಾಯಿಗಳಿಗೆ ಬೋಧಿಸುವುದು ಉಚಿತವೆನಿಸೀತೆ?

ಕರ್ನಾಟಕದ ಏಕೀಕರಣ ಕಾರ್ಯಕ್ಕೆ ದುಡ್ಡು ಬೇಕಾಗಿದೆ; ಕೊಡಿಸುವವರಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯಕ್ಕಾಗಿ ದಗಿಡ್ದು ಬೇಕಾಗಿದೆ; ಕೊಡುವವರಿಲ್ಲ— ಕೊಡಿರೆಂದು ಹೇಳುವವರಿಲ್ಲ. ದೂರದ ಮಾತೇಕೆ? ಕರ್ನಾಟಕ ವಿದ್ಯಾವರ್ಧಕ ಸಂಘವು ನಡೆಯಿಸಬೇಕಾಗಿರುವ ಪ್ರಾದೇಶಿಕ ವಾಚನಾಲಯಕ್ಕಾಗಿ ನಿಧಿ ಕೂಡಿಸಬೇಕಾಗಿದೆ; ಕೂಡಿಸುವವರೂ ಕೊಡುವವರೂ ಇಲ್ಲದುದಕ್ಕಾಗಿ— ಮಹಾರಾಷ್ಟ್ರ, ಗುಜರಾತ ಪ್ರಾಂತ್ಯಗಳಲ್ಲಿ ಪ್ರಾದೇಶಿಕ ವಾಚನಾಲಯಗಳು ಪ್ರಾರಂಭವಾಗಿ ಕಾರ್ಯಮಾಡತೊಡಗಿದ್ದರೂ— ಕನ್ನಡ ಪ್ರಾದೇಶಿಕ ವಾಚನಾಲಯವು ಕಣ್ಣು ಬಿಡುತ್ತ ಕುಳಿತುಕೊಂಡಿದೆ. ಕನ್ನಡ ಚಲ್ಲಾನಕೋಶಕ್ಕಾಗಿ ನಿಧಿ ಕೂಡಿಸಬೇಕಾಗಿದೆ. ಕರ್ನಾಟಕ ಇತಿಹಾಸ ಮಂಡಲ ಹಣವಿಲ್ಲದ ಕಾರಣದಿಂದ ಗೊತ್ತುಗೇದಿಯಾಗಿ ಬಿದ್ದಿದೆ. ಕನ್ನಡ ಸಂಶೋಧನ ಸಂಸ್ಥೆ ನಿಲ್ಲಲು ನೆಲೆಯಿಲ್ಲದೆ ಬಾಡಿಗೆ ಮನೆಗಳಲ್ಲಿ ತಿರುಗಾಡುತ್ತಲಿದೆ. ಇವುಗಳನ್ನೆಲ್ಲ ಕಣ್ಣು ತೆರೆದು ನೋಡದ 'ಕರ್ನಾಟಕ ಸಿಂಹ', ಲೋಕಕ್ಕೆ ಉಪಕಾರಮಾಡಲಿಕ್ಕೆ ಹೊರಟಿದೆ. ಅದಕ್ಕಾಗಿ ಮಹಾರಾಷ್ಟ್ರೀಯರ ವಕೀಲಿಯನ್ನೂ ಕೈಕೊಂಡಿದೆ.

ದಿವಂಗತ ಕೇಳಕರರ ಬಗೆಗಿರುವ ನಮ್ಮ ಗೌರವ ಖಿಲ್ಲವರಾರಿಗಿಂತಲೂ ಕಡಿಮೆಯಿಲ್ಲ. ಅವರ ಜೀವನತತ್ತ್ವದ ಆಧಾರದಿಂದಲೆ ಮಾತನಾಡುವುದಾದರೆ, ಶ್ರೀ. ಗಂಗಾಧರರಾಯರ ಈ ರೀತಿ 'ಮನೆಗೆ ಮಾರಿ, ಊರಿಗೆ ಉಪಕಾರಿ' ಎನಿಸದಿರದು. ಕನ್ನಡಿಗರ ಯಾವ ಉನ್ನತಿಯ ಕಡೆಗೆ ಲಕ್ಷ್ಯಕೊಟ್ಟರುವರೆಂದು ರಾಯರಿಗೆ ಅಖಿಲ ಕನ್ನಡಿಗರನ್ನು ಪಲುಗಡಿಯಿಂದ ಕೇಳುವ ಅಧಿಕಾರವಿದೆ?

ದಿವಂಗತ ಕೇಳಕರರು ಕನ್ನಡಿಗರ ಹಿತವಾಡಿದರೆಂದು ಸಿದ್ಧ ಮಾಡುವುದಕ್ಕೆ ನಮ್ಮ ಈ ಹಿರಿಯರು ಕೆಲವು ಪ್ರಮಾಣಗಳನ್ನು ಹೇಳಿರುವರು:

'ಅವರಲ್ಲಿ ಸಂಕುಚಿತ ಪ್ರಾಂತೀಯ ಅಭಿಮಾನವಿರಲಿಲ್ಲ' ಇದೊಂದು ದೊಡ್ಡ ಬಾರುಡಿ. ತಮ್ಮ ಪ್ರಾಂತೀಯ ಅಭಿಮಾನವನ್ನು ಅವರ ಪ್ರತಿಯೊಂದು ಕೃತಿಯೂ ಸಿದ್ಧಮಾಡಬಲ್ಲದು. ಒಳ್ಳೆಯ ರಾಜಕಾರಣಿಗಳಾದುದರಿಂದ, ಯಾವಾಗಲೂ ಅಡುವ ಮಾತುಗಳು ತತ್ತ್ವದಷ್ಟಾಗಿರುತ್ತದ್ದುದು ನಿಜ.

ಬಳ್ಳಾರಿ ಜಿಲ್ಲೆಯ ಆರು ತಾಲ್ಲೂಕುಗಳು ಕರ್ನಾಟಕಕ್ಕೆ ದೊರೆತುದು ದಿವಂಗತ ಕೇಳಕರರ ಉಪಕಾರದಿಂದಂತೆ. ಅಂದ್ರಕ್ಕೆ ಅನ್ಯಾಯವಾಗಿ ಸೇರಿದ ಮೂರು ತಾಲ್ಲೂಕುಗಳ ಕನ್ನಡಿಗರು, ಇವರ ನ್ಯಾಯನಿರ್ಣಯದ ಫಲವನ್ನು ಒಳ್ಳೆಯ ರೀತಿಯಿಂದಲೆ ಅನುಭವಿಸುತ್ತಿದ್ದಾರೆ. ಈ ನಿರ್ಣಯ ಭೂರ್ತಶನದ್ದಾಗಿರುವುದೆಂಬುದನ್ನು ಪ್ರತಿಯೊಬ್ಬ ರಾಜಕಾರಣಿಯೂ ಅಂದಿನಿಂದ ಇಂದಿನವರೆಗೆ ಎನ್ನುತ್ತಿದ್ದಾನೆ. ಆದರೂ ನಮ್ಮ ಈ ಧುರೀಣರಿಗೆ ಬಳ್ಳಾರಿಯ ವಿಭಾಗ ಕೇಳಕರರ ಉಪಕಾರವೆಂದು ಕಂಡಿದೆ. ಆಶ್ಚರ್ಯ.

'ಸಹ್ಯಾದ್ರಿ' ಮಾಸಪತ್ರಿಕೆ ತೆಗೆದೂ ಕನ್ನಡಿಗರಿಗೆ ಉಪಕಾರ ಮಾಡಿದರಂತೆ. ಇದೊಂದು ದೊಡ್ಡ ಸಂಶೋಧನ. ಅದೇ 'ಸಹ್ಯಾದ್ರಿ' ದಿವಂಗತ ಕಡಪಾ, ಶ್ರೀ. ಅಲೂರ ಮೊದಲಾದ ಕನ್ನಡ ಧುರೀಣರ ಮೇಲೆ ಸಲ್ಲದ ಆರೋಪ ಹೊರಿಸಿದ ಲೇಖನಗಳನ್ನು ಪ್ರಕಟಮಾಡಿ, ಅಖಿಲ ಮಹಾರಾಷ್ಟ್ರದಲ್ಲಿ ಕನ್ನಡಿಗರ ಹೆಸರನ್ನು ಕೆಡಿಸಿದುದು ರಾಯರಿಗೆ ಗೊತ್ತಿದೆಯೇನು?

ಕರ್ನಾಟಕಕ್ಕೆ ಸಂಬಂಧಿಸಿದ ಲೇಖನಗಳನ್ನು 'ಸಹ್ಯಾದ್ರಿ' ಪ್ರಕಟಿಸಿತಂತೆ. ನಮ್ಮಲ್ಲಿಯ ಯಾವ ಪತ್ರಿಕೆ ಮಹಾರಾಷ್ಟ್ರಕ್ಕೆ ಸಂಬಂಧಿಸಿದ ಲೇಖನಗಳನ್ನೂ ಪ್ರಕಟಿಸುವುದಿಲ್ಲ? ಅದೊಂದು ವ್ಯವಹಾರ. ಏನಾದರೂ ಪತ್ರಿಕೆಯ ವೈಶಿಷ್ಟ್ಯ ತೋರಿಸಬೇಕೆನ್ನುವವರು ಇಂತಹುದನ್ನೆಲ್ಲ ಮಾಡಲೇ ಬೇಕಾಗುವುದು. ಮರಾಟಿ ಬಲ್ಲ ಕನ್ನಡಿಗರಲ್ಲಿ ಈ ಪತ್ರಿಕೆ ಪ್ರಚಾರವಾಗಬೇಕಾದರೆ, ಇಂತಹ ಯೋಜನೆಗಳು ಪ್ರಯೋಜನಕಾರಿಯಾಗುವುವು. ಸೈಸೂರ ಸ್ಕಾಂಡಲ್ ಸೋಸಿನ ಜಾಹೀರಾತು ಮಹಾರಾಷ್ಟ್ರದ ಪತ್ರಿಕೆಗಳಲ್ಲಿ ಪ್ರಕಟವಾಗುವುದು. ಮಹಾರಾಷ್ಟ್ರದ ಆಯುರ್ವೇದಾಶ್ರಮ ಫಾರ್ಮಸಿಯ ಜಾಹೀರಾತು ಕನ್ನಡಪತ್ರಿಕೆಗಳಲ್ಲಿ ಪ್ರಕಟವಾಗುವುದು. ಈ ಪರಸ್ಪರ ವ್ಯವಹಾರ ಉಪಕಾರವೆನಿಸಬಹುದೇನು?

ಲೋಕಮಾನ್ಯ ಟಿಳಕ ಟ್ರಸ್ಟ್ ಫಂಡಿನಿಂದ ಕರ್ನಾಟಕಕ್ಕೆ ೨೫೦೦೦ ರೂಪಾಯಿ ದೊರೆತುದಕ್ಕೂ ಕೇಳಕರರು ಕಾರಣರಂತೆ. ಕರ್ನಾಟಕವು ಲೋಕಮಾನ್ಯರಿಗೆ ಏನೂ ಕೊಡದೆ ಇದ್ದರೆ, ಈ ಹಣ ಕೇವಲ ಕೇಳಕರರ ದಯಾಬುದ್ಧಿಯಿಂದ ಕರ್ನಾಟಕಕ್ಕೇನೂ ಸಿಕ್ಕುತ್ತಿರಲಿಲ್ಲ.

ಕೂಡಿಸಲಿರುವ ಸ್ಮಾರಕನಿಧಿಯ ಹಣದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಸಾಂಗಲಿಯಲ್ಲಿ ಸ್ಥಾಪಿತವಾದ ಎಂಜಿನಿಯರಿಂಗ್ ಕಾಲೇಜಿಗೆ ಕೊಡಲಾಗುವುದಂತೆ; ಇದರಿಂದ ಕನ್ನಡ ಹುಡುಗರಿಗೂ ಉಪಯೋಗವಾಗುವುದಂತೆ.

ನಗೆಬರುವ ಮಾತಿದು. ಮೇಲಧಿಕಾರಿಗಳ ಪಕ್ಷಪಾತದ ಮೂಲಕ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಸರಿಯಾದ ಅವಕಾಶ ಸಿಕ್ಕದಿರುವಾಗ, ಸಂಪೂರ್ಣ ಮಹಾರಾಷ್ಟ್ರೀಯರ ಅಧಿಪತ್ಯದಲ್ಲಿರುವ ಸಾಂಗಲಿಯ ಕಾಲೇಜಿನಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಅವಕಾಶ ಸಿಕ್ಕುವುದೆ? ಕರ್ನಾಟಕದ ಪರಿಸ್ಥಿತಿಯ ಕಲ್ಪನೆ ಈ ಸ್ವಪ್ನದ ಸಿಂಹಕ್ಕಿದೆಯೆ?

ಇದೆಲ್ಲ ಹೋಗಲಿ, ಈ ಸ್ಮಾರಕನಿಧಿಗೆ ಕನ್ನಡಿಗರು ಕಾಣಿಕೆ ಕೊಡಲೇ ಬೇಕೆಂದಾದರೆ, ಅದರ ಉಪಯೋಗ ಕನ್ನಡನಾಡಿಗೆ ಯಾವುದಾದರೂ ರೀತಿಯಲ್ಲಿ ಪ್ರತ್ಯಕ್ಷವಾಗಿ ಆಗಬೇಕೆಂದು ವಿಚಾರ ಮಾಡಿ ಕೊಡಲಿ. ಸುಮ್ಮ ಸುಮ್ಮನೆ ಬಡವರ ಕೈಯ ಕವಳವನ್ನು ಹೊಟ್ಟೆತುಂಬಿದವರ ತಟ್ಟೆಯಲ್ಲಿ ಒಯ್ದು ಚೆಲ್ಲುವ ಈ ಆತ್ಮಘಾತಕ ವೃತ್ತಿಗೆ ತಡೆಯೊಡ್ಡಲಿ!

ಕನ್ನಡಿಗರೆ, ಇಂತಹ ಮುಂದಾಳುಗಳ ಕೈಯಿಂದ ನಿಮಗೆಂದು ಬಿಡುಗಡೆ?

—ಸಂಪಾದಕರು

ನುಂಗಣ್ಣನ ನಿಧಿಯ ಬೇಡಿಕೆ

'ಕರ್ನಾಟಕ ಸಿಂಹ' ಗಂಗಣ್ಣನವರು ಮಹಾರಾಷ್ಟ್ರದ ಮಹಾಮನೆ ಕಟ್ಟಲು ಹಣಕೊಡಿರೆಂದು ಕನ್ನಡಿಗರಿಗೆ ಬೋಧಿಸುತ್ತಿರುವಂತೆ, 'ಕರ್ನಾಟಕ ರತ್ನೋತ್ಸವ' ನುಂಗಣ್ಣನವರೂ ಕನ್ನಡಿಗರನ್ನು ಕುರಿತು ಒಂದು ಪ್ರಕಟನೆಯನ್ನು ತೆಗೆದು, ಪಾಕಿಸ್ತಾನದ ಸೆಕ್ರೆಟರಿಯೇಟ್ ಕಟ್ಟಡಕ್ಕಾಗಿ ಹಣ ಕೂಡಿಸಿಕೊಡಿರೆಂದು ಕೇಳಲಿದ್ದಾರಂತೆ. ಪ್ರಕಟನೆಯಲ್ಲಿ ಬರೆದ ವಿಷಯ ಹೀಗಿದೆಯಂತೆ :

'ಕನ್ನಡ ಬಂಧುಗಳೆ, ನುಂಬಯಿಯಿಂದಲೇ ಆದ ಜಿನ್ನಾಸಾಹೇಬರು ಪಾಕಿಸ್ತಾನ ರಾಷ್ಟ್ರ ಹೊಸತಾಗಿ ಸ್ಥಾಪಿಸಿ, ಕೈಯಲ್ಲಿ ಕಾಸಿಲ್ಲದೆ ವೇಚಾಡುತ್ತಿದ್ದಾರೆ. ಅವರಿಗೀಗ ಸೆಕ್ರೆಟರಿಯೇಟ್ ಕಟ್ಟಡ ಕಟ್ಟಸಲಿಕ್ಕೆ ಹಣ ಬೇಕಾಗಿದೆ. ಜಿನ್ನಾಸಾಹೇಬರು ನುಂಬಯಿಯವರೇ ಎಂಬುದನ್ನು ಮರೆಯಬೇಡಿರಿ. ಮುಂಬಯಿ ಇಲಾಖೆಗೆ ಕರ್ನಾಟಕದ ಸಂಬಂಧವೂ ಇದೆಯೆಂಬುದನ್ನು ನೆನಪಿನಲ್ಲಿಡಿರಿ. ಕರ್ನಾಟಕ ಕ್ಷತ್ರಿಯರೂ ಮುಸಲ್ಮಾನರಿದ್ದಾರೆ. ಪಾಕಿಸ್ತಾನ ಮುಸಲ್ಮಾನರ ರಾಷ್ಟ್ರ! ಅದುವರಿಂದ ಪಾಕಿಸ್ತಾನಕ್ಕೆ—ಕನ್ನಡಿಗರೇ— ಉದಾರಾಶ್ರಯ ಕೊಡಿರಿ!"

ನುಂಗಣ್ಣನವರೇ ಈ ನಿಧಿಸಮಿತಿಗೆ ಅಧ್ಯಕ್ಷರಾಗಿದ್ದಾರೆ. ಗಂಗಣ್ಣನವರಿಗೆ ದೊರೆತ ೫-೬ ಸಾವಿರ ರೂಪಾಯಿಗಳ ಪ್ರಾವಿಜಿನಂತೆ ಈ ನುಂಗಣ್ಣನವರಿಗೂ ಕೊಡುಗೈಯ ಕನ್ನಡಿಗರ ಪ್ರತಿಮಾದು ದೊರೆತಿದೆಯಂತೆ.

ಕರ್ನಾಟಕ ಮಾತಾಕೀ ಜಯ್,
ನಮ್ಮ ವರ ಕುತಿಗೀ ನಾವೇ ಕೊಯ್!

* * *

ವಿಕೇಂದ್ರೀಕರಣಕ್ಕೊಂದು ಸುಲಭ ದಾರಿ.

ಕನ್ನಡನಾಡಿನಿಂದ ಫುಟ್ಬಾ ಸಮಿತಿಗೆ ಹೋದ ಮಂತ್ರಿಯರು ಕರ್ನಾಟಕ ವಿಕೇಂದ್ರೀಕರಣದ ವಿಚಾರವಾಗಿ, ತಾವಿದ್ದ ಸ್ಥಾನಬಲದಿಂದ ಏತಕ್ಕೆ ಗಟ್ಟಿ ಮಾತ್ಕಾಗಿ ಮಾತನಾಡಬಾರದೆಂದು ಅನೇಕರು ಕುತೂಹಲದಿಂದ ಬೀರಣ್ಣನನ್ನು ಕೇಳುತ್ತಾರೆ. ಆದರೆ ಬೀರಣ್ಣನಿಗೆ ಅವರ ಸ್ಥಾನಬಲದ ಮೇಲೆಯೆ ಭರವಸೆಯಿಲ್ಲದಂತಾಗಿದೆ. ಸೂತ್ರ-ತಂತಿಗಳಿಸಿದಂತೆ ಕುಣಿಯುವ ಬೊಂಬೆಗಳನ್ನೂ, ಇನ್ನೊಬ್ಬರು ಹೇಳಿದಂದೆನ್ನೆ ಹಾಡುವ ಗ್ರಾಮೋಫೋನುಗಳನ್ನೂ ಯಾವ ಸ್ಥಾನದಲ್ಲಿ ಇರಿಸಿದರೆ ಏನು ಬಲ ಬಂದೀತು?—ಎಂದು ಬೀರಣ್ಣನ ಸವಾಲು. ಸಾಲದುದಕ್ಕೆ ಒಬ್ಬೊಬ್ಬ ಸದಸ್ಯನೂ ೩-೪ ಸಮಿತಿಗಳ ಸದಸ್ಯನಾಗಿದ್ದುಕೊಂಡು, ಸಹಿ ಮಾಡಲಿಕ್ಕೂ ಹಣ ಎಣಿಸಿಕೊಳ್ಳಲಿಕ್ಕೂ ಅವಕಾಶ ಸಿಕ್ಕದೆ ವೇಚಾಡುತ್ತಿದ್ದಾನೆ. ಇಂತಹ ವೇಚಾಟದ ಸಂಭ್ರಮದಲ್ಲಿ ಎಲ್ಲರೂ ಕರ್ನಾಟಕವನ್ನಷ್ಟೇ ಏಕೆ-ತಮ್ಮ ಮೈಯನ್ನೆ ತಾವು ಮರೆತಿದ್ದಾರೆ. ಈ ಮರೆತ ಮೈಯಿಂದ ಹತ್ತಿರದ್ದವರು ಬೇಕಾದ ಕೆಲಸ ಮಾಡಿಸಿಕೊಳ್ಳಬಹುದಾಗಿದೆ. ಕನ್ನಡಿಗರಿಗೆ ಬೀರಣ್ಣನದೊಂದು ಸೂಚನೆ: ನಮ್ಮ ಸದಸ್ಯರಿಗೆ ಕರ್ನಾಟಕ ವಿಕೇಂದ್ರೀಕರಣದ ನೆನಪು ಉಳಿಯಬೇಕಾದರೆ, ಅವರನ್ನು ದಿಲ್ಲಿಗೆ ಹೋಗಲಿಕ್ಕೆ ಬಿಡಬೇಡಿರಿ. ಇಲ್ಲಿಯೆ ಇದ್ದು ಕೆಂಜೋಳದ ರೊಟ್ಟಿ, ಕುದುರೆಲ ಅಕ್ಕಿಯ ಅನ್ನ ತಿನ್ನಲಿಕ್ಕೆ ಹಚ್ಚಿರಿ!

ಭೋಗಕ್ಕೆ ಮನಸೋತು ವಿಕಟವಿಟಗಣದಂತೆ ಆಗಿರುವರಿವರು ನೋಡು!

* * *

ದೇವರಿಗೆ ಗೋವೆಯ ಮೇಲೆ ಕಣ್ಣು.

'ಮದಿಯಲ್ಲಿ ಹುಟ್ಟಿದುವೆಲ್ಲ ಕಸಬರಿಗೆಯೇ' ಎಂಬುದು ಬೀರಣ್ಣ ಕಂಡುಂಡ ಮಾತು. ಅದರಂತೆಯೇ 'ಕಸಬರಿಗೆ ಕೈಲಾಸಕ್ಕೆ ಹೋದರೂ ಉಡುಗುವ ಕೆಲಸ ತಪ್ಪುವಿಲ್ಲ' ಎಂಬುದು ಕೇಳಿದ ಮಾತು. ಏಕೆಂದರೆ ಬೀರಣ್ಣ ಇನ್ನೂ ಕೈಲಾಸ ಕಂಡಿಲ್ಲ. ಅಲ್ಲಿದೆ ಅಲ್ಲಿಯೂ ಕಸ-ಮುಸುರೆ ಬೀಳುವುದೇ ನಿಜವಿದ್ದರೆ, ಕೈಲಾಸಕ್ಕಾದರೂ ಯಾತಕ್ಕೆ ಹೋಗಬೇಕು.. ಇದ್ದಲ್ಲಿಯೆ ಉಡುಗಿಕೊಂಡು ಇದ್ದರಾಯಿತಲ್ಲ ಎಂಬುದು ಅವನ ಆಶೆ..! ಸರಿ, ಏನೋ ಹೇಳಲು ಹೊರಟು ಏನೇನೋ ಹೇಳಕೊಡಗಿದೆ, ಕ್ಷಮಿಸಿ.

ಮುರಾಟಗರು ಎಲ್ಲಿ ಇದ್ದರೂ ಎಲ್ಲರಿಗೂ ಅಕ್ಕರವಣದ ಆಶೆ ತಪ್ಪಿದ್ದಲ್ಲ. ಜನರು ದೇವರಾದರೆ ಏನಾಯಿತು? ಪ್ರವೃತ್ತಿ ಸತ್ಯಾಗ್ರಹಿಯಾದಾದರೆ ಏನಾಯಿತು? ಭಾರತ ರಾಷ್ಟ್ರೀಯ ಸಭೆಯ ಕಾರ್ಯಕರ್ತರಿಯಾದರೆ ಏನಾಯಿತು? ಮಹಾತ್ಮಾ ಗಾಂಧಿಯವರಂತೆಯೆ ಬರಿಮೈಯಿಂದಿದ್ದರೇನಾಯಿತು? ಶ್ರೀಮಾನ್ ದೇವರುಕರರಾಯರು ಮುರಾಟಗರು. ಪುಟ್ಟಿ ಗಾಣ ೪೪೪೪ ವರೆಗೂ ಹೋಗುವುದಿಲ್ಲವಂತೆ. ಗೋವೆಯ ಸೊಗಸು- ಸೌಂದರ್ಯಗಳನ್ನು ಕಂಡು ಮನಸೋತ ಈ ಮಹನೀಯರು, ಗೋವೆಯ ಮೇಲೆ ಮುರಾಟಗರ ಮುದ್ರೆಯನ್ನು ಒತ್ತಲಿಕ್ಕೆಸಿದ್ದರಾಗಿದ್ದಾರೆ. ಗೋವೆಯ ಇತಿಹಾಸ, ಸಂಸ್ಕೃತಿಗಳ ಆದರ ಮಹಾರಾಷ್ಟ್ರತ್ವವನ್ನೇ ಸಿದ್ಧಗೊಳಿಸುತ್ತಿವೆಯಂತೆ. ಇತಿಹಾಸದ ಸ್ವಾಭಿಮಾನ ಅಭ್ಯಾಸವಾದರೂ ಇವರಿಗೆ ಇದೆಯೇ ಎಂದು ಬೀರಣ್ಣನಿಗೆ ಸಂಶಯ. ಆದರೆ 'ಸುಲಿದುಕೊಳ್ಳಲಿಕ್ಕೆ ನಿಂತವರಿಗೆ ಸಂಸ್ಕೃತಿಯ ವಿಚಾರವೆಲ್ಲಿಯದು?' ಎಂಬ ಅನುಭವ ಆತನ ಸಂದಯುವನ್ನು ಸಂತೈಸತೊಡಗಿದೆ.

ದೇವದೇವನೇ ದಾನವನಾತ್ಮನೇ,
ಸೋಯಬೇಡೆಲ್ಲೆ, ಗೋವೆಗಾಗಿ ನೀ!

* * *

ವಾರ್ತಾವಿಕಾರ

ಪಾಕಿಸ್ತಾನದಲ್ಲಿ ನಿಜವಾದ ಪ್ರಜಾಧಿಪತ್ಯವಿದೆಯಂತೆ. ಏಕೆಂದರೆ, ಅಲ್ಲಿಯ ಪ್ರತಿಯೊಬ್ಬನೂ ಪಾಕಿಸ್ತಾನದ ಅಧಿಪತಿ ತಾನೇ ಎಂದು ತಿಳಿದುಕೊಂಡು ನಡೆಯುತ್ತಿದ್ದಾನಂತೆ.

* * *

ಕಾಶ್ಮೀರ ದಾಳಿಗಾರರೆಲ್ಲ ಮಾಯವಾವಿದ್ಯೆ ನವಿಸಿರುವರಂತೆ. ಭಾರತೀಯ ಸೈನಿಕರ ಕೈಗೆ ಸಿಕ್ಕಿದ ಆ ದಾಳಿಗಾರರೆಲ್ಲ ತಮ್ಮ ಮಾಟಗಾರಿಕೆಯಿಂದ ಪಾಕಿಸ್ತಾನ್ ಸೈನಿಕರಾಗಿ ಪರಿಣಮಿಸುತ್ತಿದ್ದಾರಂತೆ.

* * *

ಪಾಕಿಸ್ತಾನದಲ್ಲಿ ಪೋಲೀಸಪಡೆಯ ಸಂರಕ್ಷಣೆಗಾಗಿ, ಪೋ-ಪೋಲೀಸಪಡೆಯೊಂದನ್ನು ನಿರ್ಮಿಸಲಿದ್ದಾರಂತೆ.

ಸಾದರ ಸ್ವೀಕಾರ

★

೧೩೧. ಸಹ್ಯಾದ್ರಿ (ಜೀವನ ಚಿತ್ರ ಸಂಕಲನ) ಬರೆದವರು: ಶ್ರೀ. ವಿ ಜಿ. ಭಟ್ಟ, ಎಂ. ಎ. ಧಾರವಾಡ. ಗೋಕರ್ಣದ 'ಪರ್ಣಕುಟಿ' ಗ್ರಂಥಮಾಲೆಯ ಪರವಾಗಿ ಶ್ರೀ. ಮ. ಗ. ಸೆಟ್ಟಿ, ಅಂಕೋಲಾ ಅವರು ಪ್ರಕಾಶಕರು. ಕ್ರಾ. ಅ. ೧೮೦ ಪುಟಗಳು, ಬೆಲೆ ೧—೪—೦.

೧೩೨. ಸರದಾರ ಬಾಪು ಗೋಖಲೆ (ಜೀವನ ಚರಿತ್ರ) ಬರೆದವರು: ಶ್ರೀ. ಗೋ. ವೆಂ. ಚುಳಕಿ ಧಾರವಾಡ ಅವರು. ಪ್ರಕಾಶಕರು: ಸ್ವಾತಂತ್ರ್ಯಪ್ರಕಾಶನ, ಧಾರವಾಡ. ಫೂ. ಕ್ಯಾ. ಸಹಿತ ೯೦ ಪುಟಗಳು. ಬೆಲೆ ೦—೧೪—೦.

೧೩೩. ತರುಣಭಾರತ (ಮರಾಠಿ ವಾರಪತ್ರಿಕೆಯ ದೀಪಾವಳಿ ಸಂಚಿಕೆ). ಸಂಪಾದಕರು: ಶ್ರೀ. ಬಾಬೂರಾವ್ ಠಾಕೂರ್, ತರುಣಭಾರತ ಕಾರ್ಯಾಲಯ, ಬೆಳಗಾಂವಿ. ಕ್ರಾ. ಸಹಿತ ೭೫ ಪುಟಗಳು. ಬೆಲೆ ೦—೧೫—೦.

೧೩೪. ಗದಗ-ಶಹಪೂರ ಪೇಟೆಯ ಶ್ರೀಬಸವರಾಜ ವಾಚನಾಲಯದ ೧೯೪೬-೧೯೪೭ರ ವಾರ್ಷಿಕ ವರದಿ. ಫೂ. ಸಹಿತ ೮ ಪುಟಗಳು.

೧೩೫. ಒಗ್ಗರಣೆ (ವಿನೋದ ಪ್ರಬಂಧಗಳು). ಬರೆದವರು: ಶ್ರೀ ಎಸ್. ಆರ್. ಚಂದ್ರ ಮಂಗಳೂರು. ಪ್ರಕಾಶಕರು: ಬಾಲಸಾಹಿತ್ಯಮಂಡಲಿ ಲಿಮಿಟೆಡ್, ಕೊಡಿಯಾಲ ಬಯಲು—ಮಂಗಳೂರು. ಕ್ರಾ. ಅ. ೮೮ ಪುಟಗಳು. ಬೆಲೆ ೧—೮—೦.

೧೩೬. ರಾಯರ ಕತೆಗಳು (ವ್ಯಂಗ್ಯ ರೀತಿಯ ವ್ಯಕ್ತಿ ಚಿತ್ರ). ಬರೆದವರು: ಶ್ರೀ. ಎನ್. ಸೂರಪ್ಪ, ಚಿತ್ರದುರ್ಗ. ಪ್ರಕಾಶಕರು: ಪ್ರಭಾತಸಾಹಿತ್ಯ, ಮಲ್ಲೇಶ್ವರಂ—ಬೆಂಗಳೂರು. ಕ್ರಾ. ಅ. ೧೧೦ ಪುಟಗಳು. ಬೆಲೆ ೧—೦—೦.

೧೩೭. ಕಲ್ಯಾಣಕಾಂತಿ (ಕವನಸಂಗ್ರಹ). ಲೇಖಕರು: ಶ್ರೀ. ಗಂಗಪ್ಪ ನಾಲಿ, ಹುಬ್ಬಳ್ಳಿ. ಪ್ರಕಾಶಕರು: ಶ್ರೀ. ಬಿ. ಜಿ. ಸಂಕೇಶ್ವರ, ಶ್ರೀಸರಸ್ವತೀ ಪುಸ್ತಕ ಭಾಂಡಾರ, ಗದಗ. ಫೂ. ಕ್ಯಾ. ಅ. ೧೦೦ ಪುಟಗಳು. ಬೆಲೆ ೧—೦—೦.

೧೩೮. ಯುಗಪುರುಷ (ಹೊಸ ಮಾಸಪತ್ರಿಕೆ). ಪ್ರಧಾನ ಸಂಪಾದಕರು: ಶ್ರೀಮಾನ್ ಬನ್ನಂಜೆ ರಾಮಾಚಾರ್ಯರು. ಪ್ರಕಾಶಕರು: ಶ್ರೀ. ಕೆ. ಎ. ಉಡುಪ, ಯುಗಪುರುಷ ಕಾರ್ಯಾಲಯ ಉಡುಪಿ. ಕ್ರಾ. ಸಹಿತ ೨೮ ಪುಟಗಳು. ವಾ. ಚಂ. ೩ ರೂ. ಬಿಡಿಸಂಚಿಕೆಗೆ ೦—೪—೦.

ಸಂಪಾದಕರಾದ ಶ್ರೀಮಾನ್ ಬನ್ನಂಜೆ ರಾಮಾಚಾರ್ಯರು ಕನ್ನಡದಲ್ಲಿ ಆದರ್ಶವಾದ ಮಾಸಪತ್ರಿಕೆಯನ್ನು ಹೊರಡಿಸಬೇಕೆಂಬ ಹಂಬಲವನ್ನಿರಿಸಿಕೊಂಡು ಬಲುದಿನದಿಂದಲೂ ಪ್ರಯತ್ನಿಸುತ್ತಿರುವವರು. ಈಗ ಸ್ವತಂತ್ರವಾಗಿ 'ಯುಗಪುರುಷ'ನನ್ನು ಹೊರಡಿಸತೊಡಗಿದ್ದಾರೆ. ಸಂಪಾದಕರ ಆಶಯಂತೆ ಈ ಪತ್ರಿಕೆ ಆದರ್ಶ ಪತ್ರಿಕೆಯಾಗಲಿ; ಕನ್ನಡಿಗರೆಲ್ಲರ ಆದರಕ್ಕೆ ಪಾತ್ರವಾಗಲಿ!

೧೩೯. ಮರೀಚಿಕೆ (ಚಿಕ್ಕ ಕಾದಂಬರಿ) ಬರೆದವರು: 'ಧನ್ವಂತ' ಬೆಂಗಳೂರು. ಪ್ರಕಾಶಕರು: ಮೆ. ಎಜ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ—ಬೆಂಗಳೂರು ನಗರ. ಕ್ರಾ. ಅ. ೭೪ ಪುಟಗಳು. ಬೆಲೆ ೧—೦—೦.

೧೪೦. ವಿಷ್ಣುವಿನ ದಶಾವತಾರಕಥೆಗಳು ಅರ್ಥಾತ್ ದಶಾವತಾರಗಳು (ವಿಜಂಬನಾತ್ಮಕ ಗ್ರಂಥ). ಬರೆದವರು: 'ವಿ ಹೆ' ಉಡುಪಿ. ಉಡುಪಿಯ ಕಿರಿಯರ ಪ್ರಪಂಚದ ತೊದಲ್ನುಡಿ ಗ್ರಂಥಮಾಲೆಯ ೨೪ನೆಯ ನುಡಿ. ಕ್ರಾ. ಅ. ೭೪ ಪುಟಗಳು. ಬೆಲೆ ೦—೧೫—೦.

೧೪೧. ಜೀವನಸಂಗ್ರಾಮ (ಸಾಮಾಜಿಕ ನಾಟಕ) ಬರೆದವರು: ಶ್ರೀ ಪಿ. ಶೇಷಸೆಟ್ಟಿ. ಮೇಲಿನ ಗ್ರಂಥಮಾಲೆಯ ೭೭ನೆಯ ನುಡಿ. ಕ್ರಾ. ಅ. ೧೭೦ ಪುಟ. ಬೆಲೆ ೧—೮—೦.

೧೪೨. ಕವಿತಾಕಾಮಿನಿ (ಕವನಸಂಗ್ರಹ). ಲೇಖಕರು: ಶ್ರೀ. ಯಸ್. ವೆಂಕಟರಾಜ. ಇದು ತೊದಲ್ನುಡಿ ಗ್ರಂಥಮಾಲೆಯ ೬೯ನೆಯ ನುಡಿ. ಕ್ರಾ. ಅ. ೧೭೪ ಪುಟಗಳು. ಬೆಲೆ ೩—೦—೦.

೧೪೩. ದೇವಗಾನ (ಕಥಾಸಂಗ್ರಹ). ಬರೆದವರು: ಶ್ರೀಮತಿ ಸೌ. ರತ್ನಾ ಅವರು. ಹುಬ್ಬಳ್ಳಿಯ ಸಂಜೀವಿನೀ ಪ್ರಕಾಶನದ ೫ನೆಯ ಗ್ರಂಥ ಕ್ರಾ. ಅ ೧೦೪ ಪುಟಗಳು. ಬೆಲೆ ೧—೮—೦.

೧೪೪. ಸುವರ್ಣಕೀಟ (ಮೂರು ಅನುವಾದಿತ ಕತೆಗಳು). ಮೂಲ ಇಂಗ್ಲಿಷ್ ಲೇಖಕರು: ಎಡ್ಗಾರ್ ಅಲೆನ್ ಪೋ. ಅನುವಾದಕರು: ಶ್ರೀ. ಎಂ. ಗೋಪಾಲಕೃಷ್ಣ ಅಡಿಗ, ಮೈಸೂರು. ಮೈಸೂರಿನ ವಿಶ್ವಸಾಹಿತ್ಯಮಾಲೆಯ ೩ನೆಯ ಗ್ರಂಥ. ಕ್ರಾ. ಅ ೯೩ ಪುಟಗಳು. ಬೆಲೆ ೦—೧೫—೦.

೧೪೫. ಕಲಾವಿದ (ಹೊಸ ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು: ಶ್ರೀಮಾನ್ ಎಂ. ಎಸ್. ಸೆಟ್ಟಿ ಅವರು. ಕಲಾವಿದ ಆಫೀಸ್, ಫಲ್ಗುಣಿ ರೋಡ್, ಮಂಗಳೂರು. ವಾ. ಚಂ. ೫—೦—೦. ಬಿಡಿಸಂಚಿಕೆಗೆ ೦—೮—೦.

ದಕ್ಷಿಣಕನ್ನಡ ಜಿಲ್ಲೆಯ ಮಾಸಪತ್ರಿಕೆಗಳ ಹೊಸಸುಗ್ಗಿಯಲ್ಲಿ ಮೊಗವೆತ್ತಿದ ಇನ್ನೊಂದು ಪತ್ರಿಕೆಯಿದು. ಲಲಿತಕಲಾ ವಿಚಾರವನ್ನೇ ಗುರಿಯಾಗಿಟ್ಟುಕೊಂಡು ಹೊರಟಿದೆ. ಇಂತಹ ಪತ್ರಿಕೆಯ ಅವಶ್ಯಕತೆ ಇದೆ; ಬದುಕಿ ಕನ್ನಡ ಲಲಿತಕಲೆಗಳ ಉನ್ನತಿಗಾಗಿ ಬಹುಕಾಲ ದುಡಿಯುತ್ತಿರಲಿ.

೧೪೬. ಶ್ರೀಕೈವಲ್ಯಾಶ್ರಮ (ಜೋಕೆ) ಸ್ವಾಮಿಗಳ ಜೀವನ ಚರಿತ್ರ (ಸಚಿತ್ರ). ಲೇಖಕರು: ಶ್ರೀ. ಕುಲಕರ್ಣಿ

(ಕವರಿನ ೩ನೆಯ ಪುಟ ನೋಡಿರಿ)

ಮಾತನಾಡುವ ಕಲ್ಲು

(ಒಂದು ಜಾನಪದ ಕತೆ)

' ಆನಂದ ಕಂದ '

★

ಹೊಲೆಯರ ಹನುಮಪ್ಪ ನಮ್ಮ ಜನತೆಯ ಸಂಸ್ಕೃತಿಯ ಸೃಷ್ಟಿ. ನಮ್ಮ ಜನರ ಶ್ರದ್ಧೆ-ನಿಷ್ಠೆ-ಸತ್ಯಪ್ರೀತಿಗಳು ಕಲ್ಲಿನಲ್ಲಿಯೂ ದೇವತ್ವವನ್ನು ತುಂಬಿದುವು; ಶೂನ್ಯದಲ್ಲಿಯೂ ಸೃಷ್ಟಿಯ ಲೀಲೆಯನ್ನು ಆಡಿದುವು.

★

೧

ನಮ್ಮ ಕನ್ನಡನಾಡಿನಲ್ಲಿ ಮಾತನಾಡುವ ಕಲ್ಲುಗಳು ಬಹಳ. ವೀರಗಲ್ಲು, ಮಾಸ್ತಿಕಲ್ಲು, ನಿಷಿಧಿಗಲ್ಲು ಇವೆಲ್ಲ ನಮ್ಮ ವೀರರ-ಮಾನಿನಿಯರ-ಸಾಧು-ಸಂತರ ಮಾಹಾತ್ಮ್ಯವನ್ನು ಹೇಳಿ ನಮಗೆ ಹೆಮ್ಮೆಯನ್ನು ಹುಟ್ಟಿಸುವುವಾದರೆ, ಬರಿಹದ ಕಲ್ಲುಗಳು ನಮ್ಮ ಪೂರ್ವಜರ ವೀರ-ವೈಭವ-ಸಂಸ್ಕೃತಿಗಳ ಮೇಲ್ಮೆಯನ್ನು ಸಾರುತ್ತಿರುವುವು. ಇವುಗಳನ್ನು ಬಿಡಿರ; ನಮ್ಮ ನಾಡಿನ ಪ್ರತಿಯೊಂದು ಊರ ಆಗಸೆಯ ಮುಂದಿರುವ 'ಬೋರ್‌ಗಲ್ಲು (ಗೋರ್ಕಲ್ಲು)'ಗಳೂ ತಮ್ಮ ಅಡಿಯಲ್ಲಿ ಒಂದೊಂದು ಕತೆಯನ್ನು ಅಡಗಿಸಿಕೊಂಡು ಕುಳಿತಿರುವುವು. ರಾಮಾಯಣ-ಮಹಾಭಾರತಗಳ ಕತೆಗಳನ್ನು ಹೇಳುವ ಕಲ್ಲುಗಳಂತೂ, ನಮ್ಮಲ್ಲಿ ನೋಡಿದಲ್ಲೆಲ್ಲ ಸಿಕ್ಕುವವು.

ನಾನೀಗ ಹೇಳಬೇಕೆಂದಿರುವ ಮಾತನಾಡುವ ಕಲ್ಲಿನ ವಿಷಯ ಈ ಜಾತಿಗಳಿಗೆ ಸೇರಿದುದಲ್ಲ. ಅದು ಹೇಳುವ ಕತೆ, ಘೋಧಿಸುವ ತತ್ತ್ವ ಇವೆಲ್ಲ ಒಂದು ವೈಶಿಷ್ಟ್ಯದಿಂದ ಕೂಡಿವೆ. ಸಂಪ್ರಾಯ ಶರಣರಿಗೆಲ್ಲ ಮಾನವತೆಯ ತಿರುಳನ್ನು ತಿಳುಹುವಂತಿವೆ.

ಬೆಳಗಾಂವಿ ಜಿಲ್ಲೆಯ ಗೋಕಾಂವಿ ನಾಡು. ಅಲ್ಲಿ ನಮ್ಮ ಬಂಧುಗಳೊಬ್ಬರು ಇರುವ ಹಳ್ಳಿಯಿಂದ ಗೋಕಾಂವಿಗೆ ಹೋಗುವ ಹೆದ್ದಾರಿಯ ಪಕ್ಕದಲ್ಲಿ, ಈ ಮಾತನಾಡುವ ಕಲ್ಲು ನಿಂತುಕೊಂಡಿದೆ. ದಾರಿ ಗುಡ್ಡದ ಓರಗುಂಟ ದೂರದ ವರೆಗೆ ಸಾಗಿದೆ. ಹಳ್ಳಿಯನ್ನು ಬಿಟ್ಟು ಒಂದೆರಡು ಮೈಲಿ ನಡೆದರೆ, ನಾವು ಈ ಕಲ್ಲನ್ನು ಕಾಣುತ್ತೇವೆ. ದಾರಿಯ ಎಡ-

* ಜ. ೧೦-೧೧-೪೭ನೆಯ ದಿನ ಮುಂಬಯಿ ಬಾನುಲಿಯಿಂದ ಹೇಳಿದ ಕತೆಯಿದು. —ಸಂ ಜ.

ಪಕ್ಕದಲ್ಲಿ ಕಡಿದಾದ ಗುಡ್ಡದ ಸಾಲು. ಗುಡ್ಡದ ಕೋಡಿನ ಮೇಲೆ, ಕೋಟೆ ಕಟ್ಟಿದಂತೆ ಕಾಣುವ ಬಂಡೆಗಳ ಬಳಗ. ಈ ಬಳಗದೊಳಗಿಂದಲೆ ಎಂದೊ ಏನೊ-ಆಧಾರ ತಪ್ಪಿ-ನೆಲಕ್ಕೆ ಉರುಳಿದೆ ಒಂದು ಬಂಡೆ. ಹತ್ತಾರು ಆನೆಗಳನ್ನು ಹಚ್ಚಿ ಎಳೆಯಿಸಿದರೂ ಕದಲಲಾರದಂತಹ ಅಚಲಸ್ಥಿತಿಯದು. ಆ ಪ್ರದೇಶದಲ್ಲಿಯ ಜನರೆಲ್ಲರೂ ಅದನ್ನು 'ಸಾಕ್ಷಿಯ ಫಡಿ (ಕಲ್ಲು)' ಎಂದು ಕರೆಯುವರು. ಆ ಕಲ್ಲು ತನ್ನ ಮೌನ-ಭಾಷೆಯಲ್ಲಿಯೆ ಕತೆಯೊಂದನ್ನು ಕಟ್ಟಿ ಗಾಳಿಯಲ್ಲಿ ಹರಡುತ್ತಿರುವುದು. ಆದರ ಅಸ್ತಿತ್ವವಿರುವವರೆಗೂ ಅಲ್ಲಿ ತಿರುಗಾಡುವ ಜನರು, ಅದರ ಕತೆಯನ್ನು ಕೇಳಬಹುದಾಗಿದೆ:—

ಸಂಕಪ್ಪ ಹಳ್ಳಿಯಲ್ಲಿ ಒಬ್ಬ ಸಾಮಾನ್ಯ ಒಕ್ಕಲಿಗ. ಮನೆಯಲ್ಲಿ ಅವನ ತಾಯಿ ಮುದುಕಿ ಲಚಮವ್ವ; ಹರಯದ ಹೊಸ ಹೊದಲುಗಿತ್ತಿ ಹೆಂಡತಿ ಗೌರಿ. ಇವರೆಲ್ಲ ಬದುಕಿ ಬಾಳಿದ ಕಾಲ ಯಾವುದೆಂಬುದನ್ನು ನಾನು ಹೇಳಲಾರೆ. ಆದರೆ ಇವರ ಬಾಳಿಗೆ ಸಂಬಂಧಿಸಿದ ಸ್ವಾರಸ್ಯವಾದ ಕತೆ, ಆ ಭಾಗದ ಜನತೆಯ ಮನದಲ್ಲಿ ನಿರಂತರವಾಗಿದ್ದು, ವರ್ತಮಾನಕಾಲದಲ್ಲಿಯೂ ಇವರನ್ನು ಸಜೀವಿಗಳನ್ನಾಗಿ ಇರಿಸಿದೆ. ಇವರು ಬದುಕಿದ್ದ ವರ್ಷ, ತಿಂಗಳು, ತಿಥಿಗಳನ್ನು ಅಲ್ಲಿಯ ಜನರು ಎಂದೂ ಕೇಳುವುದಿಲ್ಲ. ಯಾಕೆಂದರೆ ಅದನ್ನು ಕೇಳುವ ಕಾರಣವಿಲ್ಲವೆಂದು ನನ್ನ ಅಭಿಪ್ರಾಯ.

ಸೊಸೆಯಾದ ಗೌರಿ ತನ್ನ ತವರುಮನೆಯ ಬಳಗದವಳೇ ಆದುದರಿಂದ, ಅತ್ತೆ ಲಚಮವ್ವ ಅವಳನ್ನು ಹೊಟ್ಟೆಯ ಮಗಳಂತೆ ಪ್ರೀತಿಸುವಳು. ಬಡವರ ಮನೆಯಲ್ಲಿ ಹುಟ್ಟಿ ಬಳೆದವಳಾದರೂ ಗೌರಪ್ಪನಲ್ಲಿ ರೂಪ-ಗುಣಗಳಿಗೇನೂ ಬಡತನವಿರಲಿಲ್ಲ. ನೋಡಿದ ಸಲಕ್ಕೊಮ್ಮೆ ಗಂಡನ ಮುಖದ ಮೇಲೆ ಹೆಮ್ಮೆಯ ನಗೆಯನ್ನು ಚಿಮ್ಮಿಸಿ, ಹೃದಯವನ್ನು ಹಿಗ್ಗಿಸಬಹುದಾದಂತಹ ಕಣ್ಣು, ಮೂಗು, ಬೈತಿಣ್ಣು. ಮನಸ್ಸೊಪ್ಪುವಂತಹ ಗಂಡ ದೊರೆತುದರಿಂದ ಹಿಂಗದ ಉತ್ಸಾಹ ಗೌರಿಗೆ. ಮನೆಯ ಕೆಲಸ ಮುಗಿಸಿಕೊಂಡು ಹೊಲಕ್ಕೆ ಹೋಗಿ, ಗಂಡನ ಕೆಲಸದಲ್ಲಿ ನೆರವಾಗುವಳು. ತನ್ನನ್ನು ಒಂದೂ ಶ್ರಮದ ಕೆಲಸಕ್ಕೆ ಹಚ್ಚದ ಸೊಸೆ, ಮುದುಕಿ ಲಚಮವ್ವನ ಪ್ರೀತಿಯನ್ನು ಸೆಳೆದುಕೊಳ್ಳದೆ ಇರುತ್ತಾಳೆಯೆ? ಅಪ್ಪಿ ತಪ್ಪಿ ಮುದುಕಿ ಎಂದಾದರೂ ಬೀಸುವ ಕಲ್ಲ ಮುಂದೆ ಕುಳಿತರೆ, ಆಗ ಹಾಡುವ ಹಾಡುಗಳಲ್ಲಿ ಸೊಸೆಯ ಸದ್ಗುಣ-ಸೌಂದರ್ಯಗಳ ಬಣ್ಣನೆಯೆ ತುಂಬಿರುವುದು.

ಮನೆಗೆ ಬಂದು ಮೂರು ನಾಲ್ಕು ವರ್ಷಗಳಾದರೂ ಗೌರಿ ತಾಯಿಯಾಗುವ ಲಕ್ಷಣ ತೋರಲಿಲ್ಲ. ಲಚಮವ್ವ ಊರಲ್ಲಿಯ ಸಣ್ಣ ಪುಟ್ಟ ದೇವತೆಗಳನ್ನೂ ಕುಲಪರಂಪರೆಯ ದೈವತ ಗುರಿಯ ಮಲ್ಲಿಕಾರ್ಜುನನನ್ನೂ ಬೇಡಿಕೊಳ್ಳುವಳು; ಜಲವಾರು ಹರಕೆಗಳನ್ನು ಹೊತ್ತುಕೊಳ್ಳುವಳು. ಅತ್ತೆಯ ಆತುರ ಗೌರಿ-

ಟುಲ್ಲಿಯೂ ತಾಯ್ತನದ ಆಶೆಯನ್ನು ಹೆಚ್ಚಿಸತೊಡಗಿತು. ಉತ್ಕಟವಾದ ಯಾವ ಆಶೆ ಮಾನವನಿಗೆ ಫಲವನ್ನು ಕೊಡುವುದಿಲ್ಲ?

ಬಹಳ ದಿನಗಳಿಗೆ ಗೌರಿ ಬಸಿರೆಯಾದಳು. ಮನೆಯಲ್ಲಿ ಸಂತಸದ ಸಂತೆ. ಮುದುಕಿ ಲಚಮವ್ವ, ಮೊಮ್ಮಗನಿಂದ ಕೂಡಿದ ಹಲವು ಬಗೆಯ ಕನಸುಗಳನ್ನು ಕಾಣಲು ತೊಡಗಿದಳು. ಗೌರಿಯ ಮನದ ಉಲ್ಲಾಸ, ಅವಳ ಬಯಕೆಯ ಬೀನೆಯನ್ನೂ ಓಡಿಸಿ, ಒಂದು ಹೊಸ ಹುರುಪನ್ನು ಒದವಿಸಿದ್ದಿತು. ತಾಯಿ-ಹೆಂಡತಿಯರ ಹಿಗ್ಗಿನ ಸೋಂಕು, ಕರ್ಮಯೋಗಿಯಾದ ಸಂಕಪ್ಪನ ಕರುಳನ್ನೂ ತಾಗದೆ ಬಿಡಲಿಲ್ಲ.

ಗೌರಿಗೆ ಏಳು ತಿಂಗಳು ತುಂಬಿ ಎಂಟರಲ್ಲಿ ಬಿದ್ದಿತು. ತಾಯಿಯ ಹೇಳಿಕೆಯಂತೆ ಸಂಕಪ್ಪ, ಮನೆಯ ನಿತ್ಯದ ಬಳಕೆಗೂ ಬಾಣಂತಿ ತನಕ್ಕೂ ಬೇಕಾಗುವ ಪದಾರ್ಥಗಳನ್ನು ತರಲಿಕ್ಕೆ ಗೋಕಾಂಎಯ ಸಂತೆಗೆ ಹೋದ. ತುಂಬಿದ ಬಸಿರೆಯಾದರೂ ಗೌರಿ ಮನೆಗೆಲಸ ಮುಗಿಸಿಕೊಂಡು, ಊಟ ತೀರಿಸಿ, ಬುತ್ತಿ ಕಟ್ಟಿಕೊಂಡು ಗುಡ್ಡದೋಪರಿಯ ಹೊಲಕ್ಕೆ ಹೋದಳು.

ಕೋಡುಗಲ್ಲುಗಳಿದ್ದ ಗುಡ್ಡದ ಅಡಿಯಲ್ಲಿಯೆ, ದಾರಿಯ ಬಲಬದಿಗೆ ಹೊಲವು ಉದ್ದಕ್ಕೆ ಚಾಚಿಕೊಂಡಿದೆ. ಆಗ ಕಾರ್ತಿಕ ಮಾಸ. ಹೊಲದಲ್ಲಿ ಮುಂಗಾರುಜೋಳದ ಹುಲುಸಾದ ಬೆಳೆ ಮಾಗಿ ನಿಂತಿದೆ. ಬೆಳೆಯ ಸುತ್ತಲೂ ಪಟ್ಟಿ ಕಟ್ಟಿ ಬಿತ್ತಿದ ಹುಚ್ಚೆಳ್ಳಿನ ಸಾಲುಗಳು ಹೊಂಬಣ್ಣದ ಹೂಗಳನ್ನು ಹೊತ್ತು ನಿಂತು, ಬೆಳುಗಾಲದ ನೆಲಸಿರಿಗೆ ಪೂಜೆಯನ್ನು ಸಲ್ಲಿಸುತ್ತಲಿವೆ. ಮಾಗಿದ ತುಂಬುಗಾಳಿನ ತೆನೆಗಳು, ಒಕ್ಕಲಿಗರಿಗೆ ಸುಖಜೀವನದ ಆಧಯವನ್ನು ಮೊಗವೆತ್ತಿ ಸಾರುತ್ತಿವೆ.

ಗೌರವ್ವನಿಗೆ ತನ್ನ ಬಸಿರಿನಷ್ಟೇ ಈ ಬೆಳೆಯ ಹೊಲದಿಂದಲೂ ಆನಂದ ಸಿಕ್ಕುವುದು. ಆದುದರಿಂದಲೆ, ಅತ್ತೆ ಬೇಡಬೇಡವೆಂದು ಹೇಳಿದರೂ ಕೇಳದೆ, ನಿತ್ಯವೂ ಅವಳು ಹೊಲಕ್ಕೆ ಹೋಗುವಳು. ಇಂದಂತೂ ಸಂಕಪ್ಪ ಸಂತೆಗೆ ಹೋಗಿದ್ದ. ಗುಡ್ಡದ ಓಪರಿಯ ಹೊಲಪಾದುದರಿಂದ ವಿಶೇಷ ಕಾವಲಿನ ಅಗತ್ಯವಿತ್ತು. ಆದುದರಿಂದಲೆ ಗೌರವ್ವ ಹೊಲಕ್ಕೆ ಬಂದು ಕಾವಲು ಮಾಡತೊಡಗಿದಳು. ಭಾವ್ಯಕರಾದ ನೋಡುಗರಿಗೆ—ಆ ಹೊಲದ ಒಡ್ಡಿನ ಮೇಲೆ ನಿಂತಿದ್ದ ಗೌರಿ,—ತುಂಬು ಬಸಿರೆಯಾದ ಭೂದೇವಿ ರೂಪುಗೊಂಡು ನಿಂತಂತೆ ಕಂಡಿರಬಹುದು. ಆದರೆ ನಿಂತು ನಿಂತು ನೋಡುವಷ್ಟು ಅವಕಾಶ, ಆ ಹಳ್ಳಿಯ ದುಡಿಮೆಗಾರರಿಗೆ ಎಲ್ಲಿ ಸಿಕ್ಕಬೇಕು? ಲೋಕದ ಕಲ್ಯಾಣಶಕ್ತಿಯ ಕೈಯಲ್ಲಿಯು ಆಯುಧಗಳವರು, ಯಾವಾಗಲೂ ದುಡಿಯುತ್ತಲೆ ಇರಬೇಕು.

ಹೊಲದ ಕಾವಲಿನೊಂದಿಗೇ ಗೌರಿ, ಮನೆಯ ದನಗಳಿಗಾಗಿ ಮೇವನ್ನು ಕೆತ್ತು ಕೂಡಿಸಿದಳು. ಗಂಡ ಸಂತೆಯಿಂದ ಬರುವ ದಾರಿ ಇದೇ ಆದುದರಿಂದ, ಆತನ ಬರವನ್ನು ಕಾಯುತ್ತತೊಡಗಿದಳು

ನೆರೆಹೊರೆಯ ಹೊಲದವರೆಲ್ಲ ನಿತ್ಯದ ಕೆಲಸ ಮುಗಿಸಿಕೊಂಡು ಮನೆಯ ಕಡೆಗೆ ಮರಳಿದರು. ದಾರಿ ಹಿಡಿದು ಬಂದ ಸಂತೆಯ ಜನ ಯಾರು ಯಾರೋ—ಹೊಲವನ್ನು ದಾಟಿ ದಾಟಿ ಮುಂದೆ ಸಾಗುತ್ತಿದ್ದರು. ಸಂಕಪ್ಪ ಬರಲೆ ಇಲ್ಲ. ಬಂದೆ ಬರುವನೆಂದು ನಂಬುಗೆ ಗೌರಿಗೆ.

ಸೂರ್ಯ ಗುಡ್ಡದ ತುದಿಯಲ್ಲಿ ಮರೆಯಾದ. ಸಂಜೆಯ ಜೆಂಬಣ್ಣ ಪಡುವಣದ ಆಗಸದಲ್ಲಿ ಹಬ್ಬಿ ಹರಡಿದ್ದಿತು. ಬೇಗನೆ ಕತ್ತಲೆ ಮುಸುಕುವುದೆಂಬ ಯೋಚನೆ ಗೌರಿಯ ಎದೆಯನ್ನು ತಟ್ಟಿತು. ಹೋಗಬೇಕಾದ ದಾರಿಯೂ ದೂರವಿದ್ದಿತು. ಆದುದರಿಂದ ತಾನಿನ್ನು ದಾರಿಕಾಯುತ್ತ ನಿಲ್ಲುವುದು ಸರಿಯಲ್ಲವೆಂದು ಗೌರವ್ವನಿಗೆ ಎನಿಸಿತು. ಮಾಡಿದ್ದ ಮೇವನ್ನು ಕೂಡಿಸಿ ಹೊರೆ ಕಟ್ಟಿದಳು. ಮನೆಯಲ್ಲಿ ನಾಲ್ಕೈದು ದನಗಳು. ಹೊರೆ ದೊಡ್ಡದಾಗಿಯೆ ಇತ್ತು. ತಾನೆ ತಲೆಯ ಮೇಲೆ ಹೊತ್ತುಕೊಳಬೇಕೆಂದು ಹವಣಿಸಿದಳು. ಎತ್ತಲಿಕ್ಕೆ ಸಾಧ್ಯವಾಗಲಿಲ್ಲ. ಏನು ಮಾಡಬೇಕೆಂಬುದು ತಿಳಿಯದೆ ನಸುವೆ ನಿಂತು ನೋಡಿದಳು.

ದಾರಿ ಹಿಡಿದು ಮುದುಕನೊಬ್ಬ ಹಳ್ಳಿಯ ಕಡೆಗೆ ಸಾಗಿದ್ದ. ಗೌರಿ ನಿಟ್ಟಿಸಿ ನೋಡಿದಳು; ತಮ್ಮ ಹಳ್ಳಿಯ ಓಪರಿಯ ಹೊಲೆಯ ಹನುಮಪ್ಪ ಹೂರೆಯನ್ನು ಹೊರಿಸಿಕೊಳ್ಳುವುದು ಅವಶ್ಯವಿದ್ದಿತಾದರೂ 'ಈ ಮುಚ್ಚಂಜೆಯ ವೇಳೆಯಲ್ಲಿ, ಹೊಲೆಯನನ್ನು ಮುಟ್ಟಿ ಹೊರಿಸಿಕೊಳ್ಳುವುದು ಹೇಗೆ?' ಎಂದು ಸ್ವಲ್ಪಕಾಲ ಉಯ್ಯಲೆಯಾಡಿತು ಮನಸ್ಸು. ಕತ್ತಲು ಸಮೀಪಿಸುತ್ತ ಬಂದುದರಿಂದ, ಹೆಚ್ಚು ವೇಳೆಯನ್ನು ಹೊಲದಲ್ಲಿಯೆ ಇದ್ದು ಕಳೆಯಲಿಕ್ಕೆ ಸಾಧ್ಯವಿರಲಿಲ್ಲ. ನಿರ್ವಾಹವಿಲ್ಲದೆ ಗೌರವ್ವ ಕೂಗಿದಳು:

"ಹನಮಪ್ಪಾ; ಏಂಯಾ ಹನನುಪ್ಪಾ...!"

ಹನುಮಪ್ಪ ನಿಂತು ಕೇಳಿದ:

"ಯಾಕ ಗೌಡತೀ! ಚಂಜಿ ಆತು; ಇನ್ನೂ ಇಲ್ಲೇ ಇದ್ದೀರಲ್ರವ್ವಾ ನೀವ್ರ?"

"ಈಗ ಹೊಂಟುನಿಂತೇನಿ ನೋಡು; ಅಂವ ಸಂತಿ ಹೋಗ್ಯಾನು; ಹೊತ್ತಿರತಕ ಬರತಾನೇನೋ ಅಂತ ಹಾದಿ ನೋಡಿದೆ. ಇನ್ನೂ ಬರಲೇ ಇಲ್ಲ ನೋಡಪಾ! ಈ ಮೇವಿನ ಪೆಂಡೀ ಹೊತಗೋಬೇಕಂದರ, ಒಬ್ಬಾಕಿಗೇ ನನಗ ಮನಸ್ ಹೊಲ್ಲದು ಒಂದೀಟು ನೀನs ಹೊರಸತೀಯಾ ಹನುಮಪ್ಪಾ!

"ಇದೆಂತಾ ಮಾತು ಗೌರವ್ವಗೌಡತೀ? ನಾ ಮುಟ್ಟಿ ಪೆಂಡೀ ಹೊರಿಸಲ್ಯಾ? ಬಸರು ಹೆಣ್ಣಮಗಳು! ಸೂತಕ ಚಂಜೀ ಯಾಕೇ!"

"ಈಗ ಏನು ಮಾಡೋದ್ಯತಿ ಹನಮವ್ವಾ! ಹೋಬಾ ಜಡಾ ಐತಿ. ಹೊರಗಲಾಕ ಇಲ್ಲೆ ಮತ್ತ ಯಾರೂ ಇಲ್ಲ. ಹಾಂ ಅನ್ನೋದರೊಳಗs ಮುಂಗಾವಳ ಕವೀತೈತಿ! ಹೋಗ್ಲಿ

ಮುನೀಗೆ ಹೋದ ಮ್ಯಾಗ ಏನಾರೇ ಆದೀತಂತ; ಈಗ ಇದ್ದು ನ್ಯಟು ಹೊರಿಸಿ ಹೋಗು!"

ಹನುಮಪ್ಪ ಮುಂದೆ ಸಾಗಿ ಬಂದ. ಮುಸ್ಸಿನ ವಯಸ್ಸು. ಬಂದು ಗೌರವ್ವನೆದುರು ನಿಂತು ನೋಡಿದ ಜೋಟ್ಟಿಲು ಬಸಿರೆ. ತುಂಬುಮೊಗದಲ್ಲಿ ಜೆಲುವು ಆರಳಿ ನಿಂತಿದ್ದಿತು. ಸಂಧಿಕಾಲದ ಜೆಂಬೆಳಕು ಆ ಜೆಲುವಿಗೊಂದು ಒಪ್ಪಕೊಟ್ಟಿದ್ದಿತು. ಸಂಜೆಯ ಸುಳಿಗಾಳಿಗೆ ಒಲೆದಾಡುವ ಮುಂಗುರುಳು, ಆ ಜೆಲುವಿಗೆ ಜೈತನ್ಯ ತುಂಬುತ್ತಿತ್ತು. ಮುದುಕ ಹನುಮಪ್ಪ ಮುಂದೆ ನಿಂತು, ಇದನ್ನೆಲ್ಲ ನಿಟ್ಟಿಸಿ ನೋಡಿದ. ಆಶೆಯೊಂದು ಹೃದಯದಲ್ಲಿ ಮಿಂಚಿತು: 'ಇಂತಹ ಜೆಲುವಿನ ಸಂಬಂಧ ತನಗೂ ಇರಬಾರದೆ?' ಎನಿಸಿತು ಭಾವಾವಿಷ್ಟನಾಗಿ ತಟ್ಟನೆ ಮಾತನಾಡಿದ:

"ಹೊರೀ ಹೊರಸತೀನ ಯವ್ವಾ! ಅದರ ನಂದೊಂದು ಮಾತನ್ನ ನಡಸಿಕೊಡಬೇಕು ನೀನು!"

"ಅದೇನ ಮಾತವ್ವಾ ನಿಂದು.. ನಾ ನಡಿಸಿಕೊಡೂದು?"

ಹನುಮಪ್ಪ ಮುಗುಳುನಗೆ ನಗುತ್ತ ಹೇಳಿದ:

"ಇನ್ನೇನೂ ಇಲ್ಲ ತಾಯಿಾ! ನೀನು ಹೆಣ್ಣು ಮಗಳನ್ನ ಪತ್ತರ..ಅದನ್ನ ನನ್ನ ಮೊಮ್ಮಗ ಚಕ್ಕೆಲ್ಲಗ ಮದಿವೀ ಮಾಡಿ ಕೊಡಬೇಕು ನೋಡು!"

ಇದೊಂದು ನಗೆಯಾಟದ ಮಾತೆಂದು ಗೌರವ್ವನಿಗೆನಿಸಿತು. ತಾನು ಒಕ್ಕಲಿಗರವಳು; ಹನುಮಪ್ಪ ಹೊಲೆಯರಾತ! ಜನ್ಮ-ಜನ್ಮಾಂತರದಲ್ಲಾದರೂ ಈ ಸಂಬಂಧ ಸಂಭವನೀಯವೆನಿಸೀತೆ? ಹನುಮಪ್ಪನ ಮಾತಿಗೆ ಗೌರಿ ತಾನೂ ನಗೆಮಾತನ್ನಾಡಿದಳು:

"ಆನಕಾ ಹೆಣ್ಣಾನುಗಳಾದರೂ ಹುಟ್ಟಲೇಳು; ಹುಟ್ಟಿ ದೊಡ್ಡಾಕಿ ಆದ ಮ್ಯಾಲ ಅಲ್ಲಾ....ಮದಿವೀ ಗಿದಿವೀ? ಬಾಬಾ, ಹೊರಸ ಬಾ!"

"ಜೇ, ಜೇ, ಹಾಂಗ ಆಗೂ ಹಾಂಗಿಲ್ಲ. ಇಂದಽ ನೀನು, ಹೆಣ್ಣ ಕೊಡತೀನಂತ ಮಾತು ಕೊಡಾಕಽ ಬೇಕು!"

ಎಲ್ಲವೂ ಜೇಷ್ಟೆಯ ಮಾತೆಂದು ತಿಳಿದು ಗೌರವ್ವ ನುಡಿದಳು:

"ಆಗಲೇಳವಾ, ಕೊಡತೀನಿ! ಈಗ ಹೊರೀ ಹೊರಸು ಮುಂಜೆ; ಕತ್ತಲು ಮಬ್ಬಾಗಾಕ ಹತ್ತೈತ್ರಿ!"

"ಇದು ಸತ್ಯ ಮಾತಽ ಗಾಡತೀ?"

"ಹೂಂ ಹೂಂ, ಸತ್ಯಮಾತು; ಹೊರಸು ಮುಂಜೆ!"

ಹನುಮಪ್ಪ ಹೊರೆಯನ್ನೆತ್ತಿ ಹೊರೆಸಿದ. ಗೌರಮ್ಮ ಹೊತ್ತು ಕೊಂಡು ಮನೆಗೆ ಮರಳಿದಳು. ಅಂದು ಹೊಲದಲ್ಲಿ ನಡೆದ ಸಂಗತಿಯನ್ನು ಯಾರೆದುರೂ ಆಕೆ ಹೇಳಲಿಲ್ಲ. ರಾತ್ರಿಯು ಹೊತ್ತಿನಲ್ಲಿ ಹೊಲೆಯನನ್ನು ಮುಟ್ಟಿದ ಮಾತು ಯಾರಿಗೂ ಸೊಕ್ತಾಗಬಾರದೆಂದು ಅವಳ ಆಪೇಕ್ಷೆ. ಅತ್ತೆ-ಗಂಡಂದಿರೆದುರೂ ಈ ವಿಷಯದಲ್ಲಿ ಗೌರಿ ಉಸುರೆತ್ತಿಲಲ್ಲ.

೨

ಒಂಬತ್ತು ತಿಂಗಳು ತುಂಬಿ ಗೌರವ್ವ ಹೆಣ್ಣುಮಗುವನ್ನೆ ಹೆತ್ತಳು. ತಾಯ್ತನವನ್ನು ಬಯಸುವ ಗರತಿಗೆ ಹೆಣ್ಣು ಮಗು ಬಾದರೇಸು, ಗಂಡುಮಗುವಾದರೇನು? ಲಜಮವ್ವ ಮಾತ್ರ ಮೊದಲೊಮ್ಮೆ ಹೆಣ್ಣೆಂದು ಮನವನ್ನು ಮುದುಡಿಸಿದಳಾದರೂ, ಮೊಮ್ಮಗಳಿಗೆ ಅಮ್ಮನಾದೆನೆಂಬ ಸಂತೋಷದಲ್ಲಿ ಓಲಾಡುತ್ತ, ಗಂಡು-ಹೆಣ್ಣುಗಳ ವಿಷಮಭಾವವನ್ನು ಮರೆತು ಬಿಟ್ಟಳು. ಸಂಕಪ್ಪನ ಮುಖದಲ್ಲಿ ಯಾವ ವ್ಯತ್ಯಾಸವೂ ಕಾಣಲಿಲ್ಲ. ಹನ್ನೆರಡನೆಯ ದಿನ ಮುದುಕಿ, ಮಗುವಿಗೆ 'ಮಾದೇವಿ' ಎಂದು ಹೆಸರನ್ನಿಡಿಸಿದಳು. ಹೊಲೆಯರ ಹನುಮಪ್ಪ ಅಂದು ಮಗುವಿಗೆ ಅಂಗಿ-ಟೊಪ್ಪಿಗೆಗಳನ್ನೂ ಬಾಣಂತಿಗೆ ಕುಪ್ಪಸದ ಕಣವನ್ನೂ ಕಳುಹಿದನು. ಸಂಕಪ್ಪ-ಲಜಮವ್ವರಿಗೆ ಬೇಕಾದವರೆಲ್ಲ ಹೀಗೆ ಕೂಸು-ತಾಯಿಯರಿಗೆ ಉಡುಗೊರೆ ಕಳುಹಿದ್ದರು. ಹನುಮಪ್ಪ ಕಳುಹಿದ ಉಡುಗೊರೆಯ ಬಗೆಗೆ ಮುದುಕಿಗೆ ಆಶ್ಚರ್ಯವೆನಿಸಿ. ತಾದರೂ, ಹತ್ತರ ಕೂಡ ಹನ್ನೊಂದನೆಯದಾಗಿ ಬಂದುದರಿಂದ ಅವಳು ಅದರ ಬಗೆಗೆ ಮಾತನ್ನೇನೂ ಎತ್ತಲಿಲ್ಲ.

ಮಾದೇವಿ ತಾಯಿಯು ಜೀವನದ ಮೂರ್ತಿಯಾಗಿದ್ದಳು. ದಿನಕ್ಕೊಂದು ಚೆಂದವಾಗಿ ಬಳೆಯ ತೊಡಗಿದಳು. ಮಗುವಿನ ಮುದ್ದಾಟದಲ್ಲಿ ತಾಯಿ ಗೌರಮ್ಮ, ಹಗಲು-ಇರುಳುಗಳನ್ನು ಕೂಡ ಮರೆತಳು.

ನಾಗರಪಂಚಮಿ ಬಂದಿತು. ಹಳ್ಳಿಯಲ್ಲಿ ಎಲ್ಲೆಲ್ಲಿಯೂ ಹಬ್ಬದ ಉಬ್ಬು. ಉಲ್ಲಾಸ! ಹಬ್ಬಕ್ಕೆ ಮೊದಲುದಿನ ಹೊಲೆಯರ ಹನುಮಪ್ಪ ಸಂಕಪ್ಪನ ಮನೆಗೆ ಬಂದ. ಹಳ್ಳಿಯ ಸಂಪ್ರದಾಯದಂತೆ, ಕೊಡುಗೂಸಿಗೆ ಸಲ್ಲಿಸಬೇಕಾದ 'ದಂಡೆ-ಕುಬಸ' ತಂದು ಗೌರಮ್ಮನ ಮುಂದೆ ಇರಿಸಿದ. ವಿಸ್ಮಯಗೊಂಡು ಗೌರವ್ವ ಕೇಳಿದಳು:

"ಇದೇನಪಾ ಹನಮಪ್ಪಾ, ಇದನ್ಯೇನ ತಂದಿ?"

"ಸೊಸೀಗೆ ದಂಡಿ-ಕುಬಸಾ ತಂದೀನವ್ವಾ ಹಬ್ಬಕ್ಕ!"

ಬೇಡ ಬೇಡವೆಂದು ಗೌರಿ ಎಷ್ಟು ಹೇಳಿದರೂ ಕೇಳದೆ, ತಂದದ್ದನ್ನೆಲ್ಲಾ ಹನುಮಪ್ಪ ಅಲ್ಲಿಯೆ ಇರಿಸಿ ಹೊರಟು ಹೋದ. 'ಏದೆಂತಾ ಹುಚ್ಚು ಮುದುಕ ಇದು? ತಾ ನೋಡಿದರ ಹೂಲ್ಯಾ; ಸೊಸೀಗೆ ದಂಡಿ-ಕುಬಸಾ ತಂದಾನಂತ! ಎಲ್ಲಾ ಪೋಜಿನ ಮಟ್ಟೇ ಐತಿ!' ಎಂದು ನುಡಿದು ಗೌರಿ, ಹಿಂದೊಂದು ದಿನ ಹೂಲದಲ್ಲಿ ನಡೆದ ವಿಷಯವನ್ನು, ಏನೇನೋ ತೇಲು-ಬೋಲು ಮಾಡಿ ಅತ್ತೆಯೆದುರು ಹೇಳಿದಳು. ಆಗ ಅತ್ತೆ ನುಡಿದಳು:

"ಏನೋ, ಪಿರೀತಿ ಬಂದು ತಂದು ಕೊಟ್ಟೈತೇಳು ಮುದಕ! ಇರಪ್ಪೋಲ್ದು, ಇಟಕೊಂಡು ಬಿಡು ಒಳ್ಯಾಕ"

ಅತ್ತೆಯು ಒಪ್ಪಿಗೆ ದೊರೆತ ಮೇಲೆ ಗೌರಿ, ದಂಡೆ-ಕುಬಸದ ಗಂಟನ್ನು ತೆಗೆದು ಒಳಗಿಟ್ಟಳು. ಎರಡನೆಯ ವರ್ಷದ ನಾಗರ ಪಂಚಮಿಗೂ ಹನುಮಪ್ಪ ದಂಡೆ-ಕುಬಸ ತರುವುದನ್ನು ಮರೆಯಲಿಲ್ಲ. ಮುದುಕನ ಮುಂಕುತನಕ್ಕೆ ಅತ್ತೆ, ಸೊಸೆ ಇಬ್ಬರೂ ಒಳಗೊಳಗೇ ನಗುತ್ತಲಿದ್ದರು. ಮೂರನೆಯ ಪಂಚಮಿಗೂ ದಂಡೆ-ಕುಬಸ ಬಂದಿತು. ಅದನ್ನು ತೆಗೆದುಕೊಂಡೂ ಮುದುಕನನ್ನು ಸಮಾಧಾನಗೊಳಿಸಿ ಆಯಿತು.

ಈ ಸಲದ ಬೇಸಗೆಯಲ್ಲಿ ಮೊಮ್ಮಗನ ಮದುವೆ ಮಾಡಿಬಿಡಬೇಕೆಂದು ಹನುಮಪ್ಪ ನಿರ್ಧರಿಸಿದ. ತನಗೂ ವಯಸ್ಸಾಯಿತು. ಮೊಮ್ಮಗ ತಾಯಿ-ತಂದೆಗಳಿಲ್ಲದ ತಬ್ಬಲಿ. ಏನಾದರೂ ಹೆಚ್ಚು ಕಡಿಮೆಯಾದರೆ, ಮೊಮ್ಮಗನ ಮದುವೆ ಯಾರು ಮಾಡುವರು?

ಒಂದುದಿನ ಬೆಳಗಿನಜ್ಜೆದ್ದು ಹನುಮಪ್ಪ ಸಂಕಪ್ಪನ ಮನೆಯ ಕಡೆಗೆ ಬಂದ. ದಿನವಲ್ಲದ ದಿನದಲ್ಲಿ ಹನುಮಪ್ಪನ ಮೈಮೇಲೆ ಹೊಸ ಬಟ್ಟೆ—ರೇಸಿಮೆಯ ಕರೆ ಕಟ್ಟಿದ ಕರಿಯ ಕಂಬಳಿ—ಕಾಲಲ್ಲಿ ಹೊಸ ಎಕ್ಕಡ. ಒಂದು ಹನುಮಪ್ಪ ಸಂಕಪ್ಪನ ಮನೆಯ ಮುಂಗಟ್ಟಿಯ ಮೇಲೆ ಕುಳಿತುಕೊಂಡ. ಅವನ ವೇಷ-ಭೂಷಣಗಳನ್ನು ನೋಡಿದ ಸಂಕಪ್ಪ ಆಶ್ಚರ್ಯಗೊಂಡು ಕೇಳಿದ:

"ಏನಪಾ ಹನಮಪ್ಪಾ? ಈಗ ಬಂದಿ..., ಪ ಸಿ ಳಿ ನ್ಯಾಗ ಎದ್ದು?" ಹನುಮಪ್ಪ ಹೇಳತೊಡಗಿದ:

"ಬರಲೇಬೇಕಾತೂ ಅಂತ ಬಂದಿನಿ. ಬಸ್ಟಿಗೀ (ನಿಶ್ಚಯ) ಹಾಕೂದೂ ಎಂದ ಮಾಡೋಣೂ ಅಂತ ಕೇಳಿಕೊಂಡು ಹೋಗ್ಲಾಕ ಬಂದೆ. ಈ ವರ್ಷ ಬ್ಯಾಸಿಗ್ಯಾಗ ನನ್ನ ಮುಮ್ಮಗನ ಮದಿವೀ ಮಾಡೇ ಬಿಡಬೇಕಂತ ಯಿಚಾರ ಬಂದೈತ್ರಿ!"

"ಹೀಂಗೇನು? ಹಾಂಗಾರ ಹೋಳಿಗೀ ಎಬ್ಬಿಸೀದೀ ಅನ್ನು! ಪಾಪ, ತಾಯೀ-ತಂದೀ ಇಲ್ಲದ ಪರದೇಶಿ ಮಗಾ! ಹೊಡದು ಬಿಡು ಇದು ವರಸ! ಅದೆಲ್ಲಾ ಆಯ್ತುನಾ! ಹೆಣ್ಣ ಎಲ್ಲೀದು ಗೊತ್ತ ಮಾಡೀದಿ?"

"ಮತ್ತೆಲ್ಲೀದು ಗೊತ್ತು ಮಾಡೂದು ಗೌಡಾ! ನಿನ್ನ ಮಗಳನ್ನs ತೊಗೊಳ್ಳೂದೂ ಅಂತ ಎಂದೋ ಗೊತ್ತಾಗಿ ಹೋಗೆಯ್ತಲ್ರಿ! ಈಗ ಮೂರು ವರ್ಸಾತು; ಪಂಚಮಿಗಾ ಹೆಚ್ಚಕ್ಕ ದಂಡಿ-ಕುಬಸಾ ಸುದ್ದಾ ತಂದು ಮುಟ್ಟಿಸಿ ಬಿಟ್ಟೀದೀನ್ರಿ; ಯಾಕ, ಏನೂ ಗೊತ್ತs ಇಲ್ಲದವರ್ಹಾಂಗs ಮಾತಾಡ್ತೀರೆಲಾ!"

ಸಂಕಪ್ಪನಿಗೆ ತುಂಬ ಆಶ್ಚರ್ಯ. ಆ ಆಶ್ಚರ್ಯದ ಭರದಲ್ಲಿಯೆ ಕೇಳಿದ:

"ಇದೇನೋ ಹನಮಪ್ಪಾ, ನುರಿಪ್ಪಿನ ಕಾಲಕ್ಕ ನಿನಗ ಹುಚ್ಚು ಗಿಚ್ಚು ಹಿಡೀತೋ ಏನ ಮಣ್ಣ! ನೀ ಮಾತಾಡ್ತೀಯರೇ ಏನು? ನಿಂದ ಯಾವ ಕುಲಾ, ನಮ್ಮದು ಯಾವ ಕುಲಾ! ನಿಮ್ಮ ಮನೀಗೆ ನಾವು ಹೆಣ್ಣು ಕೊಡೂದಂದರ ಇದೇನ ಮಾತಲೇ ನಿಂದು?"

"ಇದನೋಡು ಗೌಡಾ, ನಾ ಖರೇ ಮಾತಿನಾಂವ! ಈ ಕುಲಾ ಗಿಲಾ ನಾಯೇನೂ ಕೇಳೂದಿಲ್ಲ. ಮಾತುಕೊಟ್ಟಾಂಗ ನಡಕೊಳ್ಳೂ ನಡತಿ ಏಕ್ಕೋ ಇಲ್ಲೋ ನಿಮ್ಮ ಮನಿತನದಾಗ?"

"ಮಾತುಕೊಟ್ಟಾಂಗ ನಡಕೊಳ್ಳೂದಂದರ ಏನಲೆ! ಯಾರು ನಿನಗ ಮಾತು ಕೊಟ್ಟವರು?"

"ಹೆಣ್ಣು ಕೊಡುಕೊಂಬೋ ಮಾತಿನಾಗ ಹೆಣ್ಣಿನ ತಾಯಿನs ಅಲ್ಲೇನು ಮಾತು ಕೊಡುವಾಕಿ—ಗೌಡಾ?"

"ಅಂದರ ಏನಲೆ? ಹೆಣ್ಣಿನ ತಾಯಿ ನಿನ್ನ ಮನೀಗೆ ಹೆಣ್ಣು ಕೊಡತೀನಂತ ಮಾತು ಕೊಟ್ಟಾಳs? ಹೋಗೋ ಹೋಗು ಹುಚ್ಚಾ!"

ಹನುಮಪ್ಪ ಗಟ್ಟಿಯಾಗಿ ನುಡಿದ:

"ಗೌರವ್ವಗೌಡತಿನ್ನ ಇಲ್ಲೆ ಕರೀರಿ; ಎಲ್ಲಾ ಗೊತ್ತಾಗ್ತೈತಿ!"

ಸಂಕಪ್ಪ ಹೆಂಡತಿಯನ್ನು ಕೂಗಿ ಕರೆದ. ಗೌರವ್ವ ಹೊರ ಬಂದು ಏಕೆಂದು ಕೇಳಿದಳು. ಸಂಕಪ್ಪ ಹನುಮಪ್ಪನನ್ನು ತೋರಿಸುತ್ತ ನುಡಿದ:

"ಏನಂತಾನ ಇಂವ ಕೇಳಿದೇನು? ಇಂವಗ ಏನಂತ ಮಾತು ಕೊಟ್ಟೀದಿ ನೀನು?"

ಗಾಬರಿಗೊಂಡವಳಾಗಿ ಗೌರಿ ಕೇಳಿದಳು:

"ನಾಯೇನ ಕೊಟ್ಟೀನಿ ಇಂವಗ ಮಾತು?"

ಹನುಮಪ್ಪ ನಿಶ್ಚಯಸ್ವರದಲ್ಲಿ ಕೇಳಿದ:

"ಯಾಕs ಯೆವ್ವಾ, ಹೀಂಗ್ಯಾಕ ಮಾತಾಡತೀ? ಆ ದಿನಾ ಮೇವಿನ ಪೆಂಡೀ ಹೊರಿಸಿಕೊಳ್ಳೂ ಮುಂದ ಕೊಟ್ಟ ಮಾತು ಧ್ಯಾಸದಾಗ ಉಳಿದಿಲ್ಲೇನು?"

"ನಾಯೆಂದೋ ಮುದಕಾ ನಿನ್ನ ಕಡಿಂದ ಮೇವಿನ ಪೆಂಡೀ ಹೊರಿಸಿಕೊಂಡದ್ದು? ಯಾಕ ಪ್ಯೆಮ್ಯಾಗ ಎಚ್ಚರ ಗಿಚ್ಚರ ಐತ್ಯೋ ಇಲ್ಲೊ?"

"ತಂಗೀ, ನೋಡಿಲ್ಲೆ! ನಾ ಹುಟ್ಟಿದ ಮ್ಯಾಗ, ನನಗ ತಿಳದ್ಹಾಂಗ—ಎಂದೂ ಸುಳ್ಳ ಮಾತಾಡಿಲ್ಲ! ಆ ದಿನಾ—ಹೆಣ್ಣ ಹಡೆದರ ನನ್ನ ಮಮ್ಮಗ್ಗ ಕೊಡಬೇಕೂ ಅಂತ ಮಾತು ತೊಗೊಂಡು, ಆ ಮ್ಯಾಗ ನಿನಗ ನಾ ಮೇವಿನ ಹೊರೀ ಹೊರಿಸಲಿಲ್ಲ? 'ಆಗಲಿ' ಅಂತ ನೀನು ಒಪ್ಪಿಗೀ ಕೊಡಲಿಲ್ಲಽ?"

ಗೌರವ್ವನ ಹುಬ್ಬು ಪೆಚ್ಚಾಗಿ ಹೋಯಿತು. ಕಂಗೆಟ್ಟವಳಾಗಿ ಕೂಗಿಕೊಂಡಳು:

"ಹೋಗು—ಹೋಗೋ ಮುದುಹುಚ್ಚಾ! ಯಾರದರs ಮಾರಿಗೆ ಮುಸೀ ಹೆಚ್ಚಾಂವ ನೀ ಎಲ್ಲೋ! ನಿನ್ನ ಮಮ್ಮಗ್ಗ ಹೆಣ್ಣ ಕೊಡತೀನಂತ ನಾನು ಎಂದಾರೇ ಒಪ್ಪಿಗೀ ಕೊಟ್ಟೀನೇನು? ನಾಕುಮಂದಿ ಏನಂದಾರು; ತಿಳೀಬಾರದs ನಿನಗ?"

ಶಾಂತಸ್ವರದಲ್ಲಿಯೆ ಹನುಮಪ್ಪ ಹೇಳಿದ:

"ಯವ್ವಾ, ಲೋಕದಾಗಿಂದ ದೇವರೂ ದರ್ಮಾ ನ್ಯಾಯಾ ಏನ ಸತ್ತು ಹೋಗಿಲ್ಲ! ನಾಕ ಮಂದಿನ್ನs ಕೂಡಿಸತೀನಿ: ಇವರ ಮುಂದs ಈ ಮಾತಿನ ನಿರ್ಣಾಯ ಆಗಿ ಹೋಗಲಿ!"

ಹನುಮಪ್ಪ ದಿಗ್ಗನೆ ಎದ್ದು ನಡೆದುಬಿಟ್ಟ. ಆಶ್ಚರ್ಯ-ಸಂತಾಪಗಳು ಸಂಕಪ್ಪನನ್ನು ಕಂಗೆಡಿಸಿದ್ದುವು.

ಶ

ಹಳ್ಳಿಯ ಚಾವಡಿಯಲ್ಲಿ ಹನುಮಪ್ಪ ಪಂಚಾಯತಿ ಕೂಡಿಸಿದ. ಪಂಚರು ಗೌರವ್ವನನ್ನೂ ಸಂಕಪ್ಪನನ್ನೂ ಕರೆಯಿಸಿದರು. ವಿಚಾರಣೆಗೆ ಪ್ರಾರಂಭವಾಯಿತು. ಹನುಮಪ್ಪ ತನ್ನ ದೂರನ್ನು ಯಥಾಕ್ರಮ ಹೇಳಲು ತೊಡಗಿದ. ಅವನ ದೂರು ಸರಿಯಾದುದೆಂದು ಯಾರಿಗೂ ಎನಿಸಲೊಲ್ಲದು. ನೆರೆದ ಜನರು ನುದಿಹುಚ್ಚಿನ ಬಡಬಡಿಕೆಯಿದೆಂದು ನಗಲು ತೊಡಗಿದರು. ಹನುಮಪ್ಪ ತನ್ನ ದೂರನ್ನು ಹೇಳಿ ಮುಗಿಸಿದ. ಪಂಚರಿಗೆ ಹನುಮಪ್ಪನ ಮಾತು ಸಮಂಜಸವಾದುದೆಂದು ಹೇಗೆ ಕಾಣದೇಕು? ಆದರೂ ವಿಚಾರಣೆಯ ನಿಯಮಕ್ಕನುಸಾರವಾಗಿ ಸಂಕಪ್ಪನ ಹೇಳಿಕೆಯನ್ನು ಕೇಳಿದರು. ತನಗೊಂದೂ ಗೊತ್ತಿಲ್ಲವೆಂದು ಆತ ಹೇಳಿದ. ಗೌರವ್ವನನ್ನು ಕೇಳಿದರು: ಆಕೆ ಆಶ್ಚರ್ಯಕರೆದು ಅಕ್ಕಸಮಾಡಿ 'ಹೊಲ್ಯಾರ ಮನಿಗೆ ಹೆಣ್ಣು ಕೊಡಾಕ ನಾ ಎಂದಾರೂ ಒಪಿಗೊಂಡೀನೇನ್ರಿ?' ಎಂದು ಕೇಳಿದಳು. ಗೌರವ್ವನ ಖಂಡಿತವಾದ ಮಾತುಗಳನ್ನು ಕೇಳಿದ ಪಂಚರಿಗೆ, ಹನುಮಪ್ಪನ ದೂರು ಸತ್ಯವೆಂದು ಒಬ್ಬರಿಗೂ ಎನಿಸಲೊಲ್ಲದು. ಎಲ್ಲರೂ ಸುಳ್ಳುಗಾರನೆಂದು ಹನುಮಪ್ಪನನ್ನು ಬೆದರಿಸಿದರು. ಆಗಲೂ ಆ ಮುದುಕ ಗಟ್ಟಿಮುಟ್ಟಾಗಿ ಹೇಳಿದ.

"ಯವ್ವಾ, ಪಂಚರು ಬ್ಯಾರೇ ಅಲ್ಲ, ಪರಮೇಸೂರ ಬ್ಯಾರೇ ಅಲ್ಲ! ನನಗ ತಿಳಿಯಲಾಕ ಹತ್ತಿದ ಮ್ಯಾಗ ಇಂದಿನ ತನಕಾ ನಾ ಒಂದೂ ಸುಳ್ಳ ಮಾತು ಆಡಿಲ್ಲ. ಹೊಲ್ಯಾನ ಮಾತಂತ ನೀವು ಹೀಂಗ ಹೀಯಾಳಿಸಿ ಬಿಡಬ್ಯಾದ್ರಿ! ಪುಟ್ಟವೂರಾ ಇಚಾರಾ ಮಾಡಿ, ಈ ನ್ಯಾಯಾ ಬಗೀ ಹರಿಸರಿ!"

ಒಬ್ಬ ಪಂಚ ಕೇಳಿದ:

"ಇನ್ನ ಥ್ಯಾಂಗೋ ಹನುಮಪ್ಪಾ ನಿನ್ನ ನ್ಯಾಯಾ ಬಗೀ ಹರಸೂದು? ಹೊಲ್ಯಾರ ಮನೀಗೆ ಉತ್ತಮರು ಯಾರಾದರೂ ಹೆಣ್ಣ ಕೊಡತೀನಂತ ಮಾತು ಕೊಟ್ಯಾರೇನಲೇ? ಇದೆಲ್ಲೀದು ನಿನ್ನ ನ್ಯಾಯಾ?"

WHILE AT DHARWAR—

For Clean & Tasty Meals

THE CITY CENTRAL LODGE

OPP. REGAL TALKIES,

DHARWAR

Will be the right Selection

VISIT ONCE...AND...BE SATISFIED.

ಸ್ವಚ್ಛ ಮತ್ತು ಆರೋಗ್ಯಕರವಾದ ಊಟ—ತಿಂಡಿಗಳಿಗಾಗಿ ಅತ್ಯುತ್ತಮ ಏರ್ಪಾಡು!

ದಿ ಸಿಟಿ ಸೆಂಟ್ರಲ್ ಲಾಜ್,

(ರೀಗಲ್ ಟಾಕೀಜಿನ ಎದುರು)

ಧಾರವಾಡ

ವಿದ್ಯಾರ್ಥಿಗಳೇ ಆಗಲಿ, ಪ್ರವಾಸಿಕರೇ ಆಗಲಿ ಊಟಕ್ಕಾಗಿ ತೊಂದರೆ ಪಡಬೇಕಾಗಿಲ್ಲ. ತೃಪ್ತಿಕರವಾದ ಏರ್ಪಾಡು; ಒಮ್ಮೆ ಬಂದು ಒಳ್ಳೆಯ ಅನುಭವ ಪಡೆಯಿರಿ.

"ಈಯವ್ವ ಸತ್ಯವಾಗೂ ಮಾತಕೊಟ್ಟಾಳ್ರೋ ಯಪ್ಪಾ!"

ಪಂಚರಲ್ಲಿಯ ಹಿರಿಯನೊಬ್ಬ ಸ್ವಲ್ಪ ಯೋಚಿಸಿ ಕೇಳಿದ:

"ಹೂಂ, ಅಗಲಿ ಹನಮವ್ವಾ! ನಿನ್ನ ಮಾತನ್ನಽ ನಿಜಾ ಅಂತ ಅನ್ನೋಣ! ಗೌರವ್ವನ ಕಡಿಂದ ನೀ ಮಾತು ತೊಗೊಂಡದ್ದಕ್ಕ ಸಾಕ್ಷೀ ಯಾರಾದರೂ ಇದ್ದಾರೇನು?"

"ಸಾಕ್ಷೀನ್ರೇ! ಅಲ್ಲಿ ಇನ್ನ್ಯಾರಾದರೂ ಇದ್ದರ ಈ ತಾಯಿ ನನ್ನ ಕಡಿಂದಽ ಯಾಕ ಮೇಲಿನ ಪೆಂಡೀ ಹೊರಿಸಿಕೋತಿದ್ದಳ್ರಿ? ಮನಸ್ಯಾರ್ಯಾರೂ ನನಗ ಸಾಕ್ಷೀ ಇಲ್ಲ. ನನ್ನ ಮಾತು ನಿಜಾ ಇದ್ದರ, ನನ್ನ ತಾಯಿ ಗುಡ್ಡದವ್ವನಽ ನನಗ ಸಾಕ್ಷೀ ಆಗಿ ನಿಲ್ಲಬೇಕು!" ಹನುಮಪ್ಪ ಹೇಳಿದ.

"ನಮಗೇನೋ! ಸಾಕ್ಷೀ ಒಂದಾದರ ಸಾಕು! ಗುಡ್ಡದವ್ವನಿಂದ ಹೇಳಸು, ಇಲ್ಲಾ ಮಡ್ಡೆಪ್ಪನಿಂದ ಹೇಳಸು!" ಪಂಚರ ಹಿರಿಯನ ಮಾತಿದು.

"ಹೊಲದ ಕಡೆ ನಡೀರಿ ಹೋಗೂಣು ಹಾಂಗಾದರ! ನನಗೂ ಒಮ್ಮೆ ಈ ಸುಳ್ಳಾ-ಖರೇದ ಪರೀಕ್ಷಾ ಮಾಡಿಬಿಡಬೇಕಾಗೇತಿ! ಈ ನನ್ನ ಮಾತು ಸುಳ್ಳಾದರ, ಇನ್ನ ಮುಂದ ನಾ ಎಂದೂ ಖರೇ ಮಾತಾಡೂದಿಲ್ಲ ಯಪ್ಪಾ!"

ಪಂಚರೆಲ್ಲ ಎದ್ದು ಸಂಕಪ್ಪನ ಹೊಲದ ಕಡೆಗೆ ಹೊರಟರು. ಮುಂದೆ ಮುಂದೆ ಹನುಮಪ್ಪ ನಡೆದಿದ್ದ. ಎಲ್ಲರಿಗಿಂತ ಹಿಂದೆ ಸಂಕಪ್ಪ, ಗೌರವ್ವ ಹೊರಟಿದ್ದರು. ಎಲ್ಲರೂ ಹೊಲವನ್ನು ತಲ್ಪಿದ ಮೇಲೆ, ಹಿರಿಯ ಪಂಚ ಹೊಲದ ಅಂಚಿನಲ್ಲಿ ನಿಂತು ನುಡಿದ:

"ಕರೀತೀ ಏನಪಾ ಹನಮಪ್ಪಾ? ಯಾರನ್ನ ಕರೀತೀ ಕರಿ; ಸಾಕ್ಷಿ ಹೇಳಸು!"

"ಇಲ್ಲದವರನ್ನ ಇನ್ನೆಲ್ಲಿಂದ ಕರೀಲ್ರಿ! ನನ್ನ ತಾಯಿ ಗುಡದವ್ವನೇ ನನಗ ಗತಿ!"

"ಆಕಿನ್ನ ಕರಿ, ನಾವೆಲ್ಲೆ ಬ್ಯಾಡಾ ಅಂತೀವಿ!" ಅಣಕದ ಧ್ವನಿಯಲ್ಲಿ ಹಿರಿಯ ನುಡಿದ.

ಹನುಮಪ್ಪ ಧೈರ್ಯದಿಂದ ಬಂದು ನಿಂತ. ಗುಡ್ಡದ ಕಡೆಗೆ ಮುಖಮಾಡಿ ಕೈಗಳನ್ನು ಮುಗಿದು, ಗಟ್ಟಿಯಾಗಿ ಬೇಡಿಕೊಂಡ:

"ನಂಕಾಯಿಸಿ, ಗುಡದವ್ವಾ! ನೀನು ಸತ್ಯುಳ್ಳಾಕಿ ಆದರ, ಈ ಪಂಚರಿಗೆ ನನ್ನ ಮಾತು ನಿಜಾ ಅನಸೂ ಹಾಂಗ ಏನಾದರೂ ಒಂದು ಸಾಕ್ಷೀ ಕೊಡು ತಾಯಿಸಿ!"

ಎಲ್ಲರೂ ಸುಮ್ಮಗೆ ನಿಂತು ನೋಡುತ್ತಿದ್ದರು. ಹನುಮಪ್ಪನ ಈ ನಡೆವಳಿಯಲ್ಲಿ ಯಾರಿಗೂ ನಂಬುಗೆ ಕಾಣುತ್ತಿರಲಿಲ್ಲ. ಆಗ ಸಾಕ್ಷಿಯೇನೂ ದೊರೆಯಲಿಲ್ಲ. ಕೂಡಿದವರೆಲ್ಲ ಕೊಂಕು ಮಾತುಗಳನ್ನಾಡಿ ಹನುಮಪ್ಪನನ್ನು ಹಂಗಿಸಿದರು. ಹನುಮಪ್ಪ ಮತ್ತೆ ಕೈಮುಗಿದು ಬೇಡಿಕೊಂಡ:

"ಯವ್ವಾ, ಬಾಳ ಪರೀಕ್ಷಾ ಮಾಡಬ್ಯಾಡ; ಏನಾದರೂ ಕವಲು ಕೊಡು!"

ಮತ್ತೆ ಮೊದಲಿನಂತೆಯೆ! ಯಾವ ಕವಲೂ ದೊರೆಯಲಿಲ್ಲ. ಪಂಚನೊಬ್ಬ ಹೇಳಿದ:

"ಹನಮಪ್ಪಾ, ಇದು ಕಲಿಯುಗಾ ಐತಿ, ಗೊತ್ತೈತಿ ಇಲ್ಲೊ? ಇಂತಾದೆಲ್ಲಾ ಹ್ಯಾಂಗ ನಡದೀತೋ ಹುಚ್ಚಪ್ಪಾ!"

ಹನುಮಪ್ಪನ ಮುಖ ಕೆಂಪಗಾಯಿತು. ಕಣ್ಣುಗಳು ಮಿಂಚಿದುವು. ಮೈಯೆಲ್ಲ ಕಂಪಿಸಿತು. ಮತ್ತೆ ಕೈಯೆತ್ತಿ ಕೂಗಿಕೊಂಡ:

"ತಾಯಿಸಿ, ನಿನ್ನ ಮಗಾ ಎಂದೂ ಸುಳ್ಳಾಡಿಲ್ಲ. ನನ್ನ ಮಮ್ಮಗ್ಗ ಹೆಣ್ಣು ಸಿಗಲಿ, ಬಿಡಲಿ! ನನ್ನ ಸುಳ್ಳುಗಾರಾ ಅಂತ ಜನಾ ಆಡಿಕೊಳ್ಳೂ ಹಾಂಗ ಮಾಡಬ್ಯಾಡ ನನ್ನ ಹಡದವ್ವಾ!"

ಗುಡ್ಡದ ತುದಿಯಲ್ಲಿ ಒಮ್ಮೆಲೆ ಗುಡುಗಿನ ಗರ್ಜನೆ ಕೇಳಿಸಿತು. ಮುಂಗಾರಿನ ಕೋಲ್ಮಿಂಚು ಸುಳಿದಂತಾಗಿ, ನಿಂತವರೆಲ್ಲರ ಕಂಗಳನ್ನು ಕುಕ್ಕಿಸಿತು. ಇದ್ದುದಿದ್ದ ಹಾಗೆಯೆ ದೊಡ್ಡ ದೊಂದು ಬಂಡೆಗಲ್ಲು, ಗುಡ್ಡದ ತುದಿಯಿಂದ ಗಡಗಡನೆ ಉರುಳಿಕೊಂಡು ಬಂದು, ಹಿರಿಯ ಪಂಚನ ಬಳಿಯಲ್ಲಿ ನಿಂತುಕೊಂಡಿತು.

ಪಂಚರಿಗೆಲ್ಲ ಭೀತಿ-ಆಶ್ಚರ್ಯ. ಗೌರವ್ವನ ಎದೆ ದಡದಡಿಸಿತು; ತಲೆ ಕೆಳಗಾಯಿತು. ಸಂಕಪ್ಪ ಯಾವುದೂ ತಿಳಿಯದೆ ಮುಂಕನಂತೆ ನಿಂತುಬಿಟ್ಟಿದ್ದ. ಹನುಮಪ್ಪ ಉದ್ದಕ್ಕೆ ನೆಲದ ಮೇಲೆ ಬೊಡವುಟ್ಟು ಕಣ್ಣೀರನ್ನು ಕರೆಯುತ್ತಿದ್ದ. ಹಿರಿಯ ಪಂಚ ಓಡಿಬಂದು ಹನುಮಪ್ಪನ ಕೈಹಿಡಿದು ಮೇಲಕ್ಕೆಬ್ಬಿಸಿದ.

ಹನುಮಪ್ಪನ ಮಾತು ಸತ್ಯವೆಂದು ಊರೆಲ್ಲ ಒಪ್ಪಿಕೊಂಡಿತು. ಪಂಚರು ಹನುಮಪ್ಪನಂತೆಯೆ ತೀರ್ಮಾನ ಕೊಟ್ಟರು; ಇಷ್ಟೇ ಅಲ್ಲ, ಊರಜನರೆಲ್ಲ ಒಂದಾಗಿನಿಂತು ಮಾದೇವಿಯನ್ನು ಚಿಕ್ಕೆಲ್ಲನಿಗೆ ಕೊಡಿಸಿ ವೈಭವದಿಂದ ಮದುವೆ ಮಾಡಿದರು.

ಅಂದು ಸಾಕ್ಷಿ ನುಡಿದ ಕಲ್ಲು, ಇದುವರೆಗೂ ಈ ಕತೆಯನ್ನು ಹೇಳುತ್ತ ಹಾಗೆಯೆ ನಿಂತುಕೊಂಡಿದೆ. ಅದನ್ನು ನೋಡಲು ಬಯಸುವವರು, ಬೇಕಿದ್ದರೆ ನನ್ನನ್ನು ಕಂಡು ವಿಶೇಷವಾಗಿ ತಿಳಿದುಕೊಳ್ಳಬಹುದು. ನಮಸ್ತೇ!

ಸಾಹಿತ್ಯ ಮತ್ತು ಸ್ವಾತಂತ್ರ್ಯ

ಶ್ರೀ. ಮು. ಸಿ. ಸೋಮಶೇಖರ ಶರ್ಮಾ ಶ್ರೀವಿಶ್ವಾರಾಧ್ಯ, ಗುರುಕುಲ
(ಜಂಗಮವಾಡಿಮಠ) ಕಾಶೀ.

★

ಮಾನವನ ಪರಿಪೂರ್ಣ ವಿಕಾಸಕ್ಕೆ ಸಾಧನಗಳೆಂದರೆ ಚತುರ್ವಿಧ ಪುರುಷಾರ್ಥ. ಈ ಪುರುಷಾರ್ಥಗಳನ್ನು ಸಾಧಿಸಿಕೊಡುವುದೇ ಸಾಹಿತ್ಯದ ಮಹಾ ಉದ್ದೇಶ. ಮೋಕ್ಷವನ್ನು ಎಂದರೆ ಸ್ವಾತಂತ್ರ್ಯವನ್ನು ಬೋಧಿಸದ ಸಾಹಿತ್ಯ, ನಿಜವಾದ ಸಾಹಿತ್ಯವೇ ಅಲ್ಲ.

ಮಾನವನು ತನ್ನ ಚರಿತ್ರೆಯನ್ನೇ ಜಗತ್ತಿನಲ್ಲಿ ವ್ಯಾಪಿಸಬೇಕೆಂದು ಆದಿಕಾಲದಿಂದಲೂ ಪ್ರಯತ್ನಿಸುತ್ತ ಬಂದಿದ್ದಾನೆ. ಈ ಪ್ರಯತ್ನಗಳಲ್ಲಿ ದೊಡ್ಡ ಸಾಧನವೆಂದರೆ ಸಾಹಿತ್ಯ ಸಾಮಗ್ರಿಯೇ ಆಗಿದೆ. ಸಾಹಿತ್ಯವೆಂದರೆ ಅನೇಕ ವಿಚಾರಗಳ ಒಂದು ರಾಶಿ. 'ಸಹಿತಾನಾಂ ಭಾವಃ ಸಾಹಿತ್ಯಂ' ಎಂದು ಸಂಸ್ಕೃತ ವಿದ್ವಾಂಸರು ಹೇಳುವುದುಂಟು. ಕೆಲವರು ಆಧುನಿಕ ಲೇಖನಗಳಿಗೂ ಗ್ರಂಥಗಳಿಗೂ ಸಾಹಿತ್ಯವೆಂಬ ಹೆಸರು ಸಲ್ಲದೆಂದು ವಾದಿಸುತ್ತಿದ್ದಾರೆ. ಇದಕ್ಕೆ ಸಯುಕ್ತಿಕವಾದ ಆಧಾರವು ಇಲ್ಲವಾಗಿ ತೋರುತ್ತದೆ. ಏಕೆಂದರೆ ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲಿ ಶ್ರೇಷ್ಠ, ಕನಿಷ್ಠ ಎಂಬ ಭೇದವು ಇದ್ದೇ ಇದೆ. ಈ ನಾವು ಈಗಿದ್ದ ವಸ್ತುಗಳ ಮೇಲಿರುವ 'Made in England; Made in Japan' ಎಂಬ ಗುರುತುಗಳಿಂದಲೇ ತಿಳಿಯಬಹುದಾಗಿದೆ. ಒಬ್ಬನ ಕೈಯಿಂದಲೇ ಸಿದ್ಧವಾಗುವ ಎರಡು ಮಿಠಾಯಿ ಉಂಡೆಗಳಲ್ಲಿಯೂ ತಾರತಮ್ಯ ಉಂಟು. ಎಂದಮೇಲೆ, ಸಾಹಿತ್ಯದಲ್ಲಿಯೂ ಆಯಾ ವ್ಯಕ್ತಿಗಳ ಸಾಮರ್ಥ್ಯವನ್ನನುಸರಿಸಿ ಉತ್ತಮ ಸಾಮಗ್ರಿ ಅಥವಾ ಕನಿಷ್ಠ ಸಾಮಗ್ರಿ ಉತ್ಪನ್ನವಾಗಿಯೇ ಬಿಡುವುದು. ಎಲ್ಲರೂ ವ್ಯಾಸ-ವಾಲ್ಮೀಕಿಗಳಾಗುವುದು ಸಾಧ್ಯವಿಲ್ಲ. ಕೆಲವರು ನೀತಿಶಾಸ್ತ್ರದ ಶ್ಲೋಕಗಳಂತೆ ಸುಲಭವಾದ ರಚನೆಯನ್ನು ಮಾಡಿ ಸಾಹಿತ್ಯ ಸೃಷ್ಟಿಕರ್ತೃಗಳು ಆಗಬಹುದು. ಪಂಪನ ಮಹಾಭಾರತವೂ ಸರ್ವಜ್ಞನ ತ್ರಿಪದಿಗಳೂ ಒಂದೇ ಕೋಟಿಗೆ ಸೇರಿದ್ದರೂ, ಉಪಯೋಗದಲ್ಲಿ ಕಡಿಮೆ ಮಹತ್ವವುಳ್ಳವುಗಳಾಗಿಲ್ಲ. ಅದರೆ ಮನುಷ್ಯನ ಕಾಲಮಾನವು ಬೆಳೆದಹಾಗೆಲ್ಲ ಅವನ ಚರಿತ್ರೆಯೂ ವಿಜ್ಞಾನವೂ ಬ್ರಹ್ಮಾಂಡ ಸಾಗರದಂತೆ ಅಗಾಧವಾಗಿ ವಿಸ್ತಾರಗೊಳ್ಳುವುದು ಸಹಜವಾಗಿದೆ. ಇದನ್ನೆಲ್ಲಾ ಸಾಹಿತ್ಯಬ್ರಹ್ಮನು ಗ್ರಂಥರೂಪಗಳಿಂದ ಒದಗಿಸಿ, ವಾಙ್ಮಯ ಭಾಂಡಾಗಾರವನ್ನು ಅಭಿವೃದ್ಧಿಗೊಳಿಸುತ್ತಲೇ ಇದ್ದಾನೆ. ವೇದ, ಉಪನಿಷತ್ತು, ಪುರಾಣ, ಆಗಮ, ಕಾವ್ಯ, ನಾಟಕ, ಅಲಂಕಾರ, ಜ್ಯೋತಿಷ್ಯ, ರಸಾಯನ, ವಿಜ್ಞಾನ, ವೈದ್ಯ, ಯಂತ್ರ, ಮಂತ್ರ, ಸಂಗೀತ, ಜಕುರಂಗ, ಯಕ್ಷಗಾನ, ಸ್ತೋತ್ರ, ಶತಕ, ಭಾವಕವಿತೆ, ಪದ್ಯ, ಗದ್ಯ ಎಂಬ ವಿವಿಧಗ್ರಂಥಗಳೂ ಸಾಹಿತ್ಯದ ಮಹಾ ನಮುದ್ರದ ಅಲೆಗಳೇ ಆಗಿರುವುವು. ಇವುಗಳು ಎಷ್ಟು ವೈವಿಧ್ಯವನ್ನು ತಾಳಿದ್ದರೂ ಎಲ್ಲವೂ ಒಂದೇ ಉದ್ದಿಶ್ಯವನ್ನು ಸಾಧಿಸುವುದಕ್ಕಾಗಿ ಹುಟ್ಟಿವೆ. ಆ ಉದ್ದಿಶ್ಯವೆಂದರೆ ಪುರುಷಾರ್ಥ! ಎಂದರೆ ಪುರುಷಾರ್ಥವನ್ನು ಹುಟ್ಟಿಸುವ ಅಥವಾ ಸಾಧಿಸುವ ಬೋಧೆಯನ್ನು ಯಾವುದು ಕೊಡುತ್ತದೆಯೊ ಅದುವೇ ಸಾಹಿತ್ಯವೆಂದು ಧಾರಾಳವಾಗಿ ಹೇಳಬಹುದು. ಹಾಗಾದರೆ 'ಇಬ್ಬರು ಮಿತ್ರರು ಸಾಯಂಕಾಲ ಹೋಟಲಿಗೆ ಹೋದಾಗ ವಿನೋದಕ್ಕಾಗಿ ಮಾತನಾಡುವುದೂ, ಹಾಡುವುದೂ, ವ್ಯಂಗ್ಯಗಳನ್ನು ಪ್ರಕಟಿಸುವುದೂ, ಅಶುವಾಗಿ ಪದ್ಯ ಕಟ್ಟುವುದೂ ಸಾಹಿತ್ಯವಾಗಬಹುದೇನು?' ಎಂದು ಯಾರಾದರೂ ಪ್ರಶ್ನೆ ಮಾಡಬಹುದು. ನಾವಿದಕ್ಕೆ ಹೌದಂತಲೇ ಉತ್ತರಕೊಡುತ್ತೇವೆ. ಏಕೆಂದರೆ, ವಿನೋದಕ್ಕಾಗಿ ನಿರ್ಮಿಸಿದ ಸಾಹಿತ್ಯವು ವ್ಯರ್ಥವೇನೂ ಅಲ್ಲ. ಅದಕ್ಕೂ ಒಂದು ಪುರುಷಾರ್ಥ ಸಾಧನೆ ಉಂಟು. ವಿನೋದವನ್ನಾಗಲೀ ಆಕ್ಷೇಪ-ವ್ಯಂಗ್ಯಗಳನ್ನಾಗಲೀ ಮಾಡಬೇಕಾದರೆ ಸಂಸ್ಕಾರಯುಕ್ತವಾದ ಪ್ರತಿಭೆ ಬೇಕು! ಈ ಸಂಸ್ಕಾರಕ್ಕೆ ವಿದ್ಯಾ ವಿಜ್ಞಾನ ಪರಿಚಯವೂ ಅವಶ್ಯಕವಾಗಿದೆ. ಅದುದರಿಂದ ವಿದ್ಯಾಲಯದ ಇಬ್ಬರು ಮಿತ್ರರು ಹುಟ್ಟಿಸಿದ ವಾಕ್ಯವಾಹವು ಸಾಹಿತ್ಯವಾಗುವುದರಲ್ಲಿ ಸಂದೇಹವೇ ಇಲ್ಲ. ಇಷ್ಟೇಕೆ ಕುರಿಕಾಯುವ ಗೊಲ್ಲನಿಗೂ, ಹಿಟ್ಟು ಬೀಸುವ ನಲ್ಲೆಯರಿಗೂ ಸಾಹಿತ್ಯ ಸೃಷ್ಟಿ ಮಾಡುವ ಶಕ್ತಿಯಿದೆ. ಅಂತಹ ಉದಾಹರಣೆಗಳು ಹುಡುಕತಕ್ಕವರಿಗೆ ಹೇರಳವಸ್ತು ಸಿಕ್ಕುತ್ತಲೇ ಇವೆ. ಇದರ ಸಾರಾಂಶ ಒಟ್ಟಿಗೆ ಎಷ್ಟು ಸಂಸ್ಕಾರವಿದ್ದರೂ ಅದು ಸಾಹಿತ್ಯವನ್ನು (ಹುಟ್ಟು) ಸೃಷ್ಟಿಸಿಯೇ ಬಿಡುವುದು. ಮಾನವನ ಸಂಸ್ಕೃತ ಚರಿತ್ರೆಯಾಗಿದೆ. ಚರಿತ್ರೆಯೂ ನಾನಾ

ವಿಧವಾಗಿ ಸಮಾಚಾರಗಳನ್ನು ಸಮೀಕರಣ ಮಾಡತಕ್ಕದ್ದಾಗಿದೆ. ಮನುಷ್ಯನ ಸಂಸಾರವು ಎಷ್ಟು ಶಾಖೋಪಶಾಖೆಗಳಿಂದ, ಹೆಚ್ಚು-ಕಡಮೆಗಳಿಂದ, ಗುಣದೋಷಗಳಿಂದ, ಕಷ್ಟ ಸುಖಗಳಿಂದ ಕೂಡಿದೆಯೋ— ಅವನನ್ನನುಸರಿಸಿದ ಸಾಹಿತ್ಯವೂ ಅಷ್ಟು ಮುಖವಾಗಿ ವಿಸ್ತಾರ ಹೊಂದಿದೆ. ಇದರಲ್ಲಿ ರವಿಪ್ರಭೆಯುಳ್ಳ ರತ್ನಗಳೂ ಮಂಜಿನ ಮೃಸಕುಳ್ಳ ಉಸುಕೂ ಸೇರಿಕೊಂಡಿದೆ. ರತ್ನದ ಉಪಯೋಗವನ್ನು ರಾಜರು ಮಾಡಿಕೊಂಡರೆ, ಮರಳಿನ ಸಣ್ಣವನ್ನು ಮಾನವನು ಮನೆಗಾಗಿ ಬಳಸುವುದು ಸುಪ್ರಸಿದ್ಧವೇ ಆಗಿದೆ. ಮರಳು ಬೇಡವೆನ್ನುವದು ಮನುನೀಯವೇ ಅಲ್ಲ. ಆದ್ದರಿಂದ ಸರ್ವಸಹಿತವಾದ ಸಾಹಿತ್ಯವು ಸರ್ವರಿಗೂ ಉಪಯೋಗವನ್ನು ಉಂಟುಮಾಡತಕ್ಕದ್ದಾಗಿದೆ. ಇದನ್ನೇ ಅನೇಕ ಮಹನೀಯರು ಬೇರೆ ಬೇರೆ ವಿಧವಾಗಿ ಲಕ್ಷಣಗಳಿಂದ ನಾಮಕರಣ ಮಾಡಿದ್ದಾರೆ. ಸಾಹಿತ್ಯವು ಜ್ಞಾನ, ಕೀರ್ತಿ, ಧನ, ಧಾನ್ಯಗಳನ್ನು ಕೊಡುವುದರ ಮೂಲಕ ಕಲ್ಯಾಣಾನಂದ ಸ್ವರೂಪವಾಗಿರುವುದು. ಇದುವೇ ಪುರುಷಾರ್ಥ!!! ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದು ಇದನ್ನು ನಮ್ಮ ಪೂರ್ವಜರು ವಿಭಾಗಮಾಡಿದ್ದಾರೆ. ಕಡೆಯದಾದ ಮೋಕ್ಷವು ಶರೀರಾನಂತರ ಸಿಕ್ಕಬಹುದೆಂಬುದನ್ನು ನಾವು ಒಪ್ಪುವುದಿಲ್ಲ. ಉತ್ತಮವಾದ ನಡೆಯುಳ್ಳವನು ಸಮಸ್ತ ಜನರ ಪ್ರಶಂಸೆಗೆ ಪಾತ್ರನಾಗಿ ಉನ್ನತಸ್ಥಿತಿಯನ್ನು ಹೊಂದುವುದುಂಟು. ಇದುವೇ ಮುಕ್ತಿ; ಇವನೇ ಮುಕ್ತ. ಇಂತಹ ಉತ್ತಮಲೋಕ ಮಾರ್ಗವನ್ನು ತೋರಿಸಿಕೊಡುವುದೇ ಸಾಹಿತ್ಯ. ಸಣ್ಣಕತೆಯಿಂದ ಮಹಾ ವೇದದ ವರೆಗೂ ಇರುವ ದಾರಿಯನ್ನು ಸಾಹಿತ್ಯವೇ ತೋರಿಸುತ್ತದೆ. ಸಾಹಿತ್ಯದಲ್ಲಿ ಇಲ್ಲದುದು ಜಗತ್ತಿನಲ್ಲೂ ಇಲ್ಲ; ಜಗತ್ತಿನಲ್ಲಿ ಇಲ್ಲದುದು ಸಾಹಿತ್ಯದಲ್ಲೂ ಇಲ್ಲ! ಒಂದೇ ಮಾತಿನಿಂದ ಹೇಳಬೇಕೆಂದರೆ ಜಗತ್ತಿನ ಪ್ರತಿಬಿಂಬವೇ ಸಾಹಿತ್ಯ! ಆದರೆ ಇದರ ನಿರ್ಮಾಣಪದ್ಧತಿ ಹಿಂದೆ ಪದ್ಯಮಯವಾಗಿತ್ತು. ಈಗ ಹೆಚ್ಚಾಗಿ ಗದ್ಯಮಯವಾಗಿರುವುದು.

ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಸಾಹಿತ್ಯದ ನಿರ್ಮಾಣವು ಆಗುತ್ತಲೇ ಬಂದಿದೆ; ಈಗಲೂ ನಡೆದಿದೆ. ಎಂತಹ ಪರಾಧೀನ ದೇಶಗಳಲ್ಲಿಯೂ ಅದರ ಹುಟ್ಟು ಮುಳುಗಿಲ್ಲ, ಏಕೆ?—ಎಂದರೆ, ಸಾಹಿತ್ಯದ ಸಾರವಾದ ಕಲ್ಯಾಣಾನಂದವನ್ನು ಪಡೆಯಬೇಕೆನ್ನುವುದೇ ಕಾರಣವಾಗಿದೆ. ಈ ಆನಂದವು ಪರಾಧೀನತೆಯಲ್ಲಿ ಯಾರಿಗೂ ಸಿಕ್ಕುವಂತಿಲ್ಲ. ಇದುದರಿಂದಲೆ ಮನುಷ್ಯನು ಸ್ವಾತಂತ್ರ್ಯಾಭಿಲಾಷೆಯನ್ನುಹುಟ್ಟಿಸಿಕೊಳ್ಳುತ್ತಲೇ ಇದ್ದಾನೆ. ಸಂಪೂರ್ಣ ಸ್ವಾತಂತ್ರ್ಯವನ್ನನುಭವಿಸುವ ಮಹಾರಾಷ್ಟ್ರಗಳಿಗೆ ಪರರಾಷ್ಟ್ರಗಳನ್ನು ಆಪಹರಿಸಬೇಕೆಂಬ ದುರಾಶೆಯು ಸಹಜವಾಗಿದ್ದರೂ, ಪರಾಧೀನತೆಯಲ್ಲಿ ಇದ್ದ ಮಾನವರು ಗಿಳಿಗಳನ್ನು ಪಂಜರದಲ್ಲಿಟ್ಟುಕೊಂಡು ಸಂತೋಷಪಡುತ್ತಿರುವುದು ಸೋಜಿಗವೇ ಸರಿ! ಆದರೆ ಮಾನವನು ತನ್ನ ಸಮಾನನೇ ಆಗಿದ್ದ ಮಾನವನನ್ನು ಪರಾಧೀನತೆಯಲ್ಲಿಡುವುದು ಮಹಾಪರಾಧವೇನೋ ಅಹುದು! ಆದರೆ ಪಶು-ಪಕ್ಷಿಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ತನ್ನ ಸ್ವಾರ್ಥವನ್ನು ಪೂರ್ತಿಮಾಡಿಕೊಳ್ಳುತ್ತಿರುವ ಈ ದುಷ್ಪದ್ಧತಿಯು ಪರಿಹಾರವಾಗುವವರೆಗೂ, ಮಾನವರಿಗೆ ಸತ್ಯವಾದ ಸ್ವಾತಂತ್ರ್ಯವು ದೊರೆಯುವುದೇ ಇಲ್ಲವೇನೋ! ಪಾಪಕ್ಕೆ ಪರಿಹಾರ ಅಥವಾ ದುಷ್ಕಾರ್ಯಕ್ಕೆ ಪ್ರಾಯಶ್ಚಿತ್ತವೆಂಬುದು ಇರುವುದಾದರೆ, ಒಮ್ಮೆ ಎಲ್ಲರೂ ತಮ್ಮ ಅಪಕಾರ್ಯಗಳಿಗೆ ಫಲವನ್ನು ಹೊಂದಲೇಬೇಕಾಗುವುದು. ಈಗ ಆಕಾಶದಲ್ಲಿ ಹಾರಾಡುತ್ತಾ ಬಾಂಬಿನಿಂದ ಅಪಾಲಾಂಡ ಬ್ರುಹ್ಮಾಂಡಕ್ಕೆ ಅಂಜಿಕೆಯನ್ನು ತೋರಿಸುತ್ತಿದ್ದ ಈ ಮಹಾರಾಷ್ಟ್ರಕ್ಕೂ ಸಚಾ ಸುಖವಿರಲಾರದು. ಈ ಬಗ್ಗೆ ಜಗತ್ತಿನ ಎಲ್ಲ ಸಣ್ಣ ರಾಷ್ಟ್ರಗಳ ಆಭಿಶಾಪ ಇದ್ದೇ ಇದೆ. ಇಂದಲ್ಲ, ನಿದ್ದರೆ ಎಂದೋ ಈ ವಿಪತ್ತು ಇವರಿಗೆ ಬರತಕ್ಕುದೇ ಆಗಿದೆ! ಏಕೆಂದರೆ ಮಾನವನ ಶಕ್ತಿಯು ಅಗಾಧವಾದುದು. ಆದರಂತೆಯೇ ಅವನ ಸ್ವಾತಂತ್ರ್ಯಾಭಿಲಾಷೆಯೂ ಅಸಾಧಾರಣವಾದುದಾಗಿದೆ. ಅದನ್ನು ದಮನ ಮಾಡುವುದು, ನಿಶ್ಶೇಷವಾಗಿ ನಾಶಮಾಡುವುದು ಯಾರಿಗೂ ಸಾಧ್ಯವಾಗಲಾರದು. ಅವನ ಬಾಹ್ಯ ರೋಮಕೂಪಗಳಲ್ಲಿಯೇ ಅಲ್ಲ, ಅಂತರ್ನಾಡಿಗಳ ರಕ್ತಬಿಂದುಗಳಲ್ಲಿಯೂ ತುಂಬ ತುಳುಕುತ್ತಿದೆ ಇದು. ಕೆಲವರು ಬಾಯಿಂದ ಸ್ಪಷ್ಟವಾಗಿ ಹೊರಡದಿದ್ದರೂ ಅಂತರಂಗದಲ್ಲಿದ್ದ ಭಾವವನ್ನು ಬಹಿರಂಗದಲ್ಲಿ ವ್ಯಕ್ತಪಡಿಸುವುದಕ್ಕೆ ಪ್ರಯತ್ನಿಸುತ್ತ ಬಂದಿದ್ದಾರೆ. ಈ ಅಂಶವು ವಿಶೇಷವಾಗಿ ಭಾರತ ದೇಶದ ಸಾಹಿತ್ಯಕರ್ತೃಗಳಲ್ಲಿ ಲೇಖನಿಯಿಂದ ಹೊರಡುತ್ತಿರುವುದನ್ನು ಸಹಜವಾಗಿ ಕಾಣಬಹುದಾಗಿದೆ. ಆ ಸಾಹಿತ್ಯದಲ್ಲಿ ಆಯಾ ಗ್ರಂಥಗಳಲ್ಲಿ ಆಯಾ ಭಾಗಗಳಲ್ಲಿ ಸ್ವಾತಂತ್ರ್ಯವು ಉದ್ದೀಪಕವಾಗುತ್ತಿದ್ದರೂ, ಪರಪ್ರಭುತ್ವದ ದಬ್ಬಾಳಿಕೆಯು ಮೂಲವಿಕಾಸಗೊಳ್ಳಲಿಕ್ಕೆ ಅವಕಾಶವಿರಲಿಲ್ಲ. ಆದರೂ ಈ ಐವತ್ತು ವರ್ಷಗಳಲ್ಲಿ ಭಾರತ ದೇಶದ ನಾಯಕರ ಪ್ರಯತ್ನವಿಶೇಷದಿಂದ, ಮಾನವರಿಗೆ ಸಹಜವಾದ ಸ್ವಾತಂತ್ರ್ಯಾಭಿಲಾಷೆಯು ಬಹುವಾಗಿ ವಿಕಾಸವನ್ನು ಹೊಂದಿದೆ. ಆದರಲ್ಲೂ ಈ ಐದು ವರ್ಷಗಳಲ್ಲಿ ಎಲ್ಲ ಜಗತ್ತೇ ರಾಜಕೀಯ ವಾತಾವರಣದಿಂದ ಸುತ್ತುಗೊಂಡಿರುವುದರಿಂದ, ಅಕ್ಷರಗಳು ಗೊತ್ತಿಲ್ಲದ ಮೂಢಜನಗಳಿದರ ಮಹತ್ತ್ವವು ತಿಳಿದಿದೆ. ರಾಜಕಾರಣವಲ್ಲದೆ, ವ್ಯಾಪಾರ ಒಕ್ಕಲುತನ, ಯಂತ್ರಾಗಾರ (Factories) ಕೈಗಾರಿಕೆ (Industry) ಮುಂತಾದ ಜೀವನಕ್ಕೆ ಬೇಕಾದ ಎಲ್ಲ ಸಾಧನಗಳೂ ಪರಾಧೀನವಾಗಿದ್ದುದರಿಂದ ಸುಖವೆಂಬುದೊತ್ತಟ್ಟಿಗಿರಲಿ ಸಾಧಾರಣವಾದ ಆಹಾರವನ್ನೂ ಸಂಪಾದಿಸಿಕೊಳ್ಳುವುದು ಕಷ್ಟವಾಗಿದೆ. ಈ ವಿಧವಾಗಿ ಜೀವನವನ್ನು ಸಾಗಿಸುವುದೂ ಹೇಗೋ ಬದುಕಿಕೊಳ್ಳುವುದೂ ಸ್ವಾತಂತ್ರ್ಯವಿಲ್ಲದ ಮೂಲಕ ಅಸಾಧ್ಯವಾಗಿದೆ ಎಂಬ ಸತ್ಯಸ್ಥಿತಿ ಗೋಚರವಾದ ಮೇಲೆ, ಪ್ರ

ಯೊಬ್ಬ ಮನುಷ್ಯನ ಮನಸ್ಸಿನಲ್ಲಿಯೂ, ಮಾತುಗಳಲ್ಲಿಯೂ ಹೊಳೆದು ಸಾಹಿತ್ಯರೂಪವಾಗಿ ಪ್ರಕಟವಾಗುವುದರಲ್ಲಿ ಸಂದೇಹವೇ ಇಲ್ಲ. ಅಂತೆಯೇ ನವಯುವಕರೂ, ಸಮಾಜವಾದಿಗಳೂ, ಸ್ವಾತಂತ್ರ್ಯವಾದಿಗಳೂ, ಸಾಮ್ಯವಾದಿಗಳೂ, ಕ್ರಾಂತಿವಾದಿಗಳೂ ವಿಶ್ವವಿದ್ಯಾಲಯ ವಿದ್ಯಾ ಪಟ್ಟಾಭಿಷಿಕ್ತರೂ, ವಿದ್ಯಾರ್ಥಿಗಳೂ, ಕಡೆಗೆ ಸನಾತನಿಗಳೂ ಮುಂತಾಗಿ ಎಲ್ಲರೂ ಸ್ವಾತಂತ್ರ್ಯಭಿಲಾಷೆಯನ್ನು ಪ್ರಕಟಿಸುತ್ತ, ಅದಕ್ಕನುಗುಣವಾದ ಸಾಹಿತ್ಯವನ್ನು ನಿರ್ಮಿಸುತ್ತಲೇ ಇದ್ದಾರೆ. ಇನ್ನು ದೇಶೀಯ ನಾಯಕರ ಮಹೋನ್ನತಗಳಾದ ಉಪನ್ಯಾಸ ಭೇರೀರವಗಳು ಏಕಾಶಾಂತರಾಳವನ್ನೆಲ್ಲಾ ವ್ಯಾಪಿಸುತ್ತಿರುವಾಗ, ಅದರ ಪ್ರಭಾವವನ್ನು ಪ್ರತ್ಯಕ್ಷವಾಗಿ ಕಾಣುವವರ ಸಾಹಿತ್ಯ ಸೃಷ್ಟಿಯಲ್ಲಿ ಸ್ವಾತಂತ್ರ್ಯಬೀಜಗಳು ಹೇರಳವಾಗಿದ್ದರೆ ಆಶ್ಚರ್ಯವೇನೂ ಅಲ್ಲ. ಸ್ವಭಾವಸಿದ್ಧವಾಗಿಯೂ ಇದೆ!

ಜ್ಞಾನಿಗಳು ಯಾವಾಗಲೂ ಅಜ್ಞಾನವನ್ನು ಹೋಗಲಾಡಿಸುವ ಪ್ರಯತ್ನವನ್ನು ನಡೆಯಿಸದೆ ಇರಲಾರರು. ಅಜ್ಞಾನವೇ ಪರತಂತ್ರಕ್ಕೆ ಕಾರಣ. ಅದು ನಾಶವಾದ ವಿನಾ ಸುಜ್ಞಾನ-ಕಲ್ಯಾಣಾನಂದವು ಲಭಿಸಲಾರದು. ಈ ಆನಂದಪ್ರಚಾರಕ್ಕೆ ಕವಿ, ಲೇಖಕ, ಗ್ರಂಥಕರ್ತೃ, ಉಪನ್ಯಾಸಕ, ಸಂಪಾದಕ ಎಂಬುವರು ಬೇಕಾಗಿದ್ದಾರೆ. ನವೀನ ಜಗತ್ತಿನಲ್ಲಿ ರೇಡಿಯೋ-ನಿಸ್ತಂತ್ರೀ ಯಂತ್ರಗಳೂ, ಟೆಲಿಪ್ರಿಂಟರ್ ಮುದ್ರಾಯಂತ್ರಗಳೂ ಅವರ ವೇಷದ ಸ್ವರೂಪವನ್ನು ಬಹುಮಟ್ಟಿಗೆ ಕಾವಾಡುತ್ತವೆ. ಈ ಸಾಧನೆಗಳ ಮೇಲೂ ಈ ವಾಕ್ಯಗಳ ಮೇಲೂ ಪಾಲಕರ ವಕ್ರದೃಷ್ಟಿ ಅಥವಾ ಹಸ್ತಮುದ್ರೆ ಬೀಳುವುದು ಸಹಜವಾಗಿರುವುದರಿಂದ, ಸಾಧಾರಣವಾಗಿ ವಾಕ್‌ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೂ ಸಣ್ಣ ಯುದ್ಧವೇ ನಡೆಯುತ್ತಿದೆ. ಆದ್ದರಿಂದಲೇ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳುವುದು ಎಷ್ಟು ಅವಶ್ಯಕವಾಗಿದೆಯೋ ಸಾಹಿತ್ಯದಿಂದ ಸ್ವಾತಂತ್ರ್ಯಭಾವನವನ್ನು ಪ್ರಚಾರಗೊಳಿಸುವುದೂ ಅಷ್ಟೇ ಅವಶ್ಯಕವಾಗಿದೆ. ಇಂದಿನ ಮಹತ್ವಕಾಲದಲ್ಲಿ ಸ್ವಾತಂತ್ರ್ಯಕ್ಕೂ, ಸ್ವಾಭಿಮಾನಕ್ಕೂ ಪ್ರಚೋದನವನ್ನು ಕೊಡದಿರುವ ಸಾಹಿತ್ಯ ನಿಸ್ಸಾರವಿದೆಯೆಂದು ಧಾರಾಳವಾಗಿ ಹೇಳಬಹುದು.

ಈಗಿನ ಮಾನವರಲ್ಲಿ ಪಾಲಕವರ್ಗ, ಉದ್ಯೋಗಿವರ್ಗ; ಪರ್ವತವರ್ಗ, ಪಂಡಿತವರ್ಗ ಮತ್ತು ಪರಿಶ್ರಮಿವರ್ಗ ಎಂದು ಏಳು ವಿಭಾಗಗಳನ್ನು ಮಾಡಬಹುದಾಗಿದೆ. ಇದರಲ್ಲಿ ಒಬ್ಬರ ವಿಷಯ ಒಬ್ಬರಿಗೆ ಸರಿಬಾರದು. ಸ್ವಾತಂತ್ರ್ಯವನ್ನು ಬಹಳ ದೊಡ್ಡ ಸ್ಥಿತಿಯಲ್ಲಿ ಅನುಭವಿಸತಕ್ಕ ದೇಶಗಳಲ್ಲಿಯೂ ಈ ಭೇದವು ನಿವಾರಣವಾಗಿಲ್ಲ. ಯಥಾರ್ಥವಾಗಿ ಎಲ್ಲ ವರ್ಗದವರೂ ತಂತಮ್ಮ ಮೇಲ್ಮಟ್ಟದ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಿದ್ದರೂ ಪ್ರತಿಕಕ್ಷಿಗಳ ಸಾಹಿತ್ಯವೂ ಅಥವಾ ನಿಯಮನವೂ ಏನಿದೆಯೆಂಬುದನ್ನು ಜನಸಾಮಾನ್ಯವು ಪರಸ್ಪರರಾಗಿ ನಿಚಾರಿಸುತ್ತಿಲ್ಲ. ಎಂದರೆ ಸ್ವಾತಂತ್ರ್ಯದ ಆಂದೋಳನದ ಹೊರಗಿನ ಪ್ರಭಾವವು ಎಷ್ಟು ಪ್ರಬೋಧವನ್ನು ಉಂಟುಮಾಡುತ್ತದೆಯೋ ಅಷ್ಟು ಮಟ್ಟದ ವರೆಗೆ ಸಾಹಿತ್ಯವು ಅಯಾ ಜ್ಞಾನವನ್ನು ಪ್ರಜೋದನೆ ಮಾಡುತ್ತಾ ಇರಬೇಕಾದುದು ಪರಮಾವಶ್ಯಕವಾಗಿದೆ; ಎಂದರೆ ಸಾಹಿತ್ಯವೂ ಸ್ವಾತಂತ್ರ್ಯವೂ ಅವಿನಾಭಾವ ಸಂಬಂಧವುಳ್ಳವುಗಳಾಗಿ ಸರ್ವಮಾನವರ ನಿತ್ಯಾನಂದಕ್ಕೆ ಕಾರಣೀಭೂತವಾಗಲೇ ಬೇಕು. ಏಕೆಂದರೆ ಮನುಷ್ಯನು ತನ್ನವ್ಯಕ್ತಿಗತವಾದ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳುವುದು ಎಷ್ಟು ಅವಶ್ಯಕವಿದೆಯೋ ಅಷ್ಟೇ ಇತರರ ಸ್ವಾತಂತ್ರ್ಯವನ್ನು ಅಂಗೀಕರಿಸುವುದೂ ಅವಶ್ಯಕವಾಗಿದೆ. ಈ ತಿಳಿವಳಿಕೆ ಇಲ್ಲದುದರಿಂದಲೇ ಕೆಲವರು ಹೆಚ್ಚು ಸ್ವಾತಂತ್ರ್ಯವನ್ನು ಅನುಭವಿಸುವುದಕ್ಕೂ ಕೆಲವರಿಗೆ ಸ್ವಾತಂತ್ರ್ಯದ ವಾಸನೆ ಇಲ್ಲದೇ ಇರುವುದಕ್ಕೂ ಕಾರಣವಾಗುತ್ತಿದೆ. ಇದರಲ್ಲಿ ಒಂದು ರಹಸ್ಯವೆಂದರೆ, ಕೆಳಗಿನ ಮಟ್ಟದವರ್ಗದಾಗ ವಿಶ್ವಮಾನವ ಕಲ್ಯಾಣವನ್ನು ಕುರಿತು ಮಾತನಾಡುವ ಅಥವಾ ಪ್ರಚಾರಮಾಡುವ ವ್ಯಕ್ತಿ ಮೇಲ್ಮಟ್ಟಕ್ಕೆ ಬಂದಾಗ, ಹಿಂದಿನ ಅನುಭವವನ್ನೂ, ಆಗಿನ ಸಂಗಡಿಗರನ್ನೂ ಮರೆತುಬಿಡುತ್ತಾನೆ. ಈಗ ದೊಡ್ಡ ದೊಡ್ಡ ದೇಶಗಳಲ್ಲಿರುವ ಮಹಾ ಮಹಾ ಅಧಿಕಾರಿಗಳಲ್ಲಿಯೂ ಈ ದೌರ್ಬಲ್ಯದೋಷವು ಮನೆಮಾಡಿಕೊಂಡಿದೆ. ಇಂಥವರ ದೀರ್ಘಕರ್ಣಗಳಲ್ಲಿರುವ ಬಧಿರತೆಯನ್ನು ಹೋಗಲಾಡಿಸುವುದಕ್ಕೆ ಸ್ವಾತಂತ್ರ್ಯ ಶಂಖಾರವಗಳು ಬರೀ ಆಕಾಶದಲ್ಲಿ ನಲಿದಾಡದೆ, ಸಮರ್ಥವಾದ ಸಾಹಿತ್ಯರೂಪದಿಂದ ಕಣ್ಣು ಕಟ್ಟಬೇಕಾಗಿದೆ. ಆಗ ಸತ್ಯವಾಗಿಯೂ ಇದರ ಪರಿಣಾಮವು ಆಗಲಿದೆ. ಇದರಿಂದಲೂ ಸಾಹಿತ್ಯದ ಸ್ವಾತಂತ್ರ್ಯ ಪ್ರಚೋದನೆ ಸುಪರಿಣಾಮವನ್ನು ಉಂಟುಮಾಡುವುದಾಗಿಯೂ ಶಾಂತಿಯನ್ನು ನೆಲೆಗೊಳಿಸುವುದಾಗಿಯೂ ಆಗಿದ್ದರೆ ಆಶ್ಚರ್ಯವೇನೂ ಅಲ್ಲ. ಬುದ್ಧಿವಂತರೆಲ್ಲರೂ ಇಂತಹ ಸ್ವಾತಂತ್ರ್ಯ ಸಾಹಿತ್ಯವನ್ನು ಸರಳವಾದ ಮಾರ್ಗದಲ್ಲಿ ಜನಸಾಮಾನ್ಯದ ವರೆಗೂ ತಲ್ಪಿಸುವ ಅಖಂಡ ಪ್ರಯತ್ನವನ್ನು ಕೈಕೊಳ್ಳಬೇಕು. ಇದು ಸ್ವಕಲ್ಯಾಣಕ್ಕೂ, ಸ್ವದೇಶಾಭಿವೃದ್ಧಿಗೂ, ಜಗದೀಶ್ವರನ ಕೃಪೆಗೂ ಕಾರಣೀಭೂತವಾಗಿದೆ. ದೀರ್ಘಾಲೋಚನೆಕ್ಕೂ ತತ್ಕ್ಷಣ ನಿರ್ಣಯಕ್ಕೂ ಸಾಕಾಗುವ ಸಂಸ್ಕಾರವನ್ನು ಮೊದಲು ಮಾನವನು ಸಂಪಾದಿಸಬೇಕು. ಇದು ಒಂದು ಸಿದ್ಧಿಯ ಮಾರ್ಗ. ಇಂತಹ ಸಿದ್ಧಹಸ್ತರು ನಿರ್ಮಲವಾದ ಸ್ವಾತಂತ್ರ್ಯವನ್ನು ಬೋಧಿಸುವ ಸಾಹಿತ್ಯವನ್ನು ನಿರ್ಮಿಸಬಲ್ಲರು. ಸಾಹಿತ್ಯವೂ ಸ್ವಾತಂತ್ರ್ಯವೂ ಬೀಜಾಂಕುರ ನ್ಯಾಯದಂತೆ ಒಂದರಿಂದ ಒಂದು ಹುಟ್ಟಿದುವುಗಳಾಗಿವೆ. ಇವುಗಳನ್ನು ವಿಂಗಡಿಸುವುದು ಸಾಧ್ಯವೇ ಇಲ್ಲ. ಏಕೆಂದರೆ ಅಜ್ಞಾನವನ್ನು ಹೋಗಲಾಡಿಸಿ ಆನಂದವನ್ನು ಕೊಡುವ ಸಾಹಿತ್ಯವನ್ನು ಅನುಭವಿಸತಕ್ಕವನಿಗೆ ಸ್ವಕರ್ತವ್ಯರೂಪವಾದ ಸ್ವಾತಂತ್ರ್ಯವೂ ಹೊಳೆಯಲೇ ಬೇಕು. ಸ್ವಾತಂತ್ರ್ಯವನ್ನನುಭವಿಸುವ ಪ್ರಾಣಿಯು ಸ್ವಕರ್ತವ್ಯದ ಮರ್ಮವನ್ನು ಮನಗಾಣಬಲ್ಲನು.

ವಿಶ್ವಸಾರ

★

ಶ್ರೀ. ಸಿ. ಕೆ. ತಿರುನುಲೇಶ, ಮದರಾಸು

೧

ನಿಶೆಯ ಹೂಬುಟ್ಟಿಯಲಿ ಚುಕ್ಕೆಗಳ ಹೂವುಗಳ
ತುಂಬಿಸುತ ತುಳುಕಿಸಿದನೀ ತೋಟಗಾರ;
ಅಗಸದ ಪರದೆಯಲಿ ತಿಂಗಳಿನ ಬಣ್ಣದಲಿ
ಬಗೆಬಗೆಯ ಚಿತ್ರಿಸಿದನೀ ಚಿತ್ರಗಾರ.

೨

ಸಾಗರದ ತೆರೆಗಳಲಿ ನೊರೆಗಳಾಡುಂದೊಲದಿ
ರಂಗಣದೆ ನಲಿನಲಿವನೀ ನಾಟ್ಯಗಾರ;
ಮಲಯಗಂಧವ ಧರಿಸಿ ವಿಶ್ವನಾದವ ನುಡಿಸಿ
ಮಾಧುರ್ಯ ಸುಧೆ ಸುರಿವನೀ ವಾದ್ಯಗಾರ.

೩

ಸ್ನೇಹಗಡಲುಬ್ಬಿರಲು ಪ್ರೇಮದಲೆಗಳ ಮೇಲೆ
ತೂಗುಯ್ಯಲಾಡುವನೀ ಮೋಜುಗಾರ;
ರಸದ ವಾಹಿನಿಯಲ್ಲಿ ಭಾವನೆಯ ನೌಕೆಗಳ
ಸಾಲುಗಳ ತೇಲಿಸುವನೀ ಕರ್ಣಧಾರ.

೪

ಜೀವನದ ರಥಗಳಿಗೆ ಗಂಡು-ಹೆಣ್ಣನು ಹೂಡಿ
ಸಂಸಾರ ಸಾಗಿಸುವನೀ ತಂತ್ರಗಾರ;
ಜಗದ ಯಂತ್ರದ ಜೀವರಾಶಿಗಳನಣಿಮಾಡಿ
ಅತ್ಮತೃಪ್ತಿಯ ಪಡೆವನೀ ಯಂತ್ರಗಾರ.

೫

ಸಕಲ ವನರಾಜಿಯೊಳು ಸೌಂದರ್ಯ ಸುರಿಸುತ್ತ
ನಿಂದು ಸೊಬಗನು ನೋಳ್ಪನೀ ಸೃಷ್ಟಿಕಾರ
ಜಣು-ರೇಣು ತೃಣಕಾಷ್ಠದೆಲ್ಲೆಲ್ಲು ತುಂಬಿರುವ
ಅಂತರಾತ್ಮನೆ ತಿಳಿವನೀ 'ವಿಶ್ವಸಾರ'

ನಿತ್ಯಪೂಜೆ

★

ಶ್ರೀ. ಮುಂಡೇನೂರ ಸಂಗಣ್ಣ, ಮದನಪಲ್ಲಿ

೧

'ಸುಖವೆಲ್ಲ ನನಗಿರಲಿ, ಅಳಲೆಲ್ಲ ಜಗಕಿರಲಿ!'
ಎಂಬುದಿದೆ ಕಲಿಯುಗದ ಜನದ ಪಾಡು!
ಜೀವನದ ಹಿರಿಯ ಗುರಿ— ಪಾಳುಪೆಯ ಉದ್ದೇಶ—
ಮುಕ್ತಿ ಪಡೆವಾ ಮಾರ್ಗ—ಇದೆ ಏನು? ಕೇಡು!

೨

ಸ್ವಾರ್ಥತೆಯ ಗುಡಿಕಟ್ಟಿ, ಅಹಂ ವಿಗ್ರಹವಿರಿಸಿ,
ಬಲಹೀನ ಜೀವಿಗಳ ಎದೆಯನುಗಿದು—
ಕರುಳ ಬತ್ತಿಯ ಮಾಡಿ, ನೆತ್ತರೆಣ್ಣೆಯ ಬಸಿದು,
ಕಲಿಪುರುಷ ದೀಪಗಳನಂಟಿಸುವ ನೋಡು!

೩

'ಸರ್ವರೂ ಸೋದರರು' ಎನುವ ಔದಾರ್ಯಕ್ಕೆ
ಕಿಚ್ಚಿಟ್ಟು ಪಂಜಿನಾರತಿಯ ಪಿಡಿದು,
ಸತ್ಯ-ಸುಖ-ಶಾಂತಿಗಳ ನಲ್ಮೆ-ನಗೆ-ತಾಳ್ಮೆಗಳ
ಸುಟ್ಟು ಧೂಪಾರತಿಯ ಸಲ್ಲಿಸುವ ನೋಡು!

೪

ನೋವು-ನರಳಿಕೆಯ ಜನದುಲುಹ ಘಂಟಾನಾದ—
'ತನ್ನ ಸುಖ' ವೆನ್ನುವುದೆ ಓಂಕಾರವು;
ಅನ್ಯಾಯದಾಕ್ರಮಣ ಪಾಶವತೆ ಮೊದಲಾದ
ಪೂಜೋಪಚಾರಗಳ ನಡೆಯಿಸಿಹ ಕಲಿಯು!

೫

ಸೋದರರ ಬಲಿಯಿತ್ತು ನಡೆದಿಹುದು ಎಡೆಬಿಡದೆ
ಆಶೆಮುಮ್ಮನಿಗಿಂದು ಪ್ರತಿನಿತ್ಯ ಪೂಜೆ;
ಇದೆ ಏನು..ಸ್ವರ್ಗಸುಖ ಪಡೆಯುವಾ ನಿಜಮಾರ್ಗ?
ಸ್ವಾರ್ಥವೇನ್ ಮನುಕುಲವ ಬದುಕಿಸುವ ಓಜೆ?

ದೀಪಾವಳಿ

(ರೇಡಿಯೋ ದೃಶ್ಯ)*

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

★

ಪಾತ್ರಗಳು

ಮುಕುಂದ :— ೧೯೪೨ನೆಯ ಇಸ್ವಿಯ ಹೋರಾಟದಲ್ಲಿ ಆಜ್ಞಾತನಾದ ತರುಣ ವೀರನೊಬ್ಬ.

ಮುರಾರಿರಾಯ :— ನಗರದಲ್ಲಿಯ ಪೋಲೀಸ್ ಸುಪರಿಂಟೆಂಡೆಂಟ್.

ಮೋಹಿನಿ :— ಮುರಾರಿರಾಯನ ಹೆಂಡತಿ.

ಮುಕ್ತಾ :— ಮುರಾರಿರಾಯನ ತಂಗಿ

[ದೀಪಾವಳಿಯ ದಿನ ರಾತ್ರಿಯ ಪ್ರಥಮ ಯಾಮ. ಪೋಲೀಸ ಸುಪರಿಂಟೆಂಡೆಂಟ್ ಮುರಾರಿರಾಯರ ಮನೆಯ ಹೊರಬಾಗಿಲು ಮುಚ್ಚಿದೆ. ಒಳಗಿನಿಂದ ಆವರ ಹೆಂಡತಿ ಮೋಹಿನಿ, ತಂಗಿ ಮುಕ್ತೆ ಇವರು ಕುಲಾಸೆಲೆನೆ ನಗುವ ಹಾಗೂ ಸಾರಂಗಿಯೊಡನೆ ಸಂಗೀತವಾಡುವ ಮಂಜುಳ ಸ್ವರಗಳು ನಸುವೆಮುಸುಕಾಗಿ ಕೇಳಬರುತ್ತವೆ. ಅಷ್ಟರಲ್ಲಿ ಮುಕುಂದನು ಹೊರಗಿನಿಂದ ಬಾಗಿಲನ್ನು ಬಡಿದ ಸದ್ದು. ಆತನು ಯಾರೆಂಬುದು ಮುಂದೆ ತಾನೇ ತಿಳಿಯುತ್ತದೆ.]

ಮುಕುಂದ :— ಹುಶ್‌ಕ್ಕಽಽ. ಕೊನೆಗೂ ಪಾರಾದೆ. ಅದೂ ಎಷ್ಟು ಹೊತ್ತೋ! ಗಸ್ತಿನ ಪೋಲೀಸರ ಕಣ್ಣು ತಪ್ಪಿಸಿ ಪಣ್ಣು ಹಣ್ಣಾದೆ. ಅಮ್ಮಾ! ಯಾರು ಒಳಗೆ? ಅಯ್ಯೋ! ಕೊಂಚ ಕದ ತೆರೆಯಿರಿ! ನಡೆದಿದೆ ಸಂಗೀತ! ಸರಿಯ ಸ್ವರ್ಗದಲ್ಲಿ ನುಬದ ನುಗ್ಗಿ! (ಒಳಗೆ ಕುಲುಕುಲು ನಗು) ನಲವಿನ ನಂದನ ವನ! ಯಾರವ್ವಾ! ಬಾಗಿಲು ತೆರೆಯಿರಿ! (ಧಡಕ್ ಧಡಕ್- ಬಾಗಿಲು ಬಡಿಯುವನು. ಹಾಡು ಥಕ್ಕನೆ ತಡೆಯುವುದು. ಸಾರಂಗಿ ರಣಗಣವಾಗಿಯೇ ಸಾಗುವುದು. ಒಳಗಿಂದ ಕೋಮಲ ಕಂಠದ ಚಿಕ್ಕ ಕೂಗು : " ಯಾರದು? " ಮತ್ತೆ ಕಿರುದನಿಯಲ್ಲಿ ಹಾಡುತ್ತ ಮುಕ್ತಾ ಕಿಟಕಿಯ ಬಳಿಗೆ ಬಂದು ಆದನ್ನು ತೆರೆಯುವಳು. ಒಳಗಿನ ಸಾರಂಗಿ ಸುಸ್ವರ ಕೇಳಿಸುವುದು.)

ಮುಕ್ತೆ :— (ಜೋಡಿ ದನಿ ತೆಗೆದು) ಯಾರದು? ಕೂಗುವವರು?

ಮುಕುಂದ :— ಅಮ್ಮಾ! ನಾನು ಬಡಪಾಯಿ. ಪರಸ್ಥಳದವ.. ರಾತ್ರಿಯ ಮಟ್ಟಿಗೆ ಇಂಬು ಕೊಡಿ.

ಮೋಹಿನಿ :— (ಒಳಗಿನಿಂದಲೇ ಸಾರಂಗಿ ನಿಲ್ಲಿಸಿ) ಯಾರೇ ಅದು?

ಮುಕ್ತೆ :— ಯಾರೋ-ಪರಸ್ಥಳವಂತೆ-ಏನೋ ಪಾಪಿಯಂತೆ! (ನಗುವಳು.)

---

* ಮುಂಬಯಿ ಆ. ಇ. ರೇಡಿಯೊ ಸ್ಟೇಶನ್‌ನಿಂದ ಪ್ರಕಟಿತ ಸ್ವಲ್ಪವಿದು. —ಲೇ.

ಮೋಹಿನಿ :— ಯಾವ ಪಾಪಿಯೋ? ಸಣ್ಣಪಾಪಿಯೋ? ದೊಡ್ಡಪಾಪಿಯೋ? (ಇಬ್ಬರ ನಗು)

ಮುಕ್ತೆ :— ಯಾರೋ? ಬಡಪಾಯಿಯಂತೆ ರಾತ್ರಿ ಉಳಿಯುವನಂತೆ.

ಮೋಹಿನಿ :— ಹೇಗಿದೆ ಪ್ರಾಣಿ?

ಮುಕುಂದ :— ಅಮ್ಮಾ, ನನ್ನ ಪಂಜನಾಮೆ ಒಳಗೇ ಆಗಲಾರದೇ? ಇಲ್ಲಿ ನಿಂತು ಕಾಲು ಹೋದುವು!..ಛೇ, ಹೀಗೆ ಮೋರೆಗೆ ಟಾರ್ಚು ಬಿಡಬೇಡಿ; ಕಣ್ಣು ಹೋದಾವು!

ಮುಕ್ತೆ :— ಅವ್ವಯ್ಯಾ! ಈ ರೂಪ ಅಪರೂಪ! ಮೋಹಿನೀ, ಬಡಪಾಯಿಯಲ್ಲ—ಇದು ಮೊಗಲಾಯಿ! ಮೋರೆ ಕುಂಬ ಗಡ್ಡ. ಸೊಂಟಕ್ಕೆ ಮಾಪಿಳ್ಳೇ ಮುಂಡ ಸುತ್ತಿದೆ. ತಲೆಗೆ ಗೊಂಡೆ-ಟೊಪ್ಪಿ! ಮೈಗೆ ಪಂಜಾಬೀ ಅಂಗಿ!

ಮೋಹಿನಿ :— ಸಾಕು ವರ್ಣನೆ. ಆದಾವ ಸಂಚರಂಗಿಗಳಿಯೇ? (ಕಿಟಕಿಗೆ ಬಂದು) ನೋಡೋಣ! ಅಯ್ಯೋ! ಪಾಪ! ಕಣ್ಣಿನ ಕಳೆ ನೋಡು! ಸ್ವಲ್ಪ ನಿದಾನಿಸಿ, ಸಾಕೇ ಬರೇ! ಇದೋ ಕದ ತೆರೆದೆ! (ಜಗ್ಗನೆ ಬಾಗಿಲು ತೆರೆದು) ಒಳಗೆ ಬನ್ನಿ. ಹೀಗೆ ಬನ್ನಿ. ಇಲ್ಲಿ ಕುಳಿತುಕೊಳ್ಳಿ. ನಿಂತಿರೇಕೆ! ಆದೇಕೆ ಪಾಗೆ ಕಣ್ಣು ಬಿಡುವಿರಿ? ಅಯ್ಯೋ! ಮುಕ್ತಾ! ಸಾವರಿಸಿ ಹಿಡಿ ಇವರನ್ನು; ಮುಗ್ಗರಿಸಿ ಬಿದ್ದಾರು. ಪಾಪ! ಎಷ್ಟು ದಣಿದಿದ್ದಾರೆ! ಹಾಂಽಽ. ಹೀಗೆ ಕೂಡಿರಿ. ಮುಕ್ತಾ, ನಡೆ, ಒಳಗೆ ಓಡಿ ಬಿಸಿ ಬಿಸಿ ಕಾಫೀ ಕುದಿಸಿ ತಾ! ಲಗು ತಾ! ನೀವಾರು? (ಮುಕ್ತಾ ಗುಣುಗುಣಿಸುತ್ತ ಹೊರಡುವಳು.)

ಮುಕುಂದ :— (ಗಾಬರಿಯಿಂದ) ಇದು ಯಾರ ಮನೆ? ಇದು ಮುರಾರಿಯ ನೋಟೋ! ಇಲ್ಲಿ ಹೇಗೆ? ಪೋಲೀಸ...

ಮೋಹಿನಿ :— ಆಹುದು ಏಕೆ? ಅವರು ಪೋಲೀಸ ಸುಪರಿಂಟೆಂಡೆಂಟರು! ನನ್ನ ಯಜಮಾನರು! ನಿಮಗೆಲ್ಲಿ ಪರಿಚಯ?

ಮುಕುಂದ :— ಎಂಥ ಘಾತ! ನೀನು ಮೋಹಿನಿ? ಮೋನೀಽಽಽ! (ಸಲಿಗೆಯಿಂದ ಕರೆಯುವನು.)

ಮೋಹಿನಿ :— (ಒನ್ಸ್‌ಲೇ ಗಾಬರಿ-ಬೆರಗು) ಇದೇನು? ನನ್ನ ಹೆಸರು—ಇಂಥ ಕರೆ—ಯಾರು ಮುಕುಂದಾ! ನನ್ನ—ಅಲ್ಲ ತವರೂರ ದೇಸಾಯರ ಮುಕುಂದರಾಯರು?

ಮುಕುಂದ:— ಆಹುದು, ನಿನ್ನ ಮುಕುಂದ! ರಾಯನೂ ಅಲ್ಲ, ದೇಸಾಯನೂ ಅಲ್ಲ! ಎಂದೋ ನಿನ್ನವನಿದ್ದ— ಈಗ ದೇಶದ ದಾಸ!

ಮೋಹಿನಿ:— (ಸಂಭ್ರಮದಿಂದ) ಮುಕುಂದಾ! ಕಳೆದ ೫ ವರ್ಷ ಎಲ್ಲಿ ಇಲ್ಲವಾದಿ? ಈಗ ಎಲ್ಲಿಂದ ಮತ್ತೆ ಬಂದಿ? ಅಂದು, ೪೨ನೆಯ ಇಸವಿಯ ದೀಪಾವಳಿಗೆ ಮಾಯವಾದೆಯಲ್ಲವೆ ....

ಮುಕುಂದ:— (ನಗುತ್ತ) ಇಂದು ೪೭ ನೆಯ ಇಸವಿಯ ದೀಪಾವಳಿಗೆ ಮೂರ್ತಿಮಂತನಾದೆ!

ಮೋಹಿನಿ:— ಆದರೆ ಈ ಗಡ್ಡ-ಮೀಸೆಯ ಹಗಲುಸೋಗು ಏಕೆ? ಈ ವೇಷಾಂತರ! ಇಷ್ಟು ಕಾಲದ ದೇಶಾಂತರ! ಅಯ್ಯೋ ಮತ್ತೇಕೆ ಧೂಮಕೇತುವಿನಂತೆ ಮೂಡಿ ಬಂದಿ? ಅಂದಿನ ಕನಸು—ನಿನ್ನನನ್ನ ಕೆಳೆಯ ಕನಸು—ಅಂದೇ ಕರಗಿತು ಬೇಡ, ಬಿಂದ ಹೆಣವನ್ನು ಮತ್ತೆ ಸುಡಬೇಡ! (ಮಾತಿನೊಂದಿಗೆ ಉಬ್ಬೇಗ ಹೆಚ್ಚುವುದು.)

ಮುಕುಂದ:— (ಶಾಂತ ಗಂಭೀರ) ಇಲ್ಲ. ಮೋಹಿನೀ, ಬಿಂದ ಹೆಣ ಎಂದೋ ಬೂದಿಯಾಯಿತು. ನಿನ್ನ ಮದುವೆಯ ಹೋಮದಲ್ಲಿಯೇ ಅಂದಿನ ನಿನ್ನ ಕನಸಿನ ಕೆಳೆಯ ಸುಟ್ಟು ಭಸ್ಮನಾದ. ನಿನ್ನತಂದೆ, ಅಂದು ನಮ್ಮೂರ ಫೌಜದಾರ್ ಮುರಾರಿರಾಯರ ಉಡಿಯಲ್ಲಿ ನಿನ್ನನ್ನಿಟ್ಟ; ನಾನು ಪೋಲೀಸ-ಕಚೇರಿಗೆ ಬೆಂಕಿಯಿಟ್ಟು ದೇಶಕ್ಕಾಗಿ ನನ್ನ ಪ್ರಾಣ ಸಾವಿನ ಉಡಿಯಲ್ಲಿ ಇಟ್ಟೆ! ಈಗ ಆ ಹುಚ್ಚು ಕಳೆದು ಹೋಗಿದೆ! ದೇಶಾಂತರ ವೇಷಾಂತರದೊಡನೆ ನನ್ನ ಜನ್ಮಾಂತರವೂ ಆಗಿದೆ! [ಮುಕ್ತೆ ರಿವಾಲ್ವರ್ ಹಿಡಿದು ತಡವಾಗಿ, ಮುಕುಂದನನ್ನು ಕಂಡು ದಿಗಿಲುಗೊಂದು, ಹೊಸ್ತಿಲಲ್ಲಿಯೇ ಟ್ರೇ ಕೆಡಹುವ ಸದ್ದು.]

ಮೋಹಿನಿ:— ಅದೇನು? ಮುಕ್ತಾ, ಕಾಫಿ-ಕಪ್ಪು ಕಾರ್ಸೆಟ್ಟು ಎಲ್ಲಾ ಹಾಳುಮಾಡಿ ಬಿಟ್ಟೆ! (ನಕ್ಕು) ಮೋರೆಯಾಕೆ ಇಷ್ಟು ಉದ್ದ ಮಾಡುತ್ತೀ? ಇವರು ಮುಕುಂದರಾಯರು!

ಮುಕ್ತೆ:— (ಪತ್ತರ ಬರುತ್ತ) ಗಡ್ಡ ವಿಾಸೆ?

ಮುಕುಂದ:— ಇದೋ, ಈ ಗೊಂಡೆ-ಟೊಪ್ಪಿಗೆಯಲ್ಲಿಟ್ಟಿದ್ದೇನೆ ಯಾವನಾದರೂ ಮೊಗಲಾಯಿ ಸೀಪಾಯಿಗೆ ಒಂದು ರೂಪಾಯಿಗೆ ಮಾರಿಬಿಡಿ. (ಎಲ್ಲರೂ ನಗುವರು)

ಮೋಹಿನಿ:— ಮುಕುಂದ, ಈಕೆಯಾರು ಗೊತ್ತೇ? ನಮ್ಮ ಯಜಮಾನರ ತಂಗಿ, ಮುಕ್ತಾ! ಈಕೆ ನಿನ್ನ ಕತೆ ಕೇಳಿದ್ದಾಳೆ. ಕೇಳಿದಷ್ಟೂ ಕಳವಳಗೊಂಡಿದ್ದಾಳೆ.

['ಧಡ್'— ಗೋಡೆಯ ಗಡಿಯಾರ ಒಂದು ಬಡಿಯುವುದು]

ಮುಕ್ತೆ:— ಎಂಟೂವರೆ ಬಡಿಯಿತು! ಅಣ್ಣ ಬರುವ ಹೊತ್ತಾಯಿತು ಮಧ್ಯಾಹ್ನವೇ ಪೋಲೀಸ ಕಚೇರಿಗೆ ಹೋಗಿದ್ದ;-ಟೆಲಿಫೋನಿನ ಕರೆ ಬಂದಿತ್ತು!

ಮುಕುಂದ:— ಆಹುದು. ಇಷ್ಟು ಕಾಲ ತಲೆ ತಪ್ಪಿಸಿತಿರುಗುತ್ತಿದ್ದ ಪ್ರಸಿದ್ಧ ಕ್ರಾಂತಿವೀರನೊಬ್ಬನು ಇಂದು ನಗರಕ್ಕೆ ಬಂದಿರುವನಂತೆ; ಆತನ ಬೀಟಿಗಾಗಿ ಹುಡುಕಾಡಲು ಹೋಗಿದ್ದಾರೆ—ನಿಮ್ಮ ಸುಪರಿಂಟೆಂಡೆಂಟ್ ಸಾಹೇಬರು!

ಮುಕ್ತೆ:— ನಿಮಗೆ ಹೇಗೆ ಗೊತ್ತು? (ತಾನೇ ನಕ್ಕು) ಎಂಥಾ ಹುಚ್ಚಿ ನಾನು! ನಿಮ್ಮ ಶೋಧಕ್ಕಾಗಿಯೇ ಅಣ್ಣ ಹೋದನು!

ಮೋಹಿನಿ:— (ಗಾಬರಿಯಿಂದ) ಹಾಗಿದ್ದರೆ ಮುಂದೇನು ಗತಿ? ಮುಕುಂದನನ್ನು ಆಡಗಿಸಲೇ ಬೇಕು. ಎದ್ದೆ ಏಳೆ!

ಮುಕುಂದ:— ನಾನು ಹೊರಟೆ....ಉಡಿಯಲ್ಲಿ ಸಿಡಿಲು ಕಟ್ಟಿಕೊಳ್ಳಬೇಡ, ಮೋಹಿನಿ! ಏನು ವಿಚಿತ್ರ! ಶತ್ರುವಿನಿಂದ ತಪ್ಪಿಸಿಕೊಳ್ಳಲು ತೊಳಲಿ, ಕೊನೆಗೂ ಶತ್ರುವಿನ ಮನೆಯಲ್ಲಿಯೇ ಬಂದು ಬಿದ್ದೆ!

ಮೋಹಿನಿ:— ಮಾತು ಸಾಕು! ಮುಂದಿನ....

ಮುಕುಂದ:— (ಹೊರಟು) ಜೈ ಹಿಂದ! ಮತ್ತೆ ಭೆಟ್ಟಿ ಎಂದೋ ಏನೋ!

ಮೋಹಿನಿ:— ಆದಾಗದು! (ಓಡಿ ಹೋಗಿ ಬಾಗಿಲನ್ನು ಧಡಲ್ಲೆಂದು ಇಕ್ಕಿ ಅಲ್ಲಿಂದಲೇ) ನೀನು ಹೋಗಕೂಡದು. ಇಂದು ದೀಪಾವಳಿಯ ರಾತ್ರಿ, ನಾಳಿನ ದಿನವೂ ಇಲ್ಲಿ ಉಳಿಯಬೇಕು. ಭಾವಬಿದಿಗೆಗೆ ತಂಗಿಯಿಂದ ಆರತಿ ಮಾಡಿಸಿಕೊಂಡು ಹೋಗಬೇಕು. ಹೊಸ ಅಣ್ಣ-ತಂಗಿಯರ ಹೊಸ ಭಾವಬಿದಿಗೆ ಆಗಬೇಡವೇ?

ಮುಕುಂದ:— ಮೋಹಿನೀ! ಎಂಥಾ ಅದ್ಭುತ ಹೆಣ್ಣೀ ನೀನು? ಕೆಳದಿಯಾಗಲೆಳಸಿ, ಇಂದು ತಂಗಿಯಾದೆ! ನನ್ನ ಪುಣ್ಯ ಹಿರಿದಿದ್ದರೆ, ಪುನರ್ಜನ್ಮ ನಿಜವಿದ್ದರೆ, ನೀನೇ ನನ್ನ ತಾಯಿಯಾಗುತ್ತೀಯೆ! ನೀನು ದೇವತೆ! ಆದರೆ ಮುರಾರಿ ಮನುಷ್ಯ! ಅದೂ ನನ್ನನ್ನು ನೋಡಿ ಕೆರಳಿ ದೈತ್ಯನಾಗುವ! ನನ್ನನ್ನು ಕಂಡರೆ ಹುಚ್ಚುನಾಯಿಯಂತೆ ಗುಂಡಿಕ್ಕಿ ಕೊಲ್ಲಬಹುದು. ಪಟ ಬೇಡ! ನನ್ನನ್ನು ಹೋಗಲು ಬಿಡು, ಮೋನೀಽಽ!

ಮುಕ್ತೆ:— ಆದಾಗದು....ಆಗದು! ಮೋಹಿನೀ, ಬಾಗಿಲು ಬಿಡಬೇಡ. ಅಣ್ಣ ಬರಲಿ. ಏನಾಗುವುದೋ ನೋಡುವಾ. ನಿಮಗಾಗಿ ಗುಂಡಿಗೆ ನಾನು ಎದೆ ಕೊಡುತ್ತೇನೆ! ನಾವು ಸ್ವರಾಜ್ಯದ ಹೊಸಯುಗದ ಯುವತಿಯರು! ನೀವು ಸ್ವರಾಜ್ಯದ ಶೂರಯೋಧರು! ಅಣ್ಣ ಸ್ವರಾಜ್ಯದ ಸೇವಕ, (ಹೊರಗೆ ಹೊರದಿಂದ ಕಾರು ಕರ್ಕಶ ಕಿರಿಚುತ್ತ ಬಂದು ಮನೆಯೆದುರು ಒನ್ಮೆಲೇ ನಿಂತ ಸದ್ದು.) ಅದೋ ಅಣ್ಣ ಬಂದೇ ಬಿಟ್ಟ! (ಬೂಟುಗಾಲಿನಿಂದ ಸಾವಟಿಗೆಯೇರಿ ಬಂದು ಬಾಗಿಲು ಬಡಿದ ಸದ್ದು)

ಮುರಾರಿ:— (ಹೊರಗಿಂದ) ಮುಕ್ತಾ! ಮೋಹಿನಿ! ಬಾಗಿಲು ತೆರೆಯಿರಿ! (ಒಳಗೆ ಬಂದು) ಇದೇನು? ಸರಿ! ನಾಟಕ ಒಳ್ಳೇ ರಂಗಿಗೇರಿದೆ! ಮುಕುಂದಾ! ಅಪರಾಧಿಗೆ ಆಡಗಿರಲು ಅಧಿಕಾರಿಯ ಮನೆಯೇ ಲೇಸು, ಅಲ್ಲವೇ? ಮೋಹಿನೀ (ಕರ್ಕಶನಾಗಿ) ಇದೇನು ಮೋಸ! ನಾನಿಲ್ಲದಾಗ ಮುಕುಂದನೋಡನೆ—(ಫಳಾರ್ನೆ ಆಕೆಯು ಕೆನ್ನೆಗೆ ಹೊಡೆಯುವನು. ಮೋಹಿನಿ "ಅಯ್ಯೋಽಽ!" ಎಂದು ಮುಗ್ಗರಿಸುವಳು ಅದಕ್ಕೆ ಮೇಜು ಮೊಗಚಿ ಬೀಳುವುದು.

ಮುಕ್ತೆ:— ಅಣ್ಣಾ! ಏನಿದು ಹುಚ್ಚಾಟ! ನಾಚಿಕೆಗೇಡಿಯಾಗಬೇಡ! ಮೋಹಿನೀ, ಮೋಹಿನೀ.....

ಮುಕುಂದ :— ಮೋನೀ....

ಮೋಹಿನಿ :— (ಸಾವಧಳಾಗಿ) ತಡೆಯಿರಿ, ತಡೆಯಿರಿ! ಕ್ಷಣಗೇನೂ ಆಗಿಲ್ಲ!

ಮುಕ್ತೆ :— ಅಣ್ಣಾ, ಆಗಂತುಕ ಅತಿಥಿಯೆಂದು ನಾನೇ ಇವರನ್ನು ಒಳಗೆ ಕರೆದು ಆಶ್ರಯವಿತ್ತೆ. ಆಗ ಅವರ ರೂಪ ಬೇರೆ ಇತ್ತು.

ಮುರಾರಿ :— ಮುಕುಂದರಾವ! ಇದರ ಸ್ಪಷ್ಟೀಕರಣ?

ಮುಕುಂದ:— ಮತ್ತೇನು ಸ್ಪಷ್ಟೀಕರಣ? ಬೆಳಕು ನೋಡಲು ದೀವಟಿಗೆ ?

ಮುರಾರಿ:—ಸರಳ ಮಾತಿಗೆ ಅಲಂಕಾರ ಬೇಕೇ ?

ಮುಕುಂದ:— (ನಕ್ಕು) ಕಾಣಲೊಲ್ಲದವರಷ್ಟು ಕುರುಡರು ಇನ್ನಾರು ? ಮುರಾರಿ! ನೀವು ಸಶಸ್ತ್ರ-ಸಿಪಾಯರೊಡನೆ ನಗರವೆಲ್ಲ ನನಗಾಗಿ ಸುತ್ತಾಡುವುದು ನನಗೆ ಗೊತ್ತಾಯಿತು. ಆದರೆ ನಾನು ನಗರಕ್ಕೆ ಬಂದದ್ದು ನಿಮ್ಮ ಕೈಸೇರಲೆಂದಲ್ಲ. ಇಂದು ದೀಪಾವಳಿಯ ಶುಭದಿನಕ್ಕೆ ನಮ್ಮ ಭೂಮಿಗತರ ಮೇಲಿನ ಹಳೆಯ ವಾರಂಟುಗಳನ್ನೆಲ್ಲ ರಾಷ್ಟ್ರೀಯ ಸರಕಾರವು ಏಂಬಗೆದುಕೊಳ್ಳುವುದೆಂದು ನನ್ನ ಗುಪ್ತ ಅಧಿಕಾರಿ ಮಿತ್ರರಿಂದ ತಿಳಿದು—ಬಂದೆನು. ಸಕಾಲಕ್ಕೆ ಸಾರ್ವಜನಿಕವಾಗಿ ಪ್ರಕಟನಾಗಲಿದ್ದೆ; ಆದರೆ ನಿಮ್ಮ ಅನುನಾಯಿಗಳ ಬೇಟೆಯಿಂದ ಪಾರಾಗುವ ಭರದಲ್ಲಿ ಇಲ್ಲಿ....

ಮುರಾರಿ:— ಇಲ್ಲಿ ಮೋಹಿನಿಯು ಮೋಹದಲ್ಲಿ ನಿದ್ದಿ! ಏದು ವರ್ಷದ ಹಿಂದೆ ನೀನು ತಲೆತಿರುಕ ಕ್ರಾಂತಿಕಾರಿಯಾದೆ. ನಿನ್ನ ಮದುವೆ ತಪ್ಪಿ, ಮೋಹಿನಿ ನಿನ್ನ ಪ್ರಿಯಳಾದವಳು ನನ್ನ ವಧುವಾದಳು. ಅದರ ಹೊಟ್ಟೆಯುರಿ....

ಮೋಹಿನಿ:— ಸಾಕು! ಬಾಯಿ ಮುಚ್ಚಿರಿ! ನಿಮ್ಮ ಮೋಹಿನಿ ನಿಮ್ಮವಳೇ ಇದ್ದಾಳೆ! ಸಭ್ಯರೆಂಬುದನ್ನು ಮರೆಯಬೇಡಿರಿ.

ಮುಕ್ತೆ:—ಅಣ್ಣಾ, ಅವರು ಹೊರಟುಹೋಗುವ ಹಟ ಹಿಡಿದಿದ್ದರು. ಮೋಹಿನಿ ನಾಳೆ ಉಳಿದು ಭಾವಬಿದಿಗೆಯ ಆರತಿ ಎತ್ತಿಸಿಕೊಂಡೇ ಹೋಗಲು ಹೇಳಿದಳು. ಉರಿಯು ನಿನ್ನ ಹೊಟ್ಟೆಯಲ್ಲಿ! ಮೋಹ ನಿನಗಾಗಿದೆ! ಆ ನಿಲುಗನ್ನಡಿ ನೋಡು! ಬೇರೆ ಕಪ್ಪಿಟ್ಟಿದೆ ಹೇಗೆ! ಮುಕುಂದರನ್ನು ಹಿಡಿದುಕೊಟ್ಟು ಇದರ ೫೦೦೦/– ರೂಪಾಯಿ ಇನಾಮು ಪಡೆಯುವ ಪಾಪಕ್ಕೆ ಹಾಯ್ದುಬುತ್ತಿದ್ದಿ! ಮುಕುಂದರಾವ್, ಮೋಹಿನಿಗೆ ಸಂಜೆಯೊಳಗೆ ೫೦೦೦/– ರೂಪಾಯಿಯ ವಜ್ರದುಂಗುರ ತಂದು ದೀಪಾವಳಿಯ ಉಡುಗೊರೆ ಕೊಡುವೆನೆಂದು ವಚನವಿತ್ತಿದ್ದ, ನಮ್ಮಣ್ಣ!

ಮುಕುಂದ:—ಸರಿ! ಹಾಗಿದ್ದರೆ ನಾನು ವಜ್ರದುಂಗುರಕ್ಕೆ ಮೋರಿಕೊಂಡೆನು! ಮುರಾರಿ, ಕೈದು ಮಾಡಿರಿ ನನ್ನನ್ನು! ನಾಳೆಯ ಭಾವಬಿದಿಗೆಗೆ ನನ್ನ ತಂಗಿಗೆ ೫೦೦೦ ರೂಪಾಯಿಯ ಉಡುಗೊರೆ ತೆಗೆಸಿಕೊಡಿ! ಮೋಹಿನಿ, ನಮ್ಮ ದೇಶಭಕ್ತರ ಭಾವಳಿ ಭಾವಬಿದಿಗೆ ಆಗಸ್ಟ್ ೧೫ನೆಯ ದಿನವೇ ಆಗಿ ಮುಗಿಯಿತು! ೧೪ನೆಯ ದಿನದ ರಾತ್ರಿಯೇ ದಾಸ್ಯದ ನರಳ ಚತುರ್ದಶಿಯ ಕೊನೆಯ ರಾತ್ರಿಯಾಯಿತು! ಇಂದು ನಿನ್ನ ಕಣ್ಣಿನ ಹನಿಗಳಲ್ಲಿ ಜೊಳೆದ ಮಮತೆಯು ಮುಂಗಳಾರತಿಯೇ ಸಾಕು ನನಗೆ!

(ಈ ನಡುವೆ ಮುಕ್ತೆ ರೇಡಿಯೋ ಸರಿಪಡಿಸಿ ಇಡುವಳು. ಅದರಲ್ಲಿ ದಿನದ ಸಮಾಚಾರವಾಚನ ಕೇಳಿಬರುವುದು.)

"ರಾಷ್ಟ್ರೀಯ ಸರಕಾರದ ಗೃಹಮಂತ್ರಿಗಳು ಭಾಯಿ ಮುಕುಂದ ದೇಸಾಯರ ಮೇಲಿನ ಎಲ್ಲ ಹಳೆಯ ವಾರಂಟುಗಳನ್ನು ಹಿಂದೆಗೆದ ಅಜ್ಞೆ ಹೊರಡಿಸಿದ್ದಾರೆ. ನಗರ ಕಾಂಗ್ರೆಸ್ ಸಭೆಯವರು ದೇಸಾಯರ ಪ್ರಚಂಡ ಸ್ವಾಗತಮಾಡಲು ಇದೇ ರಾತ್ರಿ ದೀಪೋತ್ಸವದ ಮೆರವಣಿಗೆ ಹೊರಡಿಸುವವರಿದ್ದಾರೆ!"

ಮುಕ್ತೆ:— (ಚಪ್ಪಾಳೆ, ಕೂಗು) ಮುಕುಂದ ದೇಸಾಯಕೀ ಜೈ! (ನಗುವರು.)

ಮೋಹಿನಿ:— ಮುಕುಂದಾ, ನೀನೀಗ ಸ್ವತಂತ್ರ! ಕೇಳಿದೆಯಾ, (ಗಂಡನಿಗೆ) ಕೇಳಿದಿರಾ ? ಇನ್ನಾದರೂ.

ಮುರಾರಿ:— ಭಾಯಿ ಮುಕುಂದ, ನನ್ನನ್ನು ಕ್ಷಮಿಸಿರಿ. ನಾನೇ ಅಪರಾಧಿ! ಅಧಿಕಾರ ದರ್ಪ, ಇನಾಮಿನ ಅಭಿಲಾಷೆ..!

ಮುಕ್ತೆ:— ಮತ್ತೂ ಅನೂಯೆಯ ಪಿಶಾಚಿ—ಅಣ್ಣನ ತಲೆ ಕೆಡಿಸಿದುವು!

ಮುಕುಂದ:— ಮೋಹಿನಿಯ ಕ್ಷಮೆ ಬೇಡಿ, ಅಕೆಯು ಕೆನ್ನೆ...

ಮೋಹಿನಿ:— ಮುಕುಂದಾ! ಇಲ್ಲಿ ಹೊರಗೆ ನೋಡು! ನಗರವು ದೀಪಮಾಲೆಗಳ ಬಲೆಯಲ್ಲಿ ನೆರೆಸಿಕ್ಕಿದೆ.

ಮುಕ್ತೆ:— ಅದೋ, ಮೆರವಣಿಗೆಯೂ ಬರುತ್ತಿದೆ!

ಮೋಹಿನಿ:— ಮುಕುಂದಾ, ನಡೆ ಹೋಗೋಣ! ಇದು ನಿನ್ನ ಹಬ್ಬ. (ಹೊರಗಿಂದ ಜಯಘೋಷಗಳ ಕಲಕಲಡೊಡನೆ ಮೆರವಣಿಗೆ ಸಾಗುವುದು.)

ಮುರಾರಿ:— ಮುಕುಂದರಾವ! ನಿಮ್ಮ ಭಾಗ್ಯ ದೊಡ್ಡದು!

ಮುಕುಂದ:— ಮರುಳು ಜನ-ಮರುಳು ಜಾತ್ರೆ! ನಾನು ಯಾವ ದೊಡ್ಡ ವಸ್ತು ? ದೇಶದ ದುಃಖ ದೂರವಾಗಿಲ್ಲ! ಹೊಟ್ಟೆಗೆ ಕಲ್ಲು, ಜೈಲಿಗೆ ಚೂರಿ, ಹಣೆಗೆ ಲಾಠಿ, ಕೈಗೆ ರಕ್ತ:— ಸಾವು-ಸುಲಿಗೆ-ಹಾನಿ-ಹಿಂಸೆಗಳ ಜೇತಾಳ ಬತ್ತಲೆ ಕುಣಿದಾಡುತ್ತಿದೆ! ಎಲ್ಲಿದೆ ಸ್ವಾತಂತ್ರ್ಯ? ಯಾರಿಗಾಗಿ ದೀಪೋತ್ಸವ ? ನಾಡಿನ ನಾಡಿ-ನಾಡಿಗಳಲ್ಲಿ ಕ್ರಾಂತಿಯ ಕೆಮ್ಮಿಂಜು ಹರಿದಾಡಬೇಕು, ಉರಿದಾಡಬೇಕು! ರಕ್ತದ ಪ್ರತಿಬಿಂದುವೂ ಕುಡಿಯಾಗಿ ಅರಳಬೇಕು—ಕಿಡಿಯಾಗಿ ತೊಳಗಬೇಕು—ಜಾಗೃತಿಯಿಂದ, ಜ್ಯೋತಿಯಿಂದ! ಮನೆಮನೆಗೂ ಮಮತೆ ತುಂಬಿದ ಕಣ್ಣು, ತೃಪ್ತಿ ತುಳುಕುವ ನಗುಮೋರೆ, ಪ್ರಾಮಾಣಿಕ ಪವಿತ್ರ ಶ್ರಮದ ಬೆವರು ಹನಿ ಮಣಿ-ಮಾಣಿಕಗಳಂತೆ ಜಿಗಬೇಕು! ಅದೇ ದಿವ್ಯ

(೨೭ನೆಯ ಪುಟ ನೋಡಿರಿ)

ಏಕ್ ಪೈಸಾ ಸಾಹೇಬ್!

(ಒಂದು ವಿಚಾರಪ್ರಚೋದಕ ಪ್ರಬಂಧ)

ಶ್ರೀ. ಗ ನಾ. ಕುರ್ಡಿ, ಬಿ.ಎ (ಆನರ್ಸ್) ಮುಂಬಯಿ

ಒಂದು ಕಾಲದಲ್ಲಿ ಭಾರತೀಯ ಸಮಾಜವ್ಯವಸ್ಥೆಗೆ ಭಿಕ್ಷುಕರು ಭಾರವೆನಿಸುತ್ತಿರಲಿಲ್ಲ; ಅಲ್ಲದೆ ಆ ಕಾಲದ ಭಿಕ್ಷುಕರೂ ಒಂದೊಂದು ಬಗೆಯಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದರು. ಇಂದಿನ ಕಾಲದ ನಿರುಪಯುಕ್ತ ನಿರುದ್ಯೋಗಿ ಭಿಕ್ಷುಕರು, ಸಮಾಜದ ಅವನತಿಗೆ ಕಾರಣವಾಗಿದ್ದಾರೆ.

★

"ಏಕ್ ಪೈಸಾ ಸಾಹೇಬ್" ಈ ಕೂಗು ಕೇಳಬರದಂತಹ ಸ್ಥಳವೇ ಇಂದು ಹಿಂದುಸ್ಥಾನದಲ್ಲಿಲ್ಲವೆಂದು ನಿರ್ವಿವಾದವಾಗಿ ಹೇಳಬಹುದು. ಪ್ರತಿ ಪಹರದಲ್ಲಿ ಪ್ರತಿ ಹಳ್ಳಿಯಲ್ಲಿ ಇದು ಕೇಳಬರುವುದು. ಕೆಲವು ಕಡೆಗಳಲ್ಲಂತೂ ಬಡತನದ ಮೂಲಕವಾಗಿ, ಈ ಕೂಗಿಗೆ ಪ್ರತಿಯಾಗಿ "ಒಂದು ಬಿಲ್ಲಿ ಒಗೆಯುವವರಾರು? ಇದು ಯಾರನ್ನು ಉದ್ದೇಶಿಸಿದ್ದು?" ಎಂದು ಸಂಶಯ ಬರಬಹುದು. ಆದರೆ ಅಂತಹ ಕಡೆ ಕೂಡ ಈ "ಏಕ್ ಪೈಸಾ ಸಾಹೇಬ್" ಇಲ್ಲದಿರುವುದಿಲ್ಲ

ಪರರಿಗೆ ಕೈಲಾದಷ್ಟು ಸಹಾಯ ಮಾಡಬೇಕೆನ್ನುವ ಮಾನವನ ದಯಾಳುಸ್ವಭಾವದ ಲಾಭ ತೆಗೆದುಕೊಂಡು, ನಿರುದ್ಯೋಗಿಗಳಾಗಿ, ನಿರ್ವಿಘ್ನವಾಗಿ ಎಲ್ಲ ಕಡೆಯಲ್ಲಿ ಅಲೆಯುತ್ತ ಹೊಟ್ಟೆ ಹೊರೆದುಕೊಂಡು ಕಾಲಕಳೆಯುತ್ತಿರುವ— ಸುಮಾರು ೧೪ ಲಕ್ಷದಷ್ಟು ಭಿಕ್ಷುಕರಿರುವ ದೇಶವೆಂದರೆ ಹಿಂದುಸ್ಥಾನವೇ. ಭಿಕ್ಷುಕತೆಯನ್ನು ಹೋಗಲಾಡಿಸುವುದು ಯಾವುದೊಂದು ದೇಶದ ಉನ್ನತಿಗೆ ಅತ್ಯಗತ್ಯವಾಗಿದ್ದರೂ, ಈ ಸಮಸ್ಯೆಗೆ ಹಿಂದುಸ್ಥಾನದ ಸರಕಾರ ಸಾಕಷ್ಟು ಲಕ್ಷ್ಯ ಪೂರೈಸಿಲ್ಲವೆಂದೇ ಹೇಳಬಹುದು. ಭಿಕ್ಷುಕತೆಯನ್ನು ನಿರ್ಬಂಧಿಸುವುದಕ್ಕಾಗಿ ಪ್ರತಿಯೊಂದು ಪ್ರಾಂತಿಕ ಸರಕಾರವು ಕೆಲವು ಕಟ್ಟಳೆ ಕಾಯಿದೆಗಳನ್ನು ಮಾಡಿ ಪ್ರಯತ್ನಮಾಡಿದ್ದೇನೋ ನಿಜವಾಗಿದ್ದರೂ, ಈ ಕಟ್ಟಳೆ-ಕಾಯಿದೆಗಳನ್ನು ಕೃತಿಯಲ್ಲಿ ತರಬೇಕಾದರೆ ಬಂದ ಅನೇಕ ಎಡರುಗಳ ಮೂಲಕ, ಪ್ರಾಂತಿಕ ಸರಕಾರಗಳ ಈ ಪ್ರಯತ್ನಕ್ಕೆ ಯಶಸ್ಸು ದೊರೆತಿಲ್ಲ. ಆದರೂ ಈ ಅಯಶಸ್ಸಿಗೆ ಮುಖ್ಯ ಕಾರಣವೆಂದರೆ ಸರಕಾರವು ಪೂರ್ಣ ಲಕ್ಷ್ಯ ಪೂರಯಿಸಿ, ಭಿಕ್ಷುಕತೆಯನ್ನು ನಿವಾರಿಸುವುದಕ್ಕೆ ವ್ಯಯಿಸಿದೆ ಇದ್ದದ್ದೇ ಎನ್ನಬೇಕು ಉದಾಹರಣೆಗಾಗಿ ಹತ್ತಾರು ಸಾವಿರ ಭಿಕ್ಷುಕರಿರುವ ಮುಂಬಯಿ ನಗರದಲ್ಲಿ, ಅವರನ್ನಿಡುವುದಕ್ಕಾಗಿ ಒಂದು ಕಟ್ಟಡವೂ ಇಲ್ಲ! ನಗರದ ಅಧಿಕಾರಿಗಳು ಭಿಕ್ಷುಕರೆಲ್ಲರನ್ನೂ ಹಿಡಿದು ಕೂಡಿಡುವುದಕ್ಕೆ ಒಮ್ಮೆ ಪ್ರಯತ್ನ ಮಾಡಿದಂತಿದ್ದರೂ, ಅವರೆಲ್ಲರನ್ನು ಮತ್ತೆ ಮೊದಲಿನಂತೆ ಅಲೆಯುವುದಕ್ಕೆ ಬಿಟ್ಟುಬಿಟ್ಟಿದ್ದಾರೆ; ಮತ್ತು ಅವರನ್ನು ಪ್ರತ್ಯೇಕವಾಗಿ ಇಡುವುದಕ್ಕೆ ಗೊತ್ತುಮಾಡಿದ್ದ ಸ್ಥಳವನ್ನು ಜೈಲಿಗಿಂತಲೂ ಹೆಚ್ಚು ತ್ರಾಸದಾಯಕರವಾದ "ಗೂಂಡಾ" ಜನರನ್ನು ಕೂಡಿಡುವುದಕ್ಕೆ ಉಪಯೋಗಿಸುತ್ತಿದ್ದಾರೆ. ಇದು ಶೋಚನೀಯ ಸಂಗತಿ.

ಭಿಕ್ಷುಕರಲ್ಲಿ "ಅನಾಥ ಬಾಲಕರು, ದಿಕ್ಕಿಲ್ಲದ ಮುದುಕರು, ಶರೀರದಲ್ಲಿ ಊನವುಳ್ಳವರು, ಮಿದುಳು ಕೆಟ್ಟವರು, ರೋಗಿಷ್ಠರು, ಧರ್ಮದ ಹೆಸರಿನಲ್ಲಿ ಅಲೆಯುವ ದಾಂಭಿಕರು, ಕೆಲಸ ಮಾಡಲಯೋಗ್ಯರಿದ್ದರೂ ಕೆಲಸದ ಅಭಾವದ ಮೂಲಕ ಅಲೆಯುವವರು, ಕೆಲಸಕ್ಕೆ ಮೈಯೊಡ್ಡದೆ ತಿರುಗುವ ಮೈಗಳ್ಳರು"—ಹೀಗೆ ನಾನಾ ಪ್ರಕಾರವಾಗಿದ್ದಾರೆ. ವೇಲೆ ಹೇಳಿದ ಒಟ್ಟು ೧೪ ಲಕ್ಷ ಭಿಕ್ಷುಕರಲ್ಲಿ ಸುಮಾರು ಅರ್ಧದಷ್ಟು ಜನ ಯಾವುದಾದರೊಂದು ಉದ್ಯೋಗಕ್ಕೆ ಯೋಗ್ಯರಾಗಿದ್ದವರೆಂದು ಕಂಡುಬಂದಿದೆ ಅಂತಾ ೭ ಲಕ್ಷ ಜನರಲ್ಲಿ ಹೆಚ್ಚು ಮಂದಿ ಹೊಲ-ಮನೆಗಳಲ್ಲಿದ್ದವರೆ. ಮಾಡಬೇಕೆಂದರೂ ಕೆಲಸ ದೊರೆಯದೆ ಮತ್ತು ನಿರುದ್ಯೋಗಿಗಳಲ್ಲಿರುವ ಕೆಲಸ ದೊರೆಕಿಸಿ ಕೊಡಬೇಕಾದ ಸರಕಾರದ ಇಲ್ಲವೆ ಸಮಾಜ ಸಂಸ್ಥೆಗಳಾವುದೂ ಇಲ್ಲದ ಮೂಲಕ, ಉಪಾಯಗಾಣದೆ ಭಿಕ್ಷುಕತೆಯನ್ನು ಕೈಕೊಂಡವರಾಗಿದ್ದಾರೆ. ಆದರೂ ಭಿಕ್ಷುಕರಲ್ಲಿ ಪಡೆದ ಜನ ಶಾರೀರಿಕ ಮತ್ತು ಮಾನಸಿಕ ಊನ-ಕುಂದುಗಳ ಮೂಲಕ ಕೆಲಸಕ್ಕೆ ಅಯೋಗ್ಯರಾಗಿ ಭಿಕ್ಷುಕತೆಗೆ ಹೊರೆಹೊಕ್ಕವರಾಗಿದ್ದಾರೆಂದೆನ್ನಬಹುದು. ಹಿಂದುಸ್ಥಾನದಲ್ಲಿ ೬ ಲಕ್ಷದಷ್ಟು ಕುರುಡರು, ೩ ಲಕ್ಷ ೫೦ ಸಾವಿರದಷ್ಟು ಕಿವುಡರು ಹಾಗೂ ಮೂಕರು, ೧ ಲಕ್ಷದಷ್ಟು ಮಿದುಳು ಕೆಟ್ಟವರು ಹಾಗೂ ೧ ಲಕ್ಷ ೬೫ ಸಾವಿರ ೯,೧೧ ಕುಷ್ಠ ರೋಗಿಗಳು ಅನಾಥರಾಗಿದ್ದಾರೆ. ಹಾಗೂ ಇವರ ಸಂಖ್ಯೆ ಯಾವ ತರದ ನಿರ್ಬಂಧ-ಕಟ್ಟುನಿಟ್ಟುಗಳಿಲ್ಲದೆ ದಿನದಿನ ಬೆಳೆಯುತ್ತಿದೆ. ಭಿಕ್ಷುಕತೆಯು ಶಿಕ್ಷೆಗೆ ಅರ್ಹನಾದುದೆಂದು ಕೃತಿ ಮಾಡಿದ ಶಹರವೆಂದರೆ ಲಖನೌ ಒಂದೇ; ಅಲ್ಲಿ ಭಿಕ್ಷುಕರ ಅಲ್ಲಿಯ ಸಮಾಜ ಸೇವಾದಲದವರು ಸ್ಥಾಪಿಸಿದ ಅನಾಥಾಲಯ

ದಲ್ಲಿ ಕೂಡಿಡುತ್ತಾರೆ. ಮತ್ತು ಹಾಗೆ ಕೂಡಿಡಲಿಕ್ಕೆ ಆ ಸಂಘಕ್ಕೆ ನಗರಸಭೆಯ ಅನುಮತಿಯೂ ಇದೆ.

ಬಡತನ, ಕೆಲಸದ ಅಭಾವ, ಒಕ್ಕುಟುಂಬದಲ್ಲಿ ಪಾಲುಗಳಾಗಿ ಸೊತ್ತಿಲ್ಲ ಹಂಚಿಹೋಗುವಿಕೆ, ಸಾಕಷ್ಟು ಲಾಭದಾಯಕವಲ್ಲದ ಒಕ್ಕಲುತನ, ಅಕಾಲದಲ್ಲಿ ತಂದೆ-ತಾಯಿಗಳ ಮರಣ, ಕೆಲಸ ಮಾಡಲು ಶಕ್ಯವಿಲ್ಲದ ಕಾಲವಾನ ಮುಪ್ಪು, ರೋಗ—ಇವುಗಳಿಗೆ ಹೊರತಾಗಿ ಸಾಕಷ್ಟು ಲಕ್ಷ್ಯಪೂರಯಿಸದಿರುವ ಸಮಾಜ ಹಾಗೂ ಸಂಸ್ಕಾರ—ಭಿಕ್ಷುಕತೆಗೆ ಕಾರಣವಾಗಿವೆ. ನಮ್ಮ ಇಂದಿನ ಸರಕಾರ ತಮ್ಮ ಎಲ್ಲ ಪ್ರಜೆಗಳ ಕಲ್ಯಾಣಕ್ಕಾಗಿ ಸಾಕಷ್ಟು ಲಕ್ಷ್ಯ ಪೂರಯಿಸಲಿಕ್ಕೆ ಶಕ್ತಿಯುತವಾಗಿಲ್ಲ. ಇಂದು ಒಬ್ಬನಿಗೆ ಉಣ್ಣಲು ಅನ್ನ, ಇರಲು ಸ್ಥಳ ಇವು ಇಲ್ಲದಿದ್ದರೆ ಅವನು ಕಳವು, ಕೊಲೆ, ಅಕ್ರಮತೆ (ಹಸಿವೆ, ಹೊದ್ದುಕೊಳ್ಳಲು ಹರಿಸೆಯ ಅಭಾವ ಅಥವಾ ತಕ್ಕ ಆರೈಕೆಯಿಲ್ಲದ ರೋಗ-ರುಜಿನಗಳು ಇವುಗಳಿಂದುಂಟಾದ ಸಾವಲ್ಲ.) ಇವುಗಳ ಹೊರತಾಗಿ ಉಳಿದ ಯಾವುದೇ ಉದ್ಯೋಗವನ್ನು (ಭಿಕ್ಷುಕತೆಯನ್ನೊಡಗೊಂಡು) ಮಾಡಿ, ಕಾಯಿಪೆ ಬದ್ಧನಾಗಿಯೇ ಜೀವಿಸಬಹುದು. ಭಿಕ್ಷುಕತೆಗೆ ಇನ್ನೊಂದು ಅತಿ ಪ್ರಮುಖವಾದ ಕಾರಣವೆಂದರೆ, ದಾನ ಮಾಡುವುದು ಧಾರ್ಮಿಕ ಕೆಲಸವೆಂದು ಜನರಲ್ಲಿ ಬಹುಕಾಲದಿಂದ ನುನೆಗೊಂಡಿರುವ ಮೂಢಭಾವನೆಯೆನ್ನಬಹುದು. ಈ ತರದ ಮನೋಭಾವನೆಯುಳ್ಳ ಜನರು ತಾವು 'ಭಿಕ್ಷೆ ನೀಡುವವನು ಭಿಕ್ಷೆಗೆ ಅರ್ಹನೋ ಅನರ್ಹನೋ?' ಎಂದು ವಿಚಾರಿಸುವುದಿಲ್ಲ. ಹೀಗಾಗಿ ಮೈ-ಮುರಿದು ಕೆಲಸ ಮಾಡಲು ಮನಸಿಲ್ಲದೆ ಮೈಗಳ್ಳರನೇಕರು, ವಿಶೇಷ ತ್ರಾಸ ತೆಗೆದುಕೊಳ್ಳದೆ ಊಟ-ನಿಡಿಗೆ ದೊರೆಕಿಸಬಹುದಾದ ಭಿಕ್ಷುಕತೆಗೆ ಮೊರೆಹೊಕ್ಕಿದ್ದಾರೆ. ಕೆಲವರಂತೂ ಇದೊಂದು ಉದ್ಯೋಗವೆಂದೇ ಅವಲಂಬಿಸಿಕೊಂಡಿದ್ದಾರೆ. ಇಂತಹರು ಕೆಲವು ಭಿಕ್ಷುಕರಿಗೆ ಅನ್ನ-ವಸ್ತ್ರ ಕೊಟ್ಟು ಸಾಕಿ, ಅವರಿಗೆ ಬಂದ ಭಿಕ್ಷೆಯಿಂದ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ.

ಭಿಕ್ಷುಕತೆಯು ಅತಿ ಭಯಂಕರವಾದ ಪರಿಣಾಮವೆಂದರೆ, ಅನೇಕ ವಿಧದ ಘೋರತರ ಬೇನೆಗಳು ದೇಶದಲ್ಲೆಲ್ಲ ಹಬ್ಬುವಿಕೆಯೆನ್ನಬಹುದು. ಬಹಳ ಭಿಕ್ಷುಕರು ಕ್ಷಯ, ಮೈಲಿ, ಕುಷ್ಠರೋಗ ಮುಂತಾದ ಸೋಂಕುರೋಗಗಳಿಗೆ ಒಲಿಯಾದವರಿದ್ದಾರೆ. ಈ ರೀತಿಗಳು ಜನದಟ್ಟಣೆಯಿರುವ ಜಾತ್ರೆಗಳಲ್ಲಿ ಕ್ಷೇತ್ರಗಳಲ್ಲಿ ಸುಟ್ಟುಗೂಡುತ್ತಾರೆ. ರೇಲ್ವೆ ಗಾಡಿಗಳಲ್ಲಿ ಪ್ರಯಾಣ ಮಾಡುತ್ತಿರೆ ರಾತ್ರಿ ರಸ್ತೆಗಳ ಮೇಲೆಯೇ ಬೀಳುತ್ತಾರೆ, ಹಾಗೂ ಅಲ್ಲಿಯೇ ಮಲ-ಮೂತ್ರಾದಿಗಳನ್ನು ಸಹ ಮಾಡುತ್ತಾರೆ. ಇದರಿಂದ ಈ ರೋಗಗಳು ಒಬ್ಬರಿಂದೊಬ್ಬರಿಗೆ, ಒಂದು ಸ್ಥಳದಿಂದ ಸ್ಥಳಾಂತರಕ್ಕೆ ಹಬ್ಬುವುದು ಸಹಜವಾಗಿದೆ.

ಸೂಕ್ಷ್ಮವಾಗಿ ವಿಚಾರ ಮಾಡಿ ನೋಡಿದರೆ, ಹಣದ ದೃಷ್ಟಿಯಿಂದ ಸಹ ಈ ಭಿಕ್ಷುಕರನ್ನು ಬಿಕ್ಕೆ ಬೇಡುವುದಕ್ಕೆ ಅಲೆಯಬಿಡುವುದಕ್ಕಿಂತ ಅವರಿಗೆ ಒಂದು ತರದ ಏರ್ಪಾಡು ಮಾಡುವುದು ಜನತೆಗೆ ಹೆಚ್ಚು ಲಾಭದಾಯಕವಾಗಿದೆ. ಗ್ಲಾಸ್‌ಗೋನಿಯ ಇಸ್ಪಿಯ ಖಾನೇಸುಮಾರಿಯ ಪ್ರಕಾರ, ಹಿಂದುಸ್ತಾನದಲ್ಲಿದ್ದ ಒಟ್ಟು ೧೪ ಲಕ್ಷ ಜನ ಭಿಕ್ಷೆಯಿಂದ ಜೀವಿಸುವವರಿಗೆ ದಿನವೊಂದಕ್ಕೆ ೪ ಆಣೆಯಂತೆ ಹಿಡಿದರೆ, ಅವರ ಬಗ್ಗೆ ಒಂದು ವರ್ಷಕ್ಕೆ ಒಟ್ಟು ೨೫೧ ಕೋಟಿ ರೂಪಾಯಿ ಖರ್ಚಾದಂತಾಗುವುದು. ಇವರಲ್ಲಿ ಅರ್ಧದಷ್ಟು ಜನ ಯಾವುದಾದರೊಂದು ಉದ್ಯೋಗ ಮಾಡಿ ಜೀವಿಸಲು ಯೋಗ್ಯರಾದವರೆಂದು ಮೇಲೆಯೇ ಹೇಳಿದೆ. ಇವರಿಗೆ ತಕ್ಕ ಉದ್ಯೋಗ ದೊರೆಕಿಸಿ, ಉಳಿದ ಸುಮಾರು ೭ ಲಕ್ಷ ಜನರಿಗೆ ಕಟ್ಟು-ನಿರ್ಬಂಧಗಳನ್ನು ಹಾಕಿ, ಅವರಿಗೆ ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೆ ಒಬ್ಬೊಬ್ಬನ ಸಲುವಾಗಿ ೧೦-೧೫ ರೂ. ತಿಂಗಳಿಗೆ ಖರ್ಚು ಮಾಡಿದರೂ, ಸುಮಾರು ೧೫ ಕೋಟಿಯಾಗುವುದು. (ಇದರಿಂದ ಜನತೆಗೂ ತ್ರಾಸ ಕಡಿಮೆಯಾಗುವುದು. ಕೆಲ-ಕೆಲವು ಭಿಕ್ಷುಕರಲ್ಲಿ ಶ್ರೀಮಂತರು ಸಹ ಇರುತ್ತಾರೆ. ಇಂಥವರು ಈ ವೃತ್ತಿಯನ್ನು ಒಂದು ಉದ್ಯೋಗವೆಂದೇ ಅವಲಂಬಿಸಿದವರು. ಮುಂಬಯಿಯಲ್ಲಿ ಸ್ವಲ್ಪ ದಿನಗಳ ಹಿಂದೆ ತೀರಿಕೊಂಡ ಒಬ್ಬ ಭಿಕ್ಷುಕನ ಹತ್ತಿರ ಸುಮಾರು ಹತ್ತು ಸಾವಿರ ರೂಪಾಯಿಗಳು ದೊರೆತುವಂತೆ. ಇಂತಹದಕ್ಕೆ ತದೆಯಾದಂತಾಗುವುದು.

ಸನ್ ೧೯೩೧ನೆಯ ಇಸ್ಪಿಯಲ್ಲಿ ಲಖನೌದ ನಾಗರಿಕರು, ತಮ್ಮ ಪಟ್ಟಣದ ಭಿಕ್ಷುಕರ ಸಲುವಾಗಿ ವರ್ಷವೊಂದಕ್ಕೆ ೪೦೦ ರೂ. ಖರ್ಚು ಮಾಡುತ್ತಿದ್ದರಂತೆ. ಅದರಂತೆಯೆ ಮುಂಬಯಿಯವರು ತಮ್ಮಲ್ಲಿಯ ೫೦೦೦ (ಐದು ಸಾವಿರ) ಭಿಕ್ಷುಕರ ಸಲುವಾಗಿ ವರ್ಷಕ್ಕೆ ೯ ಲಕ್ಷ ರೂ.ಯಂತೆ ಖರ್ಚು ಮಾಡುತ್ತಿದ್ದರು. ಆದರೆ ಇಷ್ಟೇ ಖರ್ಚಿನಲ್ಲಿ ಭಿಕ್ಷುಕರೆಲ್ಲರನ್ನು ವ್ಯವಸ್ಥಿತವಾಗಿ— ಜನರಿಗೆ ತೊಂದರೆಯಾಗದಂತೆ—ಅವರ ರೋಗ-ರುಜಿನಗಳು ಬೇರೆಯವರಲ್ಲಿ ಹಬ್ಬದಂತೆ ಇಡಬಹುದಾಗಿತ್ತು.

ಡಾ. ಜೆ. ಎಸ್. ಕುಮಾರಪ್ಪನವರು ಪ್ರಕಟಿಸಿದ "Our Beggar problem" (ನಮ್ಮ ಭಿಕ್ಷುಕರ ಸಮಸ್ಯೆ) ಎಂಬ ಪುಸ್ತಕದಲ್ಲಿ ಬರೆದಂತೆ "ನೀವು ಯಾತಕ್ಕೆ ಭಿಕ್ಷೆ ನೀಡುತ್ತೀರಿ?" ಎಂಬ ಪ್ರಶ್ನೆಗೆ ಕೆಳಗಿನಂತೆ ವಿಧವಿಧವಾಗಿ ಉತ್ತರಗಳು ಬರಬಹುದು:

ಉತ್ತರ	ಜನರ ಸಂಖ್ಯೆ
"ನಮಗೂ ಒಂದು ದಿನ ಅದೇ ಸ್ಥಿತಿ ಬರಬಹುದು."	೮
"ನನ್ನ ಮನಸ್ಸಿಗೆ ವೇದನವಾಗುತ್ತದೆ." "ನನ್ನಿಂದ ನೋಡಲಾಗುವುದಿಲ್ಲ."	೫
"ಅವರು ಕೊಡುವ ಆಶೀರ್ವಾದ-ಹರಕೆಗಳಿಗೆ ಅವರಿಗೇನಾದರೂ ಕೊಡಬೇಕು."	೩
"ಅವರಿಗೆ ಯಾರಾದರೂ ಸಹಾಯ ಮಾಡಲೇ ಬೇಕು."	೬
"ಭಿಕ್ಷೆ ನೀಡುವುದು ಧರ್ಮದ ಕೆಲಸ"	೧
"ಪ್ರತಿಯೊಬ್ಬನು ತನ್ನ ಸ್ವಂತದ ಕೊಂತೆಗಳಿಗಷ್ಟೇ ಲಕ್ಷ್ಯ ಕೊಡದೆ, ಉಳಿದವರ ಸಲುವಾಗಿಯೂ ವಿಚಾರ ಮಾಡಬೇಕು."	೨

" ನನಗೆ ಏನಾದರೂ ಕೊಡುವ ಎಂದೆನಿಸಿತು." ೧
" ಯಾವ ತರದ ಕಾರಣವೂ ಇಲ್ಲ, ಸುಮ್ಮನೆ." ೧

೭೬

ಹಿಂದುಸ್ಥಾನವು ಊರ್ಜಿತ ಸ್ಥಿತಿಗೆ ಬರಬೇಕಾದರೆ, ಭಿಕ್ಷುಕತೆಯು ನಿವಾರಣೆಯಾಗುವುದು ಅತ್ಯವಶ್ಯ. - ಯಾರೋ ಒಬ್ಬರು ಒಮ್ಮೆ ಹೇಳಿದಂತೆ " ಯಾವುದೊಂದು ದೇಶದ ಸ್ಥಿತಿಯನ್ನು ಅಲ್ಲಿರುವ ಭಿಕ್ಷುಕರ ಸಂಖ್ಯೆಯ ಮೇಲಿಂದ " ಗೊತ್ತು ಮಾಡಬಹುದು. ಭಿಕ್ಷುಕತೆಯು ಹಿಂದುಸ್ಥಾನದಲ್ಲಿ ಉಳಿಯುವುದಕ್ಕೆ ಕಾರಣವಾವುದೂ ಇಲ್ಲ. ಸರಕಾರವು ಸುಮ್ಮನೆ ಕಾಗದದ ಮೇಲೆ ಕಾಯಿದೆ-ಕಟ್ಟಳೆಗಳನ್ನು ಬರೆದು ಅಸೆಂಬ್ಲಿ, ಕೌನ್ಸಿಲ್ಲುಗಳಲ್ಲಿ ಪಾಸು ಮಾಡಿದರೆ, ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಭಿಕ್ಷುಕರ ಸಲುವಾಗಿ ಬೇರೆ ಬೇರೆ ಕಟ್ಟಡ, ಹಾಗೂ ತಕ್ಕ ವ್ಯವಸ್ಥೆಗಳು ಇರುವುದು ಅವಶ್ಯಕ. ಇವೆರಡೂ ಇಂದಿದ್ದರೆ ಭಿಕ್ಷುಕನಿಗೆ ಭಿಕ್ಷೆ ಬೇಡುವ ಹೊರತು ಬೇರೆ ಉಪಾಯವೇ ಇರುವುದಿಲ್ಲ. ಹಾಗೂ ಜನತೆಗಾದರೂ ಅವರನ್ನು ತೊಲಗಿಸಲು ಬೇರೆ ಉಪಾಯವಿಲ್ಲದೆ, ಏನಾದರೂ ಕೊಡಲೇ ಬೇಕಾಗುತ್ತದೆ. ಸರಕಾರದ ಈ ಪ್ರಯತ್ನಕ್ಕೆ ಜನರ ಬೆಂಬಲವೂ ಬೇಕೇ ಬೇಕು. ಅವರು ಭಿಕ್ಷುಕತೆಯ ವಿರುದ್ಧ ನಿಂತ ಹೊರತು ಭಿಕ್ಷುಕನು ಹಿಂದುಸ್ಥಾನದಿಂದ ಹೋಗುವುದಿಲ್ಲ.

(೨೬ನೆಯ ಪುಟದಿಂದ ಮುಂದೆಸಾಗಿದ್ದು)

ದೀಪಾವಳಿ! ಆತನಕವೂ ಇಂಥ ಉತ್ಸವ-ಮೆರವಣಿಗೆಗಳು ಮುದ್ದಿನ ಮನೆಗಳಲ್ಲಿ ಕೊಳ್ಳಿಯೆತ್ತಿ, ಕುಣಿದಾಡುವ ಕೋತಿಗಳ ಕೋಲಾಹಲವೇ ಸರಿ. ಇರಲಿ ಮುಕ್ತಾ! ಆಗ ಅಂದಂತೆ ಹಾಡು ಕೇಳಿಸುವೆಯಾ ? ಕಾಫಿಯಂತೂ ಹೋಯಿತು.

ಮೋಹಿನಿ:— ಆದರೇನು ಮಾಫೀ ಸಿಕ್ಕಿತಲ್ಲ! ಮುಕ್ತೆ, ನಾನು ಹೋಗಿ ಕಾಫಿ ಮಾಡಿ ತರುವೆನು. ನೀನು ಹಾಡು.. ಮುಕುಂದ ಮೆಚ್ಚುವಂತೆ ಹಾಡು..ಪ: ಹ: ಹ: (ನಗುತ್ತ ಒಳಗೆ ಓಡುವಳು.) (ಮುಕ್ತೆ ಹಾಡುವಳು:)

"ಬಂತು ದಿವ್ಯ ದೀಪಾವಳಿ
ಎಂತು ಜನಕೆ ರಸದೋಕುಳಿ!
ಕಾಂತಿ ಸುಖದಿ ಕಾಂತಿ ಮುಖದಿ
ಸಗೆ ನಲುವಿನ ನೆನೆ ಹಾವಳಿ!
ಮೈಗೆ ಗಂಧ ಚಂದನಾ
ಮನೆ ಮನೆಗೂ ನಂದನಾ"

(ಹಾಡಿನ ಕೊನೆಯೊಂದಿಗೆ ದೃಶ್ಯ ಕೊನೆಗೊಳ್ಳುವುದು.)

ನಿರೀಕ್ಷೆ

ಶ್ರೀ. ಕೆ. ಜಿ. ಶಾಸ್ತ್ರಿ, ಬಿ.ಎ. (ಆನರ್ಸ್)
ಗೋಕರ್ಣ

ಯಮುನೆಯ ಕಲಕಲ
ಸರಿಯಿತು ಪಲಪಲ
ಮೆರೆಯುತೊ ತಡಿಹಸಿರು...
ನೊರೆಯಿತೊ ನಿಡಿದುಸಿರು.

ಕಂಪು-ತಂಪುಗಳ ಸಾರೆ ತಂದಿತೋ
ಸೊಗಯಿಸುಪೆಲರಿನ ಸವಿಸುಯಿಲು—
ಕೊಂಬೆ-ಕೊಂಬೆಯಲಿ ಕೂಗಿ ಬಂದರೂ
ಬೆಳೆಯಿತು ಹೃದಯದ ಹೊರೆಕಿವಿಯಿಲು.

ದೂರ-ದೂರಕೂ ದಿಟ್ಟಿ ಹಾಯಿಸಲು
ಬೆಟ್ಟ ಬಾನೆ ಕಂಡಳು ರಾಧೆ—
ನೀರನೇತಕೋ ಕಾದಿ ನೋಡುವನು
ಬಲ್ಲೆನಿದೆಂದುಂಡಳು ಬಾಧೆ.

* * * *

ನೋವು ಮುನಿಸಿಗ ತರೆ, ಬೇಗ ಬೆಳೆದು ಬರೆ
ಕಾವು ಏರಿತಹ ಕೆಳತಿಲೆಗೂ—
ಕಾವುದೆಂದು ಎದೆ ಬಾಯ ಬಿಟ್ಟಿತೋ
ತಾಳಲಾರದೆಯೆ ಕೊನೆವರೆಗೂ....

ಕೇಳಿತು ಕೊಳಲು— ಹಾರಿತು ಅಳಲು,

ಹೊಳೆಯಲಿ ನೆಗೆಯಿತು ಅಲೆಯಲೆಯೋ
ದಡದಲಿ ನುಡಿಯಿತು ಎಲೆಯೆಲೆಯೋ
ಎದೆ ಬಡಿದೋಯಿತು; ಅದೊ ಅದೆಕೋ
ಬಂದಿದಾ ಬಂದಾ ಮುರಲೀಧರಾ!

ಇಂದಿನ ಕರ್ನಾಟಕಕ್ಕೆ
ಏಕೀಕರಣವೊಂದೇ ಕಲ್ಪವೃಕ್ಷ

(ಉತ್ತರಾರ್ಧ)

ಶ್ರೀ. ಮುಂಗಳವೀಡು ಶ್ರೀನಿವಾಸರಾಯರು, ಹುಬ್ಬಳ್ಳಿ

★

ಕನ್ನಡ ನಾಡು ಒಂದುಗೂಡಿದರೆ ಕನ್ನಡ ಜನರಿಗೆ ಏನು ಕಡಿಮೆ? ಬುದ್ಧಿ ಕಡಿಮೆಯಿಲ್ಲ, ಬಲ ಕಡಿಮೆಯಿಲ್ಲ;
ಅನ್ನ ಕಡಿಮೆಯಿಲ್ಲ, ಐಶ್ವರ್ಯ ಕಡಿಮೆಯಿಲ್ಲ. 'ಬದುಕು, ಬದುಕಗೂಡು!' ಎಂಬ ಅರುಹಿನಿಂದ
ಬಾಳಿದರೆ, ನಾವೆಲ್ಲ ಶಾಂತಿ-ಸುಖಗಳಲ್ಲಿ ಓಲಾಡುವೆವು!

ಒಂದೇ ಪಂಥದವರೂ, ಸಮಾಜದಲ್ಲಿ ಗಣ್ಯಸ್ಥಾನ ಪಡೆದವರೂ, ಮುಂದುವರಿದವರೂ ಆದ ವೀರಶೈವರ ಸಂಖ್ಯೆಗೆ ರಾಜಕಾರಣದಲ್ಲಿ ಬೆಲೆ, ಯೋಗ್ಯ ಸ್ಥಳ ಯಾವಾಗಲೂ ಇದ್ದೇ ಇದೆ. ಆದರೆ ಜಾತ್ಯಂಧತೆಯಿಂದ ವೀರಶೈವರೆಲ್ಲರೂ ಕಾರ್ಯಪ್ರವೃತ್ತರಾದರೆ, ಪ್ರಾಂತಕ್ಕೂ ವೀರಶೈವ ಸಮಾಜಕ್ಕೂ ಹಾನಿ ತಪ್ಪದಿರಲಾರದೆಂಬುದನ್ನು ವೀರಶೈವರು ಅರಿಯದಷ್ಟು ಮೂರ್ಖರೂ ಅಲ್ಲ, ಹುಂಬರೂ ಅಲ್ಲ. ವಿದ್ಯೆ, ಸಂಸ್ಕೃತಿ, ಸೇವಾಬುದ್ಧಿ, ರಾಷ್ಟ್ರದ ಹಿತಗಳಿಂದ ಪ್ರೇರಿತರಾದ ಸಮಾಜದ ವ್ಯಕ್ತಿಗಳು ಮುಂದೆ ಬಂದು, ಸಾರ್ವಜನಿಕ ಜೀವನದಲ್ಲಿ ಭಾಗವಹಿಸುತ್ತ ಹೋದಂತೆ, ಅವರೇ ಅಲ್ಪಸಂಖ್ಯಾಕರ ಕೈವಾರಿಗರಾಗಬಲ್ಲರು. ಹಲಕೆಲವು ವ್ಯಕ್ತಿಗಳು ಇಂದು ಸಂಕುಚಿತ ಭಾವನೆಯಿಂದ ಕೂಡಿದವರಾಗಿದ್ದಾರೆ; ಈ ಪರಿಸ್ಥಿತಿ ಬಹು ಕಾಲ ನಿಲ್ಲಲಾರದು. ಅದು ಕ್ಷಣಿಕವಾದದ್ದು. ಮತ್ತು ಎಲ್ಲ ಜಾತಿಯವರಲ್ಲೂ ಕೆಲವು ಅಂಶದಿಂದ ಕಿಡಿಗೇಡಿ ಜೀವಿಗಳು ಇದ್ದೇ ಇರುತ್ತವೆ. ಕೇವಲ ವಾದಕ್ಕಾಗಿ ವೀರಶೈವರೆಲ್ಲ ಜಾತ್ಯಂಧರಾಗಿಯೇ ಮುಂದೆ ಸಹ ವರ್ತಿಸುವರೆಂದು ಇಟ್ಟುಕೊಂಡರೂ, ಉಳಿದ ಜಾತಿಗಳ ಜನರು ಈ ಅನ್ಯಾಯವನ್ನು ಎದುರಿಸದಷ್ಟು ನಿರ್ಬಲರಾಗಿದ್ದರೆ, ಕರ್ನಾಟಕಕ್ಕೆ ಭವಿತವ್ಯವೇ ಇಲ್ಲ. ಕರ್ನಾಟಕವು ಜಗತ್ತಿನಲ್ಲಿ ಜೀವಂತವಾಗಿರಲು ಯೋಗ್ಯತೆಯದಲ್ಲವೆಂದೆನ್ನಬೇಕಾಗುವುದು. ಈ ತರದ ಕೈಲಾಗದ ಕೇಡಿಗಳ ಕಲ್ಪನೆಯು ಕರ್ನಾಟಕದಲ್ಲಿ ಯಾರಲ್ಲಿಯೂ ಇಲ್ಲ. 'ಜಾತ್ಯಂಧತೆಯು ವೀರಶೈವರಲ್ಲದೆ, ಮುಂದೆಯೂ ಹಾಗೆಯೇ ಇದ್ದೇ ತೀರುವುದು!' ಎಂದು ಅಜ್ಞಾನದಿಂದ ಊಹಿಸಿದರೂ, ಪರಿದು ಹಂಚಿಹೋದ ಕರ್ನಾಟಕದಲ್ಲಿ ಈಗಿದ್ದ ಪರಿಸ್ಥಿತಿಯೇ ಮುಂದೆ ಕರ್ನಾಟಕದಲ್ಲಿ ಸದಾ ಸರ್ವದಾ ಉಳಿಯಲಾರದೆಂಬುದು ನಿಶ್ಚಿತ. ಯಾಕೆಂದರೆ ಆರ್ಥಿಕದೃಷ್ಟಿಯಿಂದ ಕರ್ನಾಟಕಕ್ಕೆ ಬಹು ಉಜ್ವಲವಾದ ಭವಿಷ್ಯವಿದೆ. ನಮ್ಮಲ್ಲಿದ್ದ ಅನೇಕ ನದಿಗಳಿಂದ ಕಾಲುವೆಯ ರೂಪವಾಗಿ ನೀರು ನಮ್ಮ ಹೊಲಗಳಿಗೆ ಹರಿದುಬಂದರೆ, ಎಲ್ಲ ಜಾತಿಯವರಿಗೂ ನೀರು ಸಿಗುವುದು. ಎಲ್ಲರಿಗೂ ಭೂಮಿಯ ಫಲ ಇಮ್ಮಡಿ-ಮುಮ್ಮಡಿಯಾಗಿ ಬೆಳೆಯುವುದು. ಕಾರವಾರ ಬಂದರದಿಂದ ೪-೫ ಕೋಟಿ ರೂಪಾಯಿಗಳಷ್ಟು ವ್ಯಾಪಾರ ನಮ್ಮಲ್ಲಿ ಹರಿದುಬಂದು ನೆಲಸಿದರೆ, ಆದರ ಲಾಭ ಎಲ್ಲ ಜಾತೀಯರಿಗೂ ಹಂಚಿದೆ ಹೋಗದು.

ಪರರಾಷ್ಟ್ರದ ಚಕ್ರದಲ್ಲಿ ಮೂರುನೂರು ವರ್ಷಗಳಷ್ಟು ಕಾಲ ನಾವಿದ್ದುದರಿಂದ ಅವರು ಬಿಟ್ಟು ಹೋದ ಕೊಳಚೆಯಲ್ಲಿಯೇ ನಾವಿಂದು ತಿರುಗುತ್ತಿರುವುದನ್ನು ತಡೆಯಲೇಬೇಕು. ಸೂರ್ಯನು ತಮ್ಮ ಸಾಮ್ರಾಜ್ಯದಲ್ಲಿ ಮುಳುಗುವುದಿಲ್ಲೆಂದು ಬ್ರಿಟಿಷರು ಜಂಬ ಕೊಚ್ಚಿಕೊಳ್ಳುತ್ತಿದ್ದರು. ಇಂದು ಹಿಂದುಸ್ತಾನದಿಂದ ಕಾಲ್ತೆಗೆದುದರಿಂದ ಆ ಸಾಮ್ರಾಜ್ಯದ ಚಕ್ರ ಇಳಿಮುಖವಾಗಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಕತ್ತಲ ಬೀಳತೊಡಗಿದೆ! ಇತ್ತ ಇದೋ, ಈ ಭಾರತದಲ್ಲಿ ಮಾತ್ರ ಅಶೋಕ ಸಮ್ರಾಟನ ಉಜ್ವಲವಾದ ಚಕ್ರ ಉದಯವಾಗಿದೆ!! ಇದೇ ಬೆಳಕು ಹಬ್ಬಾಗುವುದು ನಿಶ್ಚಯ. ಈ ಬೆಳಕಿನಲ್ಲಿ, ಸಮಾಜಸತ್ತಾತ್ಮಕವಾದ ಇಂದಿನ ಯುಗದಲ್ಲಿ ಜಾತ್ಯಂಧತೆ ಈ ಮುಂದೆ ಉಳಿಯಲಾರದು. ಇನ್ನು ವೀರಶೈವ ಜಾತ್ಯಂಧರಿಗಾಗಿಯೇ ಕಳಕಳಿಯ ಒಂದು ಅಪಾತ್ಮಲೋಚನೆಯನ್ನು ತಿಳಿಸುತ್ತೇನೆ. ತಮ್ಮ ಪರಿಪಕ್ವವೇದ್ದ ದೂಷಿತವಾದ ವಾತಾವರಣವನ್ನು ಅವರು ಕಂಡಾವಿವಾರೆ. ಈ ಪರಿಸ್ಥಿತಿಗೆ ಬ್ರಿಟಿಷ್ ರಾಜ್ಯದ ಸೂತ್ರಗಳೇ ಕಾರಣವಿರಲಿ, ಮತ್ತಾವುದೇ ಒಂದು ಕಾರಣವಿರಲಿ, ಸದ್ಯಕ್ಕೆ ಈ ಪರಿಶೀಲನೆಯ ಗೊಡವೆಗೆ ಹೋಗದೆ, ಎಲ್ಲ ವೀರಶೈವ ಮುಂದಾಳುಗಳೂ ಕೂಡಿ, ಇಂದು ಅಧಿಕಾರಯುಕ್ತ ಪ್ರಕಟನೆ ಹೊರಡಿಸಿ, ವೀರಶೈವೇತರರು ಕೆಂಚಿತ್ತಾದರೂ ಈ ಸ್ವಾತಂತ್ರ್ಯಯುಗದಲ್ಲಿ ಬೆದರುವ ಕಾರಣವಿಲ್ಲೆಂದು ಘೋಷಿಸಿ ಆಶ್ವಾಸನವನ್ನಿತ್ತರೆ, ನಮ್ಮ ಭಾರತದ ಧ್ವಜದಲ್ಲಿ ಕಂಗೊಳಿಸುವ ಆ ಉಜ್ವಲ ಚಕ್ರವನ್ನು ತೇಜಸ್ವಿಯಾಗಿ ಕರ್ನಾಟಕದಲ್ಲಿ ತಿರುಗಿಸಲು ನಮ್ಮ

ವೀರಶೈವ ಬಾಂಧವರು ನಿರವಾದಂತಾಗಿ, ತಮ್ಮ ಕೀರ್ತಿಯನ್ನು ಏರತ್ವದಿಂದ ಬೆಳಗಿಸಿದಂತಾಗುವುದಿಲ್ಲವೇ ?

ಇತ್ತ ಅಲ್ಪಸಂಖ್ಯಾಕರೆಂಬ ಭೀತಿಯಿದ್ದವರು ಏಕೀಕರಣ ಚಳವಳಿಯ ಕೊನೆಯ ಅಂಕದಲ್ಲೀಗ ವಿರೋಧ ಪ್ರದರ್ಶಿಸಲು ಮುಂದುವರೆದುದು ದುರ್ದೈವದ ಸಂಗತಿ ಜಗತ್ತಿನ ಕಲ್ಯಾಣ ದೃಷ್ಟಿಯಿಂದ ರಾಷ್ಟ್ರಸಂಘದವರೂ, ಭಾರತದ ಹಿತದೃಷ್ಟಿಯಿಂದ ಘಟನಾ ಸಮಿತಿಯವರೂ ಅಲ್ಪಸಂಖ್ಯಾಕರ ವಿಷಯದಲ್ಲಿ ಸಾಕಷ್ಟು ಮುಂಜಾಗ್ರತೆಯ ನಿಯಮಾವಳಿಗಳನ್ನು ಮಾಡಿದ್ದಾರೆ. ಇಡೀ ಭಾರತದಲ್ಲೆಲ್ಲ ಈ ಕಾನೂನುಗಳು ಅನ್ವಯಿಸುತ್ತವೆ. ಎಂದ ಮೇಲೆ ಭಯಪಡುವುದೇಕೆ ? ಭಯಕ್ಕೆ ಬಲಿಬಿದ್ದು ಗದಿಬಿಡಿಯಿಂದ ತಲೆಕೆಡಿಸಿಕೊಳ್ಳುವುದಕ್ಕಿಂತ, ಶಿಸ್ತಿನಿಂದ ಸಂಘಟಿತರಾಗಿ, ಬಲಶಾಲಿಗಳಾಗಿ ಸಮಾಜ ಸತ್ಕೃಯ ಈ ದಿನಗಳಲ್ಲಿ ತಮ್ಮ ಹಕ್ಕನ್ನೂ ಪ್ರತಿಪಾದಿಸುವುದು ಉಚಿತ. ಹಕ್ಕು ಪ್ರತಿಪಾದಿಸುವುದೆಂದರೆ ಏಕೀಕರಣವಾದಾಗ ತಾವು ಅನ್ಯಾಯದಿಂದ ತುಳಿಯಲ್ಪಡುವರೆಂದು ಭಾವಿಸುವುದು ತಪ್ಪುದಾರಿ. ಕರ್ನಾಟಕ ಪ್ರಾಂತವು ಪ್ರತ್ಯೇಕವಾಗಿ ನಿರ್ಮಿಸಲ್ಪಟ್ಟಾಗ, ಅದಂದಿನ ಇಡೀ ಕರ್ನಾಟಕ ಕುಲಕ್ಕೇನೇ ಪ್ರಾಪ್ತವಾಗುವ ಲಾಭದಾಯಕ ಸಂದರ್ಭಗಳ ಕಡೆಗೆ ಪೂರ್ತಿಯಾಗಿ ಲಕ್ಷ್ಯ ಹಾಕುವ ! ಜಿಲ್ಲೆಯಾಗಿ ಅಲ್ಲಿ ಇಲ್ಲಿ ನಣ್ಣ ಪುಟ್ಟ ಮುಳ್ಳುಗಳು ನೆಡುತ್ತಿದ್ದರೂ, ಪ್ರತ್ಯೇಕ ಪ್ರಾಂತದಿಂದ ಒದಗಿ ಬರುವ ನನ್ಮೆ ಶಕ್ತಿ ಮುಂದಲೇ ಅವನ್ನು ಕಿತ್ತೊಗೆಯುವ !

ಅಲ್ಪಸಂಖ್ಯಾಕರಲ್ಲಿ ಬ್ರಾಹ್ಮಣವರ್ಗದವರೂ ಬೆದರತಕ್ಕವರಿದ್ದರೆ ಅವರು ಬ್ರಾಹ್ಮಣರೇ ಅಲ್ಲವೆಂದೆನ್ನಬೇಕಾಗುತ್ತದೆ. ಯಾಕೆಂದರೆ ಬ್ರಾಹ್ಮಣರು ಬಹುಸಂಖ್ಯಾಕರಿದ್ದಿಲ್ಲ; ಈಗಲೂ ಇಲ್ಲ; ಮುಂದೆಯೂ ಆಗುವುದಿಲ್ಲ ಜಾತಿಯ ಸಂಖ್ಯಾಬಲ ಬ್ರಾಹ್ಮಣರ ಒಲವೇ ಇಲ್ಲ. ತಮ್ಮ ಬುದ್ಧಿಮತ್ತೆಯ ಬಲದಿಂದಲೂ, ತಿಳಿಮಾದ ತಿಳಿವಳಿಕೆಯಿಂದಲೂ, ಸಮಾಜಸೇವಾ ದೀಕ್ಷೆಯಿಂದಲೂ. ಸಾತ್ತ್ವಿಕ ವೃತ್ತಿಯಿಂದಲೂ ಬ್ರಾಹ್ಮಣರು ಈ ಜಗತ್ತಿನಲ್ಲಿ ಬಾಳಿದ್ದಾರೆ. ಹಾಗೂ ಈ ಸದ್ಗುಣಗಳ ಪ್ರಭಾವದಿಂದ ಪ್ರಸಂಗ ಬಿದ್ದಾಗೆಲ್ಲ ಅಳಿದ್ದಾರೆ. ಅಳಿಕೆಯ ದಿನಗಳು ಬಳಿಯುತ್ತಿದ್ದರೆ ಗಟ್ಟಿಗತನದ ಬಾಳಿಕೆಯಲ್ಲಿ ವಿಶ್ವಾಸವಿರಲಿ. ಬಾಳಿಕೆಯಿಂದಲೇ ಜಗತ್ತಿಗೆ ಬೆಳಕನ್ನು ತೋರಿಸುವ ತಮ್ಮ ಸದ್ಗುಣಗಳ ಉಜ್ವಲವಾದ ಪರಂಪರೆಯನ್ನು ನೆನೆದು, ಕೇವಲ ಸಾತ್ತ್ವಿಕವಾದ ಸೇವಾದೀಕ್ಷೆಯನ್ನು ಸ್ವೀಕರಿಸಿದರೆ ಮಾತ್ರ ಜಗತ್ತಿಲ್ಲ ಬ್ರಾಹ್ಮಣರು ಪಂಥ್ಯರಾಗಿ ಉಳಿಯುವ ಸಂದರ್ಭವು ಪುನಃ ನಿರ್ಮಾಣವಾಗುವುದು. ಈ ಮಟ್ಟಿಗೆ ಒರಲು ಅತಂಕಗಳಿದ್ದರೂ, ಅವನ್ನು ಹಿಂದಕ್ಕೆ ಸರಿಸಿ, ರಂಟಕಗಳಿಂದ ಮೇಲಕ್ಕೆದ್ದು ಒರುವ ಒಬ್ಬಿಮತ್ತೆಯನ್ನು ಇಡೀ ಸಮಾಜವು ಕಳೆದುಕೊಂಡಿದ್ದರೆ ಏನಾಗ್ತು ಬ್ರಾಹ್ಮಣ ಸಮಾಜಕ್ಕೆ ಭವಿಷತ್ಕಾಲವೇ ಇಲ್ಲವೆನ್ನಬೇಕಾಗುವುದು ಅದರ ಇಂತಹ ಹೀನ ದೀನ ಪರಿಸ್ಥಿತಿಯಲ್ಲಿ ಬ್ರಾಹ್ಮಣ ಸಮಾಜವಿರುವುದಿಲ್ಲ, ಸಮಾಜದಲ್ಲಿಯ ಇಂದಿನ ಮುಖ್ಯದೋಷವೆಂದರೆ ಸಮಾಜದ ಗಣ್ಯವ್ಯಕ್ತಿಗಳಲ್ಲಿ ಬಹುಸಂಖ್ಯಾಕರು ತಮ್ಮ ಮಟ್ಟಿಗೆ ವಿಚಾರ ಮಾಡುವುದು; ಎಂದರೆ ಸ್ವಾರ್ಥದ ಕಡೆಗೆ ಹೆಚ್ಚು ಲಕ್ಷ್ಯ ಹಾಕುತ್ತ ಇಡೀ ಸಮಾಜದ ಕಲ್ಯಾಣದ ಕಡೆಗೆ ಗಮನಿಸದಿರುವುದು. ಈ ಒಳಗಿನ ಹುಳುಕು ಹಾರಿಹೋದರೆ ಮಾತ್ರ ಸಂಘಟನೆ-ತಿಸ್ತುಗಳಿಗೆ ಎಡೆಯುಂಟಾಗುವುದು.

ಕರ್ನಾಟಕದ ಇನ್ನಿತರ ಅಲ್ಪಸಂಖ್ಯಾಕರಾದ ಕ್ಷತ್ರಿಯ, ದೇವಾಂಗ, ರಡ್ಡಿ, ಕುರುಬ, ಮುಹಮ್ಮದೀಯ ಇತ್ಯಾದಿ ವರ್ಗದವರೆಲ್ಲರೂ, ತಮ್ಮ ತಮ್ಮ ಸಮಾಜವು ಬೇರೆಬೇರೆಯಾದ ರಾಷ್ಟ್ರದ ಘಟಕಗಳೆಂದೂ ತಾವು ಅಲ್ಪಸಂಖ್ಯಾಕರೆಂದು ಗಣಿಸುವ ಪ್ರವೃತ್ತಿ ಬ್ರಿಟಿಶರ ಅಳಿಕೆಯಿಂದ ತಲೆದೋರಿದ್ದು, ಸಮಾಜದವರ ಶಿಕ್ಷಣ-ಸಂಘಟನೆಗಳಿಗಾಗಿಯೂ ಪ್ರಯತ್ನಗಳು ನಡೆದಿವೆ. ಬ್ರಿಟಿಶರು ಹಿಂದುಸ್ತಾನ ಬಿಟ್ಟಿದ್ದರಿಂದ ಈ ಮುಂದೆ ಎಲ್ಲ ಜಾತಿ-ಪಂಗಡಗಳ ಧ್ಯೇಯ, ಧೋರಣ, ಆಕಾಂಕ್ಷೆಗಳ ರೂಪವೇ ಬದಲಾಗತಕ್ಕದ್ದಿದೆ. ಇದಕ್ಕೆ ಕೆಲ. ಕಾಲ ಸಂದಬೇಕು. ಇನ್ನು ಹತ್ತುವರ್ಷಗಳನಂತರ ಈ ಯಾವ ಸಂದರ್ಭವೂ ಉಳಿಯಬಾರದು. ಕರ್ನಾಟಕ ಕುಲಬೊಂದೇ ಉಳಿದು ಭಾರತಕುಲದ ಕಲ್ಯಾಣದಲ್ಲಯೇ ಮಿಲನ ಹೊಂದಿ, ವಿಶ್ವಕುಲವೊಂದನ್ನು ನಿರ್ಮಾಣಮಾಡುವ ಶಕ್ತಿ ಈ ನಾಡಿಗೆ ರಾಷ್ಟ್ರಕ್ಕೆ ಬರಲಿದೆ. ಈ ಮಹತ್ತರವಾದ ಧ್ಯೇಯದ ಕಡೆಗೇನೆ ನಮ್ಮ ಲಕ್ಷ್ಯ ವೇಧಿಸಲಿ.

ಕರ್ನಾಟಕದಲ್ಲಿ ವೀರಶೈವರು ಬಹುಸಂಖ್ಯಾಕರಲ್ಲ ಬ್ರಾಹ್ಮಣ, ದೇವಾಂಗ, ಕ್ಷತ್ರಿಯ, ವೈಶ್ಯ, ರಡ್ಡಿ, ಕುರುಬ, ಮುಹಮ್ಮದೀಯ ಅಸ್ಪೃಶ್ಯ ಇತ್ಯಾದಿಗಳೆಲ್ಲರೂ ಪ್ರತ್ಯೇಕವಾಗಿ ತಾವು ಅಲ್ಪಸಂಖ್ಯಾಕರೆಂದು ಕೂಗು ಎಬ್ಬಿಸಿದರೆ ಅದು ನಿರರ್ಥಕ. ಕರ್ನಾಟಕದಲ್ಲಿ ಸಂಖ್ಯಾಬಲದಿಂದ ಯಾರೂ ಬಹುಸಂಖ್ಯಾಕರಿಲ್ಲ. ಪಾಕಿಸ್ತಾನದಲ್ಲಿ ನೂರಕ್ಕೆ ಅಂಜರಷ್ಟು ಮುಹಮ್ಮದೀಯ ಸಂಖ್ಯೆಯಿದ್ದಂತೆ, ಬಹುಸಂಖ್ಯಾಕರಾರೂ ಕರ್ನಾಟಕದಲ್ಲಿ ಇರುವುದಿಲ್ಲ ಇನ್ನು ಯುರೋಪದಲ್ಲೆಲ್ಲ ಕ್ರಿಶ್ಚನ್ನರೇ ತುಂಬಿದ್ದಾರೆ; ಆದರೆ ಯುರೋಪದ ರಾಷ್ಟ್ರಗಳು ತಮ್ಮತಮ್ಮಲ್ಲಿಯೇ ಎಂದರೆ ಒಂದೇ ವರ್ಗದವರೇ— ಸಣಸಾಟ ಹೂಡಿ, ಬಡಿದಾಡಿ ಇಡೀ ಪ್ರಪಂಚವನ್ನೇ ದುಃಖಕ್ಕೀಡುಮಾಡಿಲ್ಲವೇ ? ಒಂದೇ ಮೇಲೆ, ಒಂದೇ ಧರ್ಮ ಅಥವಾ ಜಾತಿಯವರು ಒಕ್ಕಟ್ಟಿನಿಂದ ಕೂಡಿ ಇದ್ದು ಅನ್ಯಧರ್ಮ ಮತ್ತು ಜಾತೀಯರ ಮೇಲೆ ಅನ್ಯಾಯದಿಂದ ಬೀಳುಸರಂಬ ಮಾತಿನಲ್ಲಿ ಹುರುಳಿಲ್ಲ. ಬ್ರಿಟಿಶ ರಾಜತಂತ್ರದಿಂದ ನಮ್ಮ ರಾಷ್ಟ್ರದಲ್ಲಿ ಧರ್ಮಾಂಧತೆ ಬೆಳೆದು ಬಂದುದರಿಂದ ಅಲ್ಲೋಲಕಲ್ಲೋಲವಾಗಿದೆ. ಈ ಅಬ್ಬರ ಇನ್ನು ಮುಂದೆ ನಿಲ್ಲಲಾರದು. ಕನಿಷ್ಠ ಹತ್ತು ವರ್ಷಗಳವರೆಗಾದರೂ ಕೇಂದ್ರ ಸಾವಧಾನದಿಂದ ಎಲ್ಲರೂ ನೀರೀಕ್ಷಿಸಲಿ: ಅದೆಂತಹ ಹೊ

ನೊಂದು ಅಪೇಕ್ಷಣೀಯವಾದ ಸಮಾಜ ನಿರ್ಮಾಣವಾಗುವು-
ಸಂಬುದನ್ನು ಕಣ್ಣಾಟ್ಟ ನೋಡಬಹುದು.

(೩) ಕಲ್ಪವೃಕ್ಷವು ಹೇಗೆ?

ಇಂದಿನ ಕರ್ನಾಟಕಕ್ಕೆ ಏಕೀಕರಣವೊಂದೇ ಕಲ್ಪವೃಕ್ಷವೆಂದು
ಈ ಲೇಖನಕ್ಕೆ ಹೆಸರುಕೊಡಲಾಗಿದೆಯಷ್ಟೇ? ಈ ಬಗ್ಗೆ ಈಗ
ವಿಚಾರಮಾಡುವಾ!

ಗುಲಾಮರಾಗಿದ್ದಾಗಿನ ಕಲ್ಪನೆಗಳಿಗೂ ಸ್ವಾತಂತ್ರ್ಯ
ರಿಸಾದಿಸಿದ ನಂತರದ ಕಲ್ಪನೆಗಳಿಗೂ ಭೂಮಿ ಆಕಾಶಗಳಷ್ಟು
ಅಂತರವಿದೆ. ಪರರಾಷ್ಟ್ರದವರು ಕೊಟ್ಟಿದ್ದನ್ನು ಉಂಡು ಅವರ
ವಿಚಾರಸರಣಿಗೆ ನಮ್ಮ ವಿಚಾರಸರಣಿಯನ್ನು ಅಣಿಮಾಡಿಟ್ಟು,
ನಮ್ಮ ಬುದ್ಧಿಯನ್ನು ಸಹ ಪರಜಕ್ರದವರ ಭಯದಿಂದ ಬಚ್ಚಿಟ್ಟು,
ನಮ್ಮ ವಿಕಾಸಕ್ಕೆ ನಾವೇ ಕೊಡಲಿಯೇಟನ್ನು — ಅನೇಕ ಕಾಲದ
ನಂತರ — ಈ ಮೂರುನೂರು ವರ್ಷಗಳ ದೀರ್ಘಾವಧಿಯಲ್ಲಿ
ಹಾಕಿಕೊಳ್ಳುತ್ತಲಿದ್ದೆವು. ವಿಚಾರಸಂಪತ್ತಿನಿಂದಲೂ, ಜನಬಲ-
ದಿಂದಲೂ, ಹಣದ ದೃಷ್ಟಿಯಿಂದಲೂ. ಕಚ್ಚಾ ಮಾಲುಗಳ
ಬೆಡೆತನದಿಂದಲೂ, ಮಾನವಧರ್ಮದ ಸುಸ್ಪಷ್ಟವಾದ ತಳಹದಿಯ
ತತ್ತ್ವಜ್ಞಾನದಿಂದಲೂ ಭಾರತವು ವಿಶ್ವದಲ್ಲಿ ಪ್ರಮುಖವಾದ
ಸ್ಥಾನವನ್ನು ಪಡೆಯಲು ಅರ್ಹತೆಯುಳ್ಳದ್ದಾಗಿದೆ. ಆದರೆ ಪರಜಕ್ರ
ಮಿಗರ ಅಂಕಿತದಲ್ಲಿದ್ದ ನಮಗೆ ಈ ವರೆಗೆ ಯಾವ ಗಣ್ಯಸ್ಥಾನವೂ
ಇತ್ತಿನ ರಾಷ್ಟ್ರಗಳಲ್ಲಿರಲಿಲ್ಲ. ಮುಖ್ಯವಾಗಿ ಸರ್ಕಾರದ ಸೂತ್ರ-
ಗಳು ಕೈಗೆ ಬರುವುದೊಂದೇ ತಡ. ಜಗತ್ತಿನ ರಾಷ್ಟ್ರಗಳ
ಸಮಿತಿಯಲ್ಲಿ ಹಿಂದೀ ಪ್ರತಿನಿಧಿಗಳು ತಮ್ಮ ಸ್ವಕೀಯವಾದ
ತೇಜೋಬಲದಿಂದ ಪ್ರಭಾವಶಾಲಿಯಾಗಿ ಮೆರೆದು ಬಂದರು!
ಇದರಿಂದ ವ್ಯಕ್ತವಾಗುವುದೇನು? ತನ್ನ ಮನೆಯನ್ನು
ಸುಸಜ್ಜಿತಗೊಳಿಸಿಕೊಂಡಾಕ್ಷಣವೇ ಭಾರತವು ವಿಶ್ವದ ರಾಜಕಾರಣದಲ್ಲಿ
ಒಂದು ಮಹತ್ವಪೂರ್ಣವಾದ ಭಾಗವಹಿಸಿ, ಸ್ವಾರ್ಥದಿಂದ ಬಡಿದಾಡು-
ತ್ತಿರುವ ರಾಷ್ಟ್ರ-ರಾಷ್ಟ್ರಗಳ ಸಮಸ್ಯೆಯನ್ನು ಬಗೆಹರಿಸುವ
ಶಕ್ತಿಯಿಂದ ಸನ್ನದ್ಧವಾಗಬಲ್ಲದೆಂಬುದು ಸ್ಪಷ್ಟವಾಗುತ್ತದೆ.

ಭಾರತಕ್ಕೆ ಈ ಶಕ್ತಿ ಬರಬೇಕಾದರೆ, ಭಾರತದ ಅಂಗಾಂಗ-
ಗಳೆಲ್ಲ ಗಟ್ಟಿಯಾಗಿರಬೇಕಷ್ಟೇ? ಭಾಷಾನ್ಯಯ ಪ್ರಾಂತ
ನಿರ್ಮಾಣದಿಂದಲೀನೇ ಭಾರತದ ಉಪರಾಷ್ಟ್ರಗಳು ಬಲವಂತ-
ವಾಗಿ ಹಿಂದಮಾತೆಯ ಶಕ್ತಿಯನ್ನು ಹೆಚ್ಚಿಸಬಲ್ಲುವು.
ಕರ್ನಾಟಕವೀಗ ತುಂಡರಿಸಲ್ಪಟ್ಟಿದ್ದರಿಂದ ಭಾರತಾಂಬೆಯನ್ನು
ಕಣ್ಣಾಟ್ಟು ನೋಡುವುದು ಸಹ ದುಸ್ತರವಾಗಿದೆ. ಈ ತುಂಡು-
ಗೆಲ್ಲ ಏಕರೂಪವೊಂದುವಂದೆರೇನೇ ಕರ್ನಾಟಕ ಏಕೀಕರಣ.
ಈ ಏಕೀಕರಣದಿಂದಲೇನೇ ಕರ್ನಾಟಕವು ತನ್ನನ್ನು ತಾನು
ಕಂಡುಕೊಳ್ಳುವುದು. ತನ್ನ ಅತ್ಮೀಯವಾದ ಬಲವನ್ನೂ,
ತೇಜಸ್ಸನ್ನೂ, ಸಾಧನವನ್ನೂ, ಭೌತಿಕರೀತಿಯ ಎಲ್ಲ ಸನ್ನಾಹ-
ಗಳನ್ನೂ ಮಾಡಿಕೊಳ್ಳಲು ಏಕೀಕರಣವಲ್ಲದೇ ಕರ್ನಾಟಕಕ್ಕೆ
ಅನ್ಯಗತಿಯಿಲ್ಲ.

ಭೂವಿಸ್ತಾರ, ಜನಸಂಖ್ಯೆಯಬಲ, ಸೃಷ್ಟಿಯಿಂದ ಕೊಡಲ್ಪಟ್ಟ
ಎಲ್ಲ ಬಗೆಯ ಭೂ-ಜಲ-ನಾಯುಗಳ ಸಂಪತ್ತು, ಈ ಆದ್ಯತೀಯ
ಸಂಪತ್ತನ್ನು ಜಣಿಸಾಡಿಕೊಂಡು ದ್ರವ್ಯೋತ್ಪಾದನೆಯನ್ನು
ಶ್ರೇಷ್ಠತರದಿಂದ ಏರ್ಪಡಿಸಿಕೊಳ್ಳುವ ಯೋಗ್ಯತೆ, ಇವೆಲ್ಲ ಕನ್ನಡಿ
ಗರಿಗೆ ಗೊತ್ತಾಗಿವೆ. ಮುಖ್ಯವಾಗಿ ಭಾರತದ ತತ್ತ್ವಜ್ಞಾನದ
ತಳಹದಿಯು ಈ ಕರಿನಾಡಿನಲ್ಲಿಯೇ ಇದೆಯೆಂಬುದು ಸಿದ್ಧಾಂತ
ಮಾತು ಈ ತಳಹದಿಯ ಮೇಲೆಯೇ ಕರ್ನಾಟಕಾಂತರ್ಗತ-
ವಾದ ಭಾರತ ರಾಷ್ಟ್ರವನ್ನು ಜಗತ್ತಿನಲ್ಲಿ ಶ್ರೇಷ್ಠತರವಾದ
ರಾಷ್ಟ್ರವನ್ನಾಗಿ ಮಾಡುವುದು ಶಕ್ಯವಿದೆಂಬುದು ಕನ್ನಡಿಗರ
ಕಣ್ಣುಂದೆ ಅಚ್ಚಳಿಯದೆ ನಿಂತಿರಲಿ. ಎಂದರೆ ಕರ್ನಾಟಕಕ್ಕೆ ಈ
ಶಕ್ತಿಯು ಏಕೀಕರಣದಿಂದ ಮಾತ್ರ ಲಭಿಸುವುದೆಂದೂ,
ಏಕೀಕರಣವೇ ಕರ್ನಾಟಕಕ್ಕೆ ಇಂದಿನ ಕಲ್ಪವೃಕ್ಷವೆಂಬುದೂ
ಮನದಟ್ಟಾಗದೆ ಹೋಗದು.

ಜಯ ಕರ್ನಾಟಕ!
ಜಯ ಹಿಂದ!!

ಮಿಲಿಸರಿಗಳ ಮಾಲಕರು ಚಿಂತಿಸಬೇಕಾಗಿಲ್ಲ.
ಎಲ್ಲ ಪಾರ್ಟ್ಸುಗಳು ನಮ್ಮಲ್ಲಿ ಸಿಕ್ಕುವುವು.
ಹುಬ್ಬಳ್ಳಿಯಲ್ಲಿಯೆ ಅಮೇರಿಕೆ ಅವತರಿಸಿ ಬಿಟ್ಟಿದೆ!
ಬನ್ನಿರಿ! ★ ಬನ್ನಿರಿ!
ನಮ್ಮಲ್ಲಿ ಎಲ್ಲ ಅಳತೆಯ ಹ್ಯಾಂಡ್ ಮತ್ತು ಪಾವರ್ ಬ್ಲೋಸ್ರ್, ಡ್ರಿಲಿಂಗ್ ಮಶಿನ್, ಪುಲಿಜ್, ರಿಂಗ್, ಆಯಿಲ್ ಬೇರಿಂಗ್ಸ್, ಕಂಪ್ಲೀಟ್ ಹಲರ್, ಚಕ್ಕಿ, ಮತ್ತು ಸ್ಪೇರ್ ಪಾರ್ಟ್ಸ್, ಎಕ್ಸ್‌ಪಿಲರ್ ಸ್ಪೇರ್ ಪಾರ್ಟ್ಸ್, ಅಸ್-ಬೆಸ್ಟಸ್ ಜಾಯಿಂಟಿಂಗ್, ಎಲ್ಲತರದ ಬೆಲ್ಟಿಂಗ್, ನಿಕಲ-ಸನ್ ಫಾಯಿಲ್ಸ್, ಜಿನ್ ಸ್ಪೇರ್ ಪಾರ್ಟ್ಸ್, ಸರ್ಕ್ಯುಲರ್ ಸಾ, ವಾಟರ್ ಪಂಪು, ಮತ್ತು ನೊಬಿಲಾಯಿಲ್ ಮೊದಲಾದ ಮಾಲು ಯೋಗ್ಯ ದರದಿಂದ ಸಿಕ್ಕುತ್ತದೆ. ಕೆಳಗಿನ ವಿಳಾ-ಸಕ್ಕೆ ಬರೆದು ಇಲ್ಲವೆ ಪ್ರತ್ಯಕ್ಷ ಭೆಟ್ಟಿಯಾಗಿ ವಿಚಾರಿಸಿರಿ.
ಮಾಗಾಂವಿ ಮಶಿನರಿ ಮಾರ್ಟ್
ನುರಾತಾಗಲ್ಲಿ, ಹುಬ್ಬಳ್ಳಿ.
MAGAVI MACHINERY MART,
HUBLI

ಹಿಮ್ಮತ್ ಬೀಬಿ

(ಸಣ್ಣಕತೆ)

ಶ್ರೀ. ಕೆ. ಅಶ್ವತ್ಥ ನಾರಾಯಣರಾಯರು, ಬನಾರಸ

★

ಹಿಮ್ಮತ್ ಬೀಬಿಯಂತಹ ಹಸನಾದ ಹೃದಯಗಳೆ ನಮ್ಮ ದೇಶದಲ್ಲಿದ್ದರೆ, ಹಿಂದು-ಮುಸ್ಲಿಂ ನಿರಪರಾಧಿ ಜನರ ರಕ್ತ ಇಷ್ಟೊಂದು ಹರಿಯುತ್ತಿದ್ದಿತೇ?

★

೧

ಆ ವರ್ಷ ಸಣ್ಣ ಗ್ರಾಮ ಷಾಪುರಕ್ಕೂ ಚುನಾವಣೆಯ ಜ್ವರವು ಹಿಡಿದಿತ್ತು. ಅಲ್ಲಿ ಹಿಂದೆ ಎಂದೂ ಇಲ್ಲದ ಚಟುವಟಿಕೆ—ಸಂಭ್ರಮಗಳು ಕಾಣಬರುತ್ತಿದ್ದುವು ಕಕ್ಷಿ-ಪ್ರತಿಕಕ್ಷಿಗಳು ಬಹಳ ದಿನಗಳಿಂದಲೂ ಬೋಧೆ, ಪ್ರೋತ್ಸಾಹಗಳಿಂದ ಬೆದರಿಕೆ-ಶಿಕ್ಷೆಗಳ ವರೆಗೂ ಹೋಗಿ, ತಮ್ಮ ಪಕ್ಷಕ್ಕೆ ಓಟುಗಳನ್ನು ಸಂಪಾದಿಸುವವರಾಗಿದ್ದರು. ಚುನಾವಣೆಯ ದಿನ ಹತ್ತಿರವಾದಂತೆಲ್ಲ ಹೊರಗಿನಿಂದ ಪಂಗಡಗಳು ಬಂದು ಬಂದು, ಹಳ್ಳಿಯ ಜನರನ್ನು ಕೂಡಿ ಪಾಕೆಕೊಂಡು ಸಭೆಗಳನ್ನು ನಡೆಯಿಸುತ್ತಿದ್ದರು. ತಮ್ಮುನರ ಮಂಡನೆ. ವಿರೋಧಿಗಳ ಖಂಡನೆ ಇವು ರಭಸದಿಂದ ಸಾಗುತ್ತಿದ್ದುವು. ಒಂದು ದಿನ ಬೆಳಗ್ಗೆ ಮೂರು ರಂಗಿನ ಬಾವುಟವನ್ನು ಹಿಡಿದು, ರಾಷ್ಟ್ರಗೀತೆಯನ್ನು ಹಾಡುತ್ತ ಗಾಂಧೀ ಟೋಪಿಯ ಜನರು ದೇಶಸ್ವತಂತ್ರಕ್ಕಾಗಿ ಕಾಂಗ್ರೆಸ್ಸಿಗೆ ಓಟು ಕೊಡಿರೆಂದು ಬೇಡಿದರೆ, ಅದೇ ಸಂಜೆ ಹಸಿರು ಬಾವುಟವನ್ನು ಹಿಡಿದು, ಜಿನ್ನಾ ಟೋಪಿಯ ಜನರು 'ಲೀಗಿಗೆ ಓಟು ಕೊಡದಿದ್ದರೆ ಬಾಳಿಗೇ ಸಂಚಕಾರ ಬರುವುದು,' ಎಂದು ಒದರುತ್ತಿದ್ದರು. ಈ ನಿತ್ಯ ಗಟ್ಟಲೆಯ ಮುಸ್ಯೆಮುಸ್ಯೆ ಎಷ್ಟೋ ಲೆಕ್ಕವಿಲ್ಲದಷ್ಟು ದೊಡ್ಡದೊಡ್ಡ ಭಾಷಣಗಳು ಬೇರೆ. ಈ ಚುನಾವಣೆಯ ಸೆಳೆತಗಳಿಗೆ ಸಿಕ್ಕಿದ ಹಳ್ಳಿಯವರು, ಬೊಗಚಿಕೈಗೆ ಸಿಕ್ಕಿದ ದೋಸೆಯಂತೆ ಅದಲು ಬದಲಾಗುತ್ತಿದ್ದರು; ತೂಗುವ ಉಯ್ಯಾಲೆಯಂತೆ ಅನಿರ್ಧರವಾಗಿದ್ದರು.

೨

ಇಂತಹವರ ಪೈಕಿ ಹಿಮ್ಮತ್ ಬೀಬಿಯೂ ಒಬ್ಬಳು ಇವಳಿಗೆ ಐನತ್ತಾರು ವರ್ಷ ವಯಸ್ಸು. ತಲೆ ನರೆತಿತ್ತು. ಮುಖವು ಸುಕ್ಕು ಬಿದ್ದಿತ್ತು. ಕಣ್ಣು ತುಸ ಮಂಜಾಗಿತ್ತು. ಆದರೂ ಇವಳ ವಯಸ್ಸಿಗೆ ಗಟ್ಟಿಯಾದ ಹೆಂಗುಸೇ. ಇವಳು ತನ್ನ ಗಂಡ—ಮುದಿ ಶೈಕ್ ಅನ್ಸಾರಿಯೊಂದಿಗೆ ಸಣ್ಣ ಮನೆಯಲ್ಲಿ ವಾಸವಾಮಾಡುತ್ತಿದ್ದಳು. ಇವರಿಗೆ ಒಂದು ಎಕರೆ ಜಮೀನು ಇದ್ದಿತು. ತೀರ ಬಡವರಾಗಿದ್ದುದರಿಂದ, ನೆರೆಯವರ ಎತ್ತುಗಳನ್ನು ಎರವಾಗಿ ತಂದು ಗಂಡ ಹೆಂಡಿರಿಬ್ಬರೂ ಕೂಡಿ ಈ ಜಮೀನನ್ನು ಸಾಗುವಳಿ ಮಾಡಿ, ಹೇಗೋ ಹೊಟ್ಟೆ ತುಂಬಿಕೊಳ್ಳುತ್ತಿದ್ದರು. ಇವರ ಜೀವನವು ಇವರ ಜಮೀನಿನಂತೆಯೇ ಹಳ್ಳಕಿಟ್ಟುಗಳಿಲ್ಲದೆ ಮಟ್ಟವಾಗಿತ್ತು. ಅನ್ಸಾರಿಯ ಪ್ರಕೃತಿ ಸಣ್ಣದು, ಸ್ವಭಾವ ಕೊಂಚ ಮಂದ. ಅವನು ಹೆಚ್ಚಿನ ಯಾವ ಗೊಡವೆಗೂ ಹೋಗುವವನಲ್ಲ. ಯಾವುದರಲ್ಲೂ ಅವನಿಗೆ ಆಸಕ್ತಿ, ಆವೇಶಗಳು ಉಕ್ಕಿ ಬರುತ್ತಿರಲಿಲ್ಲ. ಆದರೆ ಬೀಬಿಯ ರೀತಿಯು ಬೇರೆ. ಅವಳಿಗೆ ಇನ್ನೂ ಹೊರ ವಿಷಯುಗಳಲ್ಲಿ ಅಷ್ಟಷ್ಟು ಉತ್ಸಾಹವು ಉಳಿದಿದ್ದಿತು. ಹಳ್ಳಿಯ ಕಾರ್ಯಕ್ರಮಗಳಲ್ಲಿ ತಾನೂ ಭಾಗವಹಿಸುತ್ತಿದ್ದಳು. ಆದರೆ ಆ ಸಣ್ಣ ಗ್ರಾಮದಲ್ಲಿ ಅಂತಹ ಅವಕಾಶಗಳು ಎಷ್ಟಿದ್ದಾವು? ಎಲ್ಲೋ ಅಲ್ಲೊಂದು ಇಲ್ಲೊಂದು. ಹೀಗಿದ್ದು ಚುನಾವಣೆಯ ಗಾಳಿ ಇತ್ತ ಬೀಸಿದಾಗ, ಅದು ಬೀಬಿಯ ಆಸಕ್ತಿಯನ್ನು ವಿಶೇಷವಾಗಿ ಕೆರಳಿಸಿತು. ಅವಳು ನಡೆದ ಸಭೆಯೊಂದಕ್ಕೂ ಹೋಗದೆ ಇರುತ್ತರಲಿಲ್ಲ. ಅಷ್ಟೇ ಅಲ್ಲ, ಮನಸ್ಸಿಲ್ಲದ ಅನ್ಸಾರಿಯನ್ನೂ ಎಳೆದುಕೊಂಡು ಹೋಗುತ್ತಿದ್ದಳು. ಭಾಷಣಗಳನ್ನು ನೆಟ್ಟ ಮನಸ್ಸಿನಿಂದ ಬಾಯಿಬಿಟ್ಟುಕೊಂಡು ಕೇಳುತ್ತಿದ್ದಳು. ಪ್ರತಿಯೊಂದು ವಾದಕ್ಕೂ ತಲೆಯಾಡಿಸುತ್ತಿದ್ದಳು, ಎಲ್ಲರೂ ಚಪ್ಪಾಳೆ ತಟ್ಟಿದಾಗ ತಾನೂ ತಟ್ಟುತ್ತಿದ್ದಳು. ಎಲ್ಲರೂ ಜಯಜಯಕಾರ ಮಾಡುವಾಗ ತಾನೂ ಸೇರಿಕೊಳ್ಳುತ್ತಿದ್ದಳು. ಯೋಚನೆ ತುಂಬಿದ ತಲೆಯಿಂದ ಮನೆಯನ್ನು ಸೇರುತ್ತಿದ್ದಳು. ಗಂಡನೊಡನೆ ಚರ್ಚಾಕೂಟವನ್ನು ಹೂಡುತ್ತಿದ್ದಳು. ಸಾಮಾನ್ಯವಾಗಿ ನಾಲ್ಕಾರು ವಾಕ್ಯಗಳಲ್ಲಿ ನಳೆಯುತ್ತಿದ್ದ ದಿನಗಳು ಈಗೀಗ ಮಾತುಗಳಿಂದ ತುಂಬಿರುತ್ತಿದ್ದುವು. ಹೊಲದಲ್ಲಿ, ಮನೆಯಲ್ಲಿ, ಊಟದ ಕಾಲದಲ್ಲಿ ಮಲಗುವಾಗ ಇದೇ ಚರ್ಚೆ. ಅನ್ಸಾರಿಗೆ ಇಷ್ಟೊಂದು ಬೇಸರವಾಗಿ ಅವನು ಹೊಂಗುಟ್ಟುವಾದವನ್ನು ಮುರಿಯುತ್ತಿದ್ದರೂ, ಬೀಬಿಯು ಇನ್ನೊಂದು ರೀತಿಯಿಂದ ಅವನ್ನೇ ಮುಂದುವರಿಸುತ್ತಿದ್ದಳು. ಒಂದು ದಿನ ನಡೆದ ಮಾತೇ, ಆದ ವಾಗ್ವಾದವೇ ಇನ್ನೊಂದು ದಿನ ಮೊಗುಚಿ ಬರುತ್ತಿದ್ದಿತು. ಚುನಾವಣೆಯ ಹಿಂದಿನ ದಿನದ ಹಾಗೇ :

"ಕಡೆಗೆ ಹೇಗೆ ನಿರ್ಧರ ಮಾಡಿದಿರಿ? ಯಾರಿಗೆ ಓಟು ಕೊಡೋದು ಅಂತ?" ಬೀಬಿಯು ಪ್ರಶ್ನಿಸಿದಳು.

"ನನ್ಮ, ನನಾಬರಿಗೆ" ಅವನು ನಿಶ್ಚಿಂತೆಯಿಂದ ಉತ್ತರ ಕೊಟ್ಟನು.

"ಆ, ನೋಡಿದಿರ! ಅವರಿಗೇಕೆ?" ಅವಳು ಯುದ್ಧಕ್ಕೆ ಕರೆದಳು.

"ಎಷ್ಟಾದರೂ ನಮ್ಮ ದಣಿಗಳಲ್ಲವೆ—ಅವರು?" ವಿಷಯವು ಸ್ಪಷ್ಟವಾಗಿದ್ದಂತೆ ಅವನು ಹೇಳಿದನು.

"ಸಾಕು ಸಾಕು. ಒಕ್ಕೇ ದಣಿ! ಹೇಗಾದರೂ ಆಗಲಿ, ದಣಿಗಳು ಹೀಗೇಯೋ ಅವರ ಜನವನ್ನು ನೋಡಿಕೊಳ್ಳೋದು? ನಮ್ಮ ಗತಿ ಯೋಚಿಸಿ: ದಿನದಿನವೂ ಹೆಗಲೆಲ್ಲ ಮೂಗಿಗೆ ಕವಡೆ ಕಟ್ಟಿಕೊಂಡು ಇಬ್ಬರೂ ಗಾಣದ ಎತ್ತುಗಳಂತೆ ದುಡೀತಾ ಇದ್ದೀವಿ. ಎಷ್ಟು ವರ್ಷ ಆಯ್ತು, ಏನು ಕತೆ? ಅದರೂ ಮೊಟ್ಟೆ-ಗಾದರೆ ಬಟ್ಟೆಗಿಲ್ಲ; ಬಟ್ಟೆಗಾದರೆ ಹೊಟ್ಟೆಗಿಲ್ಲ. ಕೊಳೆಯಾದ ಬಟ್ಟೆ ಒಗೆಯೋಣ ಅಂದರೆ ಬದಲಾಯಿಸೋದಕ್ಕೆ ಬೇರೆ ಇಲ್ಲ. ಈ ಮುರುಕು ಮನೆ ನೋಡಿ. ಇಷ್ಟು ಸ್ವಲ್ಪ ಜಾಗದಲ್ಲಿ ಹಂದಿಗಳ ಹಾಗಿದ್ದೀವಿ. ಇದಕ್ಕೂ ಜೇರೆ ಬಾಡಿಗೆ ತೆರಬೇಕು— ನವಾಬರಿಗೆ. ಇದೋ ಮಳೆ ಬಂದರೆ ಬಂದರಿ (ಜರಡಿ)ಹಾಗೆ ಸೋರುತ್ತೆ. ಯಾಕೆ ಹೀಗೆ? ನಮ್ಮ ದುದಿನೆ ಕದಿಮೆಯೆ? ಅಲ್ಲ. ನವಾಬರು ಜವಿಾನ್ದಾರರು, ಪಾಲು ಪಟ್ಟೆ...ಅದು ಇದು...ಅಂತ ಅದನ್ನೂ ಜುಲುಮೆಯಿಂದ ಕಿತ್ತುಕೋತಾವೆ. ದುಡ್ಡಿನೆ ಅಂತ ಸಮಯ ಕಾಯ್ದು, ಸಾಲ ರೂಲ ಬಡ್ಡಿ ಬಾಚಿ ಅಂತ ಗಾಳ ಹಾಕ್ಕಿ ನಮ್ಮ ಮನೆ ತಗೊಂಡ ಹಾಗೆ ಎಲ್ಲ ದೋಚಿಕೊಂಡು, ಮೊದಲೇ ಬಡವರಾಗಿರೋ ಜನವನ್ನು ಅವರ ಗುಲಾಮರನ್ನಾಗಿ ಮಾಡಿಕೋತಾರೆ. ತಾವಾದರೆ ಸಾವಿರಾರು ಎಕರೆ ಜವಿಾನು ಮಾಡಿಕೊಂಡಿದಾರೆ. ಯಾಕೆ ಅವರಿಗೆ ಅಷ್ಟೊಂದು? ಅವರಿಗಾಗಿ ಇಷ್ಟೊಂದು ಜನ ದುಡಿತಾರೆ. ಅವರಾದರೋ ಪಟ್ಟಣದಲ್ಲಿದ್ದುಕೊಂಡು ಅರಮನೇಲಿ ವಾಸಮಾಡುತ್ತಾರೆ. ಭಕ್ಷ್ಯ-ಭೋಜ್ಯ-ವ್ಯಷ್ಟಾನ್ನ ಉಣ್ಣುತ್ತಾರೆ; ರೇಷ್ಮೆ ಜರತಾರಿ ಉಡುತ್ತಾರೆ; ಚಿನ್ನ ನಜ್ಜು ಹಾಕುತ್ತಾರೆ; ಮೋಟಾರಿನಲ್ಲಿ ತಿರುಗಾಡುತ್ತಾರೆ; ರಾಜ-ಭೋಗದಲ್ಲಿ ನೆರೀತಾರೆ. ಹೋಗಲಿ ಅವರೇನಾದರೂ ಲೋಲಾಪ್ತಿ ಪಡಲಿ— ಅಂದರೆ, ಈ ಹಳ್ಳಿಗೆ ಎಳ್ಳಷ್ಟಾದರೂ ಉಪಕಾರ ಮಾಡಬೇಡವೆ? ಅವರ ಹಳ್ಳಿ ಅಂತ. ಇಲ್ಲೇನು ಕಾಯಿಲೆಯೋರಿಗೆ ಆಸ್ಪತ್ರೆಯೆ? ಕಲಿಯೋರಿಗೆ ಸ್ಕೂಲೆ? ಏನಿದೆ? ಯಾರಿಗೆ ಏನು ಸಹಾಯ ಮಾಡಿದಾರೆ ನವಾಬರು? ಯಾಕೆ ಈ ವ್ಯತ್ಯಾಸ, ನಮಗೆ ಅವರಿಗೆ? ಇಂಥಾವರಿಗೆ....."

"ಏ, ಅದಕ್ಕೇನು ಮಾಡೋದು? ಅವರು ಶ್ರೀಮಂತರು, ನಾವು ಬಡವರು. ಅದೇ ಅಷ್ಟು ವ್ಯತ್ಯಾಸ."

"ಅದು ಯಾಕೇ ಅಂತ? ಕಾಂಗ್ರೆಸ್ಸಿನೋರು ಕೇಳಲಿಲ್ಲವೆ— ಅದು ಕೂಡದು..ತಪ್ಪು ಅಂತ? ಎಲ್ಲರೂ ಕೆಲಸ ಮಾಡಬೇಕು ಎಲ್ಲರೂ ನೆಮ್ಮದಿಯಾಗಿರಬೇಕು ಅನ್ನೋದೇ ನ್ಯಾಯವಂತೆ. ನಾನೂ ಒಪ್ಪುತ್ತೀನಿ. ಹಾಗಲ್ಲದೆ, ಒಬ್ಬರು ಪಣ ಇದೆ ಅಂತ ಕಾಲುಚಾಚಿ ಕೂತುಕೊಂಡು ಹಲವರ ರಕ್ತ ಹೀರೋದೂ, ಪಣ ಇಲ್ಲ ಅಂತ ಹಲವರು ಹೆಣಗಳಾಗಿ ಬಾಳೋದೂ ಯಾವ ಧರ್ಮ? ಇಂಥವರಿಗೆ ಓಟು ಕೊಟ್ಟು, ಇವರನ್ನು ದೊಡ್ಡ ಪದವಿಗೇರಿಸಿ ಅಧಿಕಾರ ಕೊಟ್ಟು, ನಮ್ಮ ಬಾಯಿಗೆ ನಾವೇ ಮಣ್ಣು ಹಾಕಿಕೊಳ್ಳೋದೆ?"

"ಕಾಂಗ್ರೆಸ್ಸು ತಾನೇ ಏನು ಮಾಡಿತು?"

"ಅವರೂ ನಮ್ಮ ಹಾಗೇ ಬಡವರು. ಸಾಮಾನ್ಯ ಜನ, ಬಡವರ—ಎಲ್ಲರ ರಾಜ್ಯ ಸ್ಥಾಪಿಸುತ್ತಾರಂತೆ. ಹೊಲದ ರೈತರಿಗೆ, ಗಿರಣಿಯ ಕೂಲಿಯೋರಿಗೆ ಸ್ಥಾನ, ಮಾನ, ಅಧಿಕಾರ, ಸೌಖ್ಯ ಎಲ್ಲಾ ಸಿಗುವ ಹಾಗೆ ಆಗುತ್ತಂತೆ. ನಿಜವಾಗಿದೇಶದಲ್ಲಿ ತುಂಬಿರೋ ನಾವೇ ಮುಖ್ಯವಂತೆ. ನಾವೇ ನಿಜವಾದ ದಣಿಗಳಂತೆ. ಇಂಥ ನವಾಬರು ಎಷ್ಟಿದ್ದಾರು? ಇವರು ಹುಣ್ಣಿನ ಮೇಲಿನ ನೊಣಗಳ ಹಾಗಂತೆ. ನಮ್ಮ ಹಕ್ಕನ್ನು ತಪ್ಪಿಸಿ ತಾವು ಆಕ್ರಮಿಸಿಕೊಂಡಿದ್ದಾರಂತೆ. ಇವರು ನಮ್ಮನ್ನು ಯಾಕೆ ಆಳಬೇಕು ಹೇಳಿ? ಇವರ ಕಿತ್ತೆ ಸರಕಾರಕ್ಕೆ ಬೆಂಬಲ ಕೊಟ್ಟು ನಮ್ಮ ಗೋರಿನ ನಾವೇ ಅಗಿದುಕೊಳ್ಳೋದೆ?"

"ಅದು ಹೇಗಾದರೂ ಇರಲಿ. ನಾವು ಓಟು ಕೊಟ್ಟ ಮಾತ್ರಕ್ಕೇ ಕಾಂಗ್ರೆಸ್ ಸರಕಾರ ಬಂದು ಬಿಡುತ್ತೇ?"

"ಹುಂ ನಮ್ಮೂರೋರೆಲ್ಲ ಸೇರಿದರೆ ಬಂದೇ ಬರುತ್ತೆ."

"ಆದಕ್ಕೆ ಮುಂಚೆ ಇದು ತಿಳಿದು, ನವಾಬರು ನಮ್ಮ ಗತೀನ ಏನು ಮಾಡಿರುತ್ತಾರೆ ಗೊತ್ತೆ? ಈ ಜವಿಾನು-ಮನೆಗಳನ್ನೂ ಬಿಡಿಸಿ...."

"ಅದಕ್ಕೇಕೆ ಭಯ? ಈಗಿರೋದಕ್ಕಿಂತ ಹೀನಸ್ಥಿತಿ ಹೇಗೆ ನೆನೆಸೋದು ಸಾಧ್ಯ? ಒಂದಲ್ಲ ಒಂದು ಕಡೆ ಎಲ್ಲಾದರೂ ಇಷ್ಟಾದರೂ ಸಿಕ್ಕೇ ಸಿಗುತ್ತೆ. ನೀರಿನಲ್ಲಿ ಮುಳುಗಿದೋರಿಗೆ ಮಳೆಯೇನು, ಗಾಳಿಯೇನು? ನಮ್ಮನ್ನೆಲ್ಲ ಕಳಿಸಿದರೆ ಇವರಿಗೆ ದುಡಿಯೋರು ಯಾರು? ಅಷ್ಟಾದರೂ ಬುದ್ಧಿ ಇಡೆ— ನವಾಬರಿಗೆ. ಇವರು ಗಟ್ಟಿಯಾದರೆ ಈ ಗತಿಯೇನು ಬದಲಾಯಿಸೋದಿಲ್ಲ. ಆದರೆ ಅವರು ಮೇಲೆ ಬಂದರೆ, ನಮಗೆ ಹೆಚ್ಚು ಜವಿಾನು. ನಮ್ಮದೇ ಆಗುತ್ತೆ. ಕಂದಾಯ ಬಿಟ್ಟು ಪಾಲುಗೀಲು ಇಲ್ಲ. ಸುಖವಾಗಿ ಮಾನವಾಗಿ ಇರಬಹುದು. ಜವಿಾನುದಾರರ ಹೊರೆ ಇರೋದಿಲ್ಲ."

"ಅದರಲ್ಲಿ ಏನೇನು ತೊಡಕಿದೆಯೋ?"

"ಏನಾದರೇನು? ಹಳಬರನ್ನು ಆಗಲೇ ನೋಡಾಗಿದೆ. ಇದೇ ಅವರು ಮಾಡಿರೋದು. ಬದಲಾವಣೆಗೆ ಅವಕಾಶ ಕೊಟ್ಟರೆ, ಪೆಚ್ಚಿನ ಆಪತ್ತೇನೂ ಇಲ್ಲ. ಹೇಗೆ ಹೇಗೆ ನೋಡಿದರೂ ಕಾಂಗ್ರೆಸ್ಸಿಗೆ ಓಟು ಕೊಡೋದೇ ಸರಿ."

"ಕೇಳಲಿಲ್ಲವೆ ನೀನು? ಹಿಂದುಗಳು ನಮ್ಮನ್ನು ತಿನ್ನೋದಕ್ಕೆ ಕಾದಿದ್ದಾರಂತೆ. ಇಸ್ಲಾಂ ಅಪಾಯದಲ್ಲಿದೆಯಂತೆ. ಅದನ್ನು ಉದ್ಧಾರ ಮಾಡೋದಿಕ್ಕೆ ನವಾಬರು ನಿಂತಿದಾರಂತೆ. ಅವರಿಗೆ ಸಹಾಯ ಮಾಡದೇ ಇದ್ದರೆ ನಾವು ಮುಸ್ಲಿಮರೆ?"

"ಬಿಡಿ. ಬಿಡಿ. ಈ ಬುರುಡೇಗೆಲ್ಲ ಬೇರೆಯೋರು ಉತ್ತರ ಕೊಟ್ಟಿಲ್ಲವೆ? ತಲೆ-ತಲಾಂತರದಿಂದ ಇಷ್ಟೊಂದು ಜನ ಹಿಂದುಗಳ

ಜೊತೆ ಇದೀವಲ್ಲ, ಬಾಳಿದೀವಲ್ಲ. ಅವರು ಏನು ಮಾಡಿದಾರೆ ನಮ್ಮ ಮತಕ್ಕೆ? ಹೋಗಲಿ, ಮತ ಮತಾ ಅಂತ ನಾವು ತಾನೆ ಏನು ಮಾಡುತ್ತಾ ಇದೀವಿ, ಹೇಳಿ? ಒಳ್ಳೆ ನೆರೆಹೊರೆಯಾಗಿ ಬಾಳೋದರಲ್ಲಿ ಮತನಿರೋಧ ಎಲ್ಲಿ ಬರುತ್ತೆ? ಬರೀ ಕೆತಾಪತಿ. ಜಗಳಕ್ಕೆ ಮತವಿದ್ದರೆ ಬಾಳೋದಿಕ್ಕೆ ಇಲ್ಲವೆ? ಆ ಪಡಿಪಾಟಲು ಕಟ್ಟಿಕೊಂಡು ನಮಗೇನು ಆಗಬೇಕು? ಹೊಟ್ಟೆ ತುಂಬಿ ಕೊಬ್ಬು ಬೆಳೆದ ಮೇಲಿನ ಜನ ಅದಕ್ಕೆಲ್ಲ ಬಡಿದಾಡಿ ಬಿಡುವಿನ ಕಾಲ ತುಂಬಿಕೊಳ್ಳಲಿ. ಅದು ಅವರ ಆಟ. ಬಡವರಿಗೆ ಬೇಕಾದದ್ದು ಮೊದಲು ಹಿಟ್ಟು ಬಟ್ಟೆ, ಇಂಥಾದ್ದು. ಆಮೇಲೆ ಬಾಕೀದು ಏನಾದರೂ. ಈ ಹಿಟ್ಟುಬಟ್ಟೆಯ ಮತ ಬಡವರೆಲ್ಲರಿಗೂ ಒಂದೇ. ಯಾವ ಜಾತಿ ಆದರೇನು? ನಮಗೆ ಕಾಣೋ ಗುಂಪುಗಳು ಹಿಂದು-ಮುಸ್ಲಿಂ ಅಲ್ಲ; ಬಡವರು-ಶ್ರೀಮಂತರು ಅಷ್ಟೆ!''

"ಮೌಲ್ವಿಸಾಹೇಬರೇ ಹೇಳಿದರು: ನವಾಬರಿಗೆ ಓಟು ಕೊಡದೆ ಇಸ್ಲಾಂಗೆ ಸಹಾಯವಾಗದೆ ಇದ್ದರೆ ನರಕಕ್ಕೆ ಹೋಗುತ್ತೀವಿ ಅಂತ.''

"ಕಾಂಗ್ರೆಸ್‌ನೋರು ಏನು ಹೇಳಿದರು? ಸ್ವರ್ಗ ನರಕ ಇವಕ್ಕೆ ಒಳ್ಳೇ ಬಾಳು ಕೆಟ್ಟ ಬಾಳು ಕಾರಣವೇ ಹೊರತು ಆ ಮತ ಈ ಮತ ಅಲ್ಲಾ ಅಂತ. ಅದೇ ನಂಗೂ ಒಪ್ಪಿಗೆ. ಒಳ್ಳೆಯೋರಾಗಲೀ ಕೆಟ್ಟೋರಾಗಲೀ ಒಂದು ಮತದೋರು ಸ್ವರ್ಗಕ್ಕೆ, ಇನ್ನೊಂದು ಮತದೋರು ನರಕಕ್ಕೆ ಹೋಗುತ್ತಾರೆ ಅನ್ನೋದು ಶುದ್ಧ ತಪ್ಪು ಅಂತ ನಿಮಗೂ ಕಾಣೋದಿಲ್ಲವೆ?''

"ಹುಕ್! ಹುಕ್! ಏನು ಹೇಳುತ್ತಿದೀಯೆ? ದೊಡ್ಡೋರ ವಿಷಯ, ಗುರುಗಳ ಮಾತಿನ ವಿಚಾರ ನಮಗೇಕೆ—ಬಡವರಿಗೆ? ಬಿಡು. ಎಲ್ಲಾದರೂ ಹೊರಗೆ ತಿಳಿದು ಬಂದರೆ....''

"ಓ, ನಾನು ಇದಕ್ಕೆಲ್ಲ ಜೆಡರೋದಿಲ್ಲ. ಮನಸ್ಸು ಮಾಡಿ ಬಿಟ್ಟಿದೀನಿ. ಈ ನವಾಬರ ದೌಲತ್ತು, ಆ ಜಿಪ್ಸಿನ, ದೀಪನಾಲು, ಹೂಮಾಲೆ, ಮೋಟಾರು, ಮೆರವಣಿಗೆ, ದಪ್ಪಹೊಟ್ಟೆ, ಗರ್ಜನೆ ಬೆದರಿಕೆ ಇವಕ್ಕೆಲ್ಲ ನಾನೇನು ಮೋಸ ಹೋಗೋದಿಲ್ಲ. ನೊಪ್ಪು ಹಾಕೋದಿಲ್ಲ ಇವರ ಆಟ್ಟಪಾಸ ನೋಡಿದಿರಿ, ಮಾತು-ಕತೆ ಕೇಳಿದಿರಿ. ಇವರು ದೇವತೆಗಳ ಹಾಗೂ ನಾವು ಹುಲ್ಲುಗಳ ಹಾಗೂ ಆವರ ಭಾವನೆ. ನಂಗೆ ಮೈಯೆಲ್ಲ ಉರಿಯುತ್ತೆ. ಓ, ಅದೇ—ಬೇರೆ ಕಡೆಯೋರನ್ನೂ ನೋಡಿ ಬಂಧುಗಳು ಅಂತ ಎಷ್ಟು ಸ್ನೇಹವಾಗಿದ್ದಾರೆ ಇವರೇನು ಅವರ ಹಾಗೆ 'ನಿಮ್ಮ ದಣಿಗೆ ಓಟು ಮಾಡಿ' ಅಂತ ಹೇಳಲಿಲ್ಲ. 'ನಿಮಗೆ ನೀವೇ ಓಟು ಮಾಡಿಕೊಳ್ಳಿ' ಅಂದರು. 'ಸ್ಪರ್ಧೆಗೆ ನಿಂತಾತ ನಿಮ್ಮ ಸೈಕಿ, ನಿಮ್ಮ ಸೇವಕ. ನಿಮ್ಮ ಹಿತ ಸಾಧಿಸುತ್ತಾನೆ' ಅಂದರು. ಎಂಥಾ ಒಳ್ಳೇ ಮಾತುಗಳು! ಹಾಗೂ ಕಡೇಗೆ 'ನೀವೇ ಯೋಚಿಸಿ ತಿಳಿದ ಹಾಗೆ ಮಾಡಿ' ಅಂದರೇ ಹೊರತು, ನವಾಬರ ಜನದ ಹಾಗೆ 'ನವಾಬರಿಗೆ ಓಟು ಕೊಡದಿದ್ದರೆ ನರಕಕ್ಕೆ ಹೋಗುತ್ತೀರಿ. ನಿಮ್ಮ ಮನೆ ಮತ ಬಿಟ್ಟು ಓಡಿಸುತ್ತೀವಿ ಜೋಕೆ!' ಅಂತ ಬೆದರಿಸಿದರೆ? ಇಷ್ಟರಲ್ಲೇ ಗೊತ್ತಾಗೋದಿಲ್ಲವೆ, ಯಾರು ಉತ್ತಮರು ನೀತಿವಂತರು ಯಾರು....''

"ಮಹರಾಯಿತೀ, ಸಧ್ಯ ಸುಮ್ಮನಿರೇ. ಹೇ ಗಾದರೂ ಮಾಡೋಣ. ನಾಲಿಗೆ ದೊಡ್ಡದು ಮಾಡಿ ನಿಮ್ಮುರ ಕಟ್ಟು. ಕೊಳ್ಳೋದು ಬೇಡ'' ಅನ್ನಾರಿಯು ಗಾಬರಿಯಾಗಿ, ಕೆರಳಿದ ಸಿಂಹಿಣಿಯಂತಿದ್ದ ಬೀಬಿಯನ್ನು ಸುಮ್ಮನಾಗಿಸಿದನು.

೪

ಚುನಾವಣೆಯ ದಿನ ಕರ್ಕಬಜಾರಿನ ಚುನಾವಣೆ ಕ್ಷೇತ್ರದಲ್ಲಿ ಗದ್ದಲವೋ ಗದ್ದಲ. ಊರಿನಿಂದಲೂ ಸುತ್ತುಮುತ್ತಿನ ಹಳ್ಳಿಗಳಿಂದಲೂ ಜನರು ಬಂದು ಸಂತೆ ಸೇರಿದ್ದರು. ಓಟಿನ ಕೆಲಸವು ಭರದಿಂದ ಸಾಗುತ್ತಿದ್ದಿತು. ಸ್ಕೂಲು ಕಟ್ಟಿದದ ಒಂದು ಭಾಗದಲ್ಲಿ ಮೂರು ರಂಗಿನ ಕಾಂಗ್ರೆಸ್ ಬಾವುಟವೂ, ಇನ್ನೊಂದು ಕಡೆ ಲೀಗಿನ ಹಸಿರು ಬಾವುಟವೂ ಹಾರಾಡುತ್ತಿದ್ದುವು. ಹಸಿರು ಬಾವುಟದ ಬಳಿ ಬ್ಯಾಂಡು ಭೋರ್ಗರೆಯುತ್ತಿತ್ತು. ಈ ಭಾಗವೆಲ್ಲವೂ ಹಾರ-ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದಿತು. ಜನ್ನಾ ಟೋಪಿಯ ಲೀಗು ಸ್ವಯಂಸೇವಕರೂ ಗಾಂಧೀಟೋಪಿಯ

ಭಾರತದ ಸ್ವಾತಂತ್ರ್ಯರಕ್ಷಣೆಗೆ ಆರೋಗ್ಯಶಾಲಿ ಜನರು ಬೇಕು!
ಜನತೆಯ ಆರೋಗ್ಯ-ಆನಂದಗಳೇ ನಮ್ಮ ಆದರ್ಶ!

ಬಾಂಬೆ ರೆಸ್ಟೋರೆಂಟ್, ಧಾರವಾಡ

ಇಲ್ಲಿಯ ಸುವ್ಯವಸ್ಥೆ-ಸವಿಾಚೀನವಾದ ತಿಂಡಿ-ತಿನಿಸುಗಳನ್ನು
ಯಾವ ಹಿರಿಯ-ಕಿರಿಯರು ಮನಗಂಡಿಲ್ಲ?

ಬರಿಯ ಸ್ವಲ್ಪ ಕಾಲ ಇಲ್ಲಿ ಬಂದು ಕುಳಿತು ಹೋದರೂ
ಎಂತಹ ಮಾನಸಿಕ ತಾಪವನ್ನೂ ಹರಿಹರಿಸಬಹುದು!

ಉತ್ತರ ಆನ್ನಡಿಗರ ಅಭಿರುಚಿಗೆ ತಕ್ಕುದಾದ ಉತ್ತಮ ಚಹಾ!
ದಕ್ಷಿಣಕನ್ನಡಿಗರನ್ನು ಮೆಚ್ಚಿಸಬಹುದಾದ ಕಮ್ಮನೆಯ ಕಾಫಿ!!
ಸ್ವಚ್ಛತೆ-ಸವಿರುಚಿಗಳು ನಮ್ಮ ತಿಂಡಿ-ತಿನಿಸುಗಳ ವೈಶಿಷ್ಟ್ಯ!!!

ಲಾಭದಾಶೆಯಿಂದ ಜನತೆಯ ಆರೋಗ್ಯವನ್ನು
ಅಲಕ್ಷಿಸುವ ಸ್ವಾರ್ಥ ವ್ಯವಹಾರ ನಮ್ಮಲ್ಲಿಲ್ಲ!

ಒಮ್ಮೆ ಇಲ್ಲಿಗೆ ಬಂದವರು ಮತ್ತೆ ಮತ್ತೆ ಇಲ್ಲಿಗೇ
ಬರಬೇಕೆಂದು ಬಯಸದಿರರು!

ಬನ್ನಿರಿ! ಸ್ವಾಗತ! ಬನ್ನಿರಿ!

ಬಾಂಬೆ ರೆಸ್ಟೋರೆಂಟ್, ಧಾರವಾಡ

೫೩ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರದ ಗುಳಿಗೆಗಳು.
ಬಾಟ್ಲಿಗೆ ೧-೮-೦
ಎಲ್ಲ ಪ್ರಕಾರದ ಜ್ವರಗಳ ಮೇಲೂ ದಿವ್ಯೌಷಧ
ಏಳಾನ:—
ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ.

ಕಾಂಗ್ರೆಸ್ ಸ್ವಯಂಸೇವಕರೂ ಗುಂಪಿನಲ್ಲಿ ಜೆರೆದು ಜನರಿಗೆ ಸಹಾಯ ಮಾಡುವ ನೆಪದಲ್ಲಿ ಅವರನ್ನು ಪ್ರೋತ್ಸಾಹಿಸುತ್ತ ತಮ್ಮ ತಮ್ಮ ಕಡೆಗೆ ಒಯ್ಯುತ್ತಿದ್ದರು. ಅವರ ಆಸಕ್ತಿಯು ಮಿತಿಮೀರಿ ಓಟರುಗಳಿಗೆ ತೊಂದರೆಯಾಗದಂತೆಯೂ, ಎರಡು ಪಂಗಡಗಳಿಗೂ ತಿಕ್ಕಾಟವಾಗದಂತೆಯೂ ನೋಡಿಕೊಳ್ಳಲು ಪೋಲೀಸಿನವರು ದೊಣ್ಣೆಗಳನ್ನು ಹಿಡಿದು ಅಲ್ಲಲ್ಲಿ ತಿರುಗಾಡುತ್ತಿದ್ದರು. ಒಬ್ಬ ಅಧಿಕಾರಿಯು ರಿವಾಲ್ವರನ್ನೂ ತೋಟಾಗಳ ಪಟ್ಟಿಯನ್ನೂ ತಗಲು ಹಾಕಿಕೊಂಡು, ದರ್ಪದಿಂದ ಅಲ್ಲಲ್ಲಿ ಸುತ್ತಾಡುತ್ತಿದ್ದನು. ಜನರ ಗುಜುಗುಜುವೂ ಬ್ಯಾಂಡಿನ ಶಬ್ದವೂ ಜಾತ್ರೆಯ ಶಬ್ದವನ್ನು ಮೀರಿಸಿದ್ದುವು. ಗಂಟೆ ಹನ್ನೊಂದಾಯಿತು, ಹನ್ನೆರಡು, ಹೊತ್ತು ಹೆಚ್ಚಾದಂತೆಯೂ ಜನಸಂದಣಿಯೂ ಹೆಚ್ಚುತ್ತಿತ್ತು. ಈ ಚುನಾವಣೆಯು ಯಾವ ಬಾರಿಯೂ ಇಲ್ಲದಷ್ಟು ಮಂದಿ ಓಟರುಗಳನ್ನೂ ಇತರ ಜನರನ್ನೂ ಆಕರ್ಷಿಸಿತ್ತು. ನಡುಬೇಸಿಗೆಯ ಮಟಮಟ ಮಧ್ಯಾಹ್ನದ ಉರಿಬಿಸಿಲೂ ಉತ್ಸಾಹಕ್ಕೆ ಅಡ್ಡ ಬಂದಿರಲಿಲ್ಲ.

ಇದೇ ಹೊತ್ತಿನಲ್ಲಿ ಹಿಮ್ಮುಖ್ ಬೀಬಿಯು ಷಾಪುರದಿಂದ ಮೂರು ಮೈಲಿಗಳನ್ನು ನಡೆದು ಬಂದಿದ್ದಳು. ಅವಳ ಬರಿಗಾಲುಗಳ ಮೇಲ ಧೂಳು ಕವಿದಿತ್ತು. ಉಟ್ಟಿದ್ದು ಮಾಸಲು ಬಿಳಿಯ ಸೀರೆಯು ಧೂಳಿನಿಂದ ಇನ್ನೂ ಮಾಸಿತ್ತು. ತಲೆಯ ಮೇಲಿನಿಂದ ಮುಸುಕು ಜಾರಿ ಬೆನ್ನಿನ ಮೇಲೆ ಬಿದ್ದಿತ್ತು. ಬಿಳಿಗೂದಲು ಸಡಿಲಿತ್ತು. ಬಿಸಿಲಿನ ತಾಪದಿಂದ ಸುಕ್ಕುಮೊಗವು ಕೆಂಪಾಗಿತ್ತು. ಕೆನ್ನೆಯ ನೋಲೆ ಜೀವರಸ ಹನಿ ಹರಿಯುತ್ತಿತ್ತು. ಅವಳು ಎಷ್ಟು ದಣಿದಿದ್ದಳೋ ಅಷ್ಟೇ ಆಶ್ಚರ್ಯಕಾಗಿದ್ದಳೆಂದು ಅವಳನ್ನು ನೋಡಿದವರಿಗೆ ಸ್ಪಷ್ಟವಾಗುತ್ತಿತ್ತು. ಅವಳಿಗಾದರೋ ಇದರ ಅರಿವಿರಲಿಲ್ಲ. ಅವಳ ಆಳದ ಕಣ್ಣುಗಳು ಏನನ್ನೋ ಹುಡುಕುತ್ತಿದ್ದುವು. ಇದರಲ್ಲೇ ಅವಳು ನುಗ್ಗಳಾಗಿದ್ದಳು.

ಬೀಬಿಯು ಪ್ರಾಕಾರದ ಬಾಗಿಲಿಗೆ ಬಂದೊಡನೆ, ನಾಲ್ಕಾರು ಲೀಗಿನ ಸ್ವಯಂಸೇವಕರು ಬೇಟೆಯ ನಾಯಿಗಳಂತೆ ಅವಳನ್ನು ಮುತ್ತಿಕೊಂಡರು. ಕಾಂಗ್ರೆಸ್ಸಿನವನೊಬ್ಬನು ಹತ್ತಿರದಲ್ಲೇ ನಿಂತಿದ್ದನು.

"ಏ ಮುದುಕಿ, ಓಟು ಮಾಡುತ್ತೀಯ? ಇಲ್ಲಿ ಬಾ!" ಲೀಗಿನವನೊಬ್ಬನು ಅವಳನ್ನು ಕರೆದೊಯ್ಯಲು ಯತ್ನಿಸಿದನು. ಇತರರೂ ಅವನೊಡನೆ ಸರಿದರು. ಬೀಬಿಯು ಆ ಒತ್ತಡದಲ್ಲಿ ಎರಡು ಹೆಜ್ಜೆ ಇಟ್ಟವಳು ಹಾಗೇ ನಿಂತು ಅತ್ತಿತ್ತ ನೋಡುತ್ತ, ಕಾಂಗ್ರೆಸ್ ಬಾವುಟದ ಕಡೆಗೆ ತಿರುಗಿ "ನಾನು ಅಲ್ಲಿಗೆ ಹೋಗಬೇಕು" ಎಂದಳು.

"ಏನು!" ಲೀಗಿನವನು ಆಶ್ಚರ್ಯಪಟ್ಟನು.

"ನೀನು ಮುಸ್ಲಿಂ ಅಲ್ಲವೆ?" ಇನ್ನೊಬ್ಬನು ಕೇಳಿದನು.

"ಹುಂ." ಬೀಬಿಯು ಉತ್ತರ ಕೊಟ್ಟಳು.

"ಮತ್ತೆ ಲೀಗಿಗೆ—ನವಾಬರಿಗೆ ಓಟು ಕೊಡು." ಮತ್ತೊಬ್ಬ ಹೇಳಿದನು.

"ಉಹುಂ." ಮತ್ತೆ ಬೀಬಿಯ ಒಂದೇ ಮಾತು.

ಈ ವರೆಗೆ ಇದನ್ನು ಕೇಳಿದ್ದ ಕಾಂಗ್ರೆಸ್ಸಿನವನು ಇವಳ ಬಳಿಗೆ ಬಂದು "ಅಜ್ಜಿ, ಕಾಂಗ್ರೆಸ್ಸಿಗಾದರೆ ಹೀಗೆ ಬಾ" ಎಂದು ದಾರಿ ತೋರಿಸಿ ಕರೆದೊಯ್ಯಲು ಉದ್ಯುಕ್ತನಾದನು. ಆದರೆ ಲೀಗಿನವರು ಅವಳನ್ನು ಬಿಡದೆ ಇನ್ನೂ ಮುತ್ತಿಕೊಂಡೇ ಇದ್ದರು.

"ಏ, ಇತ್ತ ಕಡೆ ಬಾ. ಜಪಕ್ಕೆ ಏರ್ಪಾಡಾಗಿದೆ" ಒಬ್ಬನು ಪಿಸುಮಾತಿನಲ್ಲಿ ಹೇಳಿದನು.

ಬೀಬಿಯು ಮಾತಾಡಲಿಲ್ಲ, ಜರುಗಲೂ ಇಲ್ಲ.

"ಗಾಡಿಯ ಮೇಲೆ—ಮೋಟಾರಿನ ಮೇಲೆ—ಮನೆಗೆ ಹೋಗೋ ವಂತೆ. ನೋಡು, ನಮ್ಮ ಮೋಟಾರುಗಳ ಎಷ್ಟಿವೆ!" ಇನ್ನೊಬ್ಬನು ಅಲ್ಲಿ ನಿಂತಿದ್ದ ಕಾರುಗಳ ಸಾಲಿಗೆ ಕೈತೋರಿಸಿದನು.

ಬೀಬಿಯು ಇನ್ನೂ ಚಲಿಸದ ಮೌನವಾಗಿದ್ದಳು.

"ಏ, ನಿಂಗೇನಾದರೂ ಪೈಸಾ ಬೇಕಾದರೆ.." ಮತ್ತೊಬ್ಬ ಅವಳ ಕಿವಿಯಲ್ಲಿ ಹೇಳಿದನು.

ಇದಕ್ಕೂ ಬೀಬಿಯು ಜಗ್ಗದೆ ಇದ್ದಾಗ ಅವರ ಮುಖಂಡನು "ಲೀಗಿಗೆ ಓಟು ಕೊಡದೆ ಇದ್ದರೆ ನಿಂಗೆ ಏನಾಗುತ್ತೆ ಬಲ್ಲೆಯೋ?" ಎಂದು ಮೆಲುದನಿಯಲ್ಲಿ ಭಯತೋರಿಸಿದನು.

ಈಗ ಬೀಬಿಯು ಹುಬ್ಬುಗಂಟಿಕ್ಕಿದಳು. ಆದರೂ ಲೀಗಿನವರು ಅವಳಿಗೆ ದಾರಿ ಕೊಡಲಿಲ್ಲ. ಒಬ್ಬನು ಅವಳ ಬಟ್ಟೆಗೂ ಕೈಹಾಕಿ ಸ್ವಲ್ಪ ಎಳೆಯುವ ಸಾಹಸ ಮಾಡಿದ. ಆಗ ಕಾಂಗ್ರೆಸ್ಸಿನವನು "ಇವಳನ್ನು ಬಿಡಿ!" ಎಂದ. ಎರಡು ಪಕ್ಷದವರಿಗೂ ವಾಗ್ವಾದವಾಯಿತು. ಇನ್ನಷ್ಟು ಜನರು ಇವರ ಸುತ್ತಲೂ ಗುಂಪುಗೂಡಿದರು. ಜಗಳವಾಗುವುದರಲ್ಲಿತ್ತು. ಈ ಗಲಭೆಯ

ಸುಳಿವನ್ನು ತಿಳಿದ ಪೋಲೀಸು ಅಧಿಕಾರಿಯು ಇತ್ತ ಕಡೆ ಬಾಯಿ ಬಿಡಲಿಲ್ಲ. ಹೋದನು. ಇದನ್ನು ಕಂಡು ಲೀಗಿನವರು ಜೆಬರಿಂದರು. ಆದರೆ ಕೊಂಚ ದೂರದಿಂದ ಅವಳ ಕಡೆಗೆ ತಿರುಗಿ "ಪಾಪಿ! ಮೂಢೆ!" ಮುಂತಾಗಿ ಮನಸ್ಸಿಗೆ ಬಂದಂತೆ ಭೀಮಾರಿ ಮಾಡಿದರು, ಅಪ. ಹಾಸ್ಯ ಮಾಡಿದರು. ಬೀಬಿಯು ಇದೊಂದನ್ನೂ ಮನಸ್ಸಿಗೆ ತಂದುಕೊಳ್ಳದೆ ಕಾಂಗ್ರೆಸ್ಸಿನವನೊಡನೆ ನಡೆದಳು.

ಬೀಬಿಯು ಕಾಂಗ್ರೆಸ್ ಕಡೆಗೆ ಬಂದಾಗ, ಸ್ವಯಂಸೇವಕನು ಅವಳನ್ನು ಅಲ್ಲಿ ಹೆಸರಿನ ಪಟ್ಟಿಗಳನ್ನು ತಿರುವಿಹಾಕುತ್ತಿದ್ದವನೊಬ್ಬನಿಗೆ ಪರಿಚಯ ಮಾಡಿಕೊಟ್ಟು ಹೋದನು ಈತನು ಇವಳನ್ನು ಕುಳಿತುಕೊಳ್ಳುವಂತೆ ಹೇಳಿ "ನಿನ್ನ ಹೆಸರೇನವ್ವಾ? ಯಾವ ಹಳ್ಳಿ?" ಎಂದು ಪ್ರಶ್ನಿಸಿದನು. ಬೀಬಿಯು ಹೇಳಿದ ಮೇಲೆ ಅವಳ ಹೆಸರನ್ನು ಜಪಿಸುತ್ತ ಪಟ್ಟಿಯ ಪುಟಗಳನ್ನು ನೋಡಿ ಒಂದೆರಡನ್ನು ತಿರುವಿಹಾಕಿದನು. ಆಗ ಅವಳು ಅವನನ್ನು ತಡೆದು "ಅಪ್ಪ, ಅವರ ಹೆಸರು ಬರೆದುಕೊಂಡಿದಾರೆ. ನನ್ನದಲ್ಲ" ಎಂದು ಎಚ್ಚರಿಸಿದಳು. ಅವನು ಪುಟದಿಂದ ಕಣ್ಣನ್ನು ತೆಗೆದು ಅವಳನ್ನು ನೋಡುತ್ತ "ಹಾಗೋ? ಅವರು ಅಂದರೆ ಯಜಮಾನರದ್ದೋ? ಅವರು ಎಲ್ಲಿ ಮತ್ತೆ?" ಎಂದು ಕೇಳಿದನು.

"ಅವರಿಗೆ ಜ್ವರ ಬಂದಿದೆ. ಮಲಗಿದಾರೆ. ಏಳೋದಿಕ್ಕೆ ಆಗೋದಿಲ್ಲ. ಅವರಿಗೋಸ್ಕರ ನಾನೇ ಓಟು ಕೊಡೋದಿಕ್ಕೆ ಬಂದಿದೀನಿ" ಅವಳು ವಿವರಿಸಿದಳು.

ಅಲ್ಲಿದ್ದವರೆಲ್ಲ ಮುಗುಳ್ನಗೆ ನಕ್ಕರು :

"ಅವ್ವ, ಹಾಗೆ ಸಾಧ್ಯವಿಲ್ಲವಲ್ಲ. ಅವರೇ ಬರಬೇಕು" ಪಟ್ಟಿಯವನು ಮೃದುವಾಗಿ ತಿಳಿಸಿದನು.

"ಅವರೇ ನಂಗೆ ಹೇಳಿ ಕಳಿಸಿದಾರೆ." ಅವಳು ಒತ್ತಿ ಹೇಳಿದಳು

"ನಿಜ, ನಾನು ಒಪ್ಪಿದೆ. ಆದರೆ ಕಾಯದೆ ಒಪ್ಪೋದಿಲ್ಲವಲ್ಲ! ಏನು ಮಾಡೋದು?" ಅವನು ವ್ಯಸನದಿಂದ ಹೇಳಿದನು.

ಬೀಬಿಯು ಮುಖವು ಕೆಳಗೆ ಬಿತ್ತು. ಉತ್ಸಾಹವು ಕರಗಿ ಹೋಯಿತು. "ಅಯ್ಯಯ್ಯೋ, ಇಷ್ಟು ದೂರ ನಡೆದು ಬಂದೂ ವ್ಯರ್ಥ ಆಯಿತಲ್ಲ" ಎಂದು ನಿಟ್ಟುಸಿರನ್ನು ಬಿಟ್ಟಳು.

ಸುತ್ತಿನ ಜನರಲ್ಲಿ ಅವಳ ಅಜ್ಞಾನವು ಹುಟ್ಟಿಸಿದ್ದ ವಿನೋದವು ಮರೆಯಾಗಿ, ಈಗ ಅವಳ ಆವಾಭಂಗವು ತಂದ ಮರುಕಕ್ಕೆ ದಾರಿ ಕೊಟ್ಟಿತು. ಕೊಂಚ ಕಾಲ ಎಲ್ಲರೂ ಮೌನವಾದರು.

"ಅಪ್ಪ, ಇದಕ್ಕೆ ಬೇರೆ ದಾರಿಯೇ ಇಲ್ಲವೆ?" ಅವಳು ಅನುಮಾನದಿಂದ ಮತ್ತೊಮ್ಮೆ ಕೇಳಿದಳು :

ಅವನು ತಲೆಯಾಡಿಸಿದನ .

"ಹೋಗಲಿ, ಅವರನ್ನೇ ಕರೆದುಕೊಂಡು ಬರುತ್ತೀನಿ. ಒಂದು ಗಾಡಿ ಕಳಿಸುತ್ತೀರಾ?" ಬೀಬಿಯು ದಾರಿ ಕಂಡಂತೆ ಕೇಳಿದಳು.

"ಅವ್ವಾ, ಆ ಏರ್ಪಾಡು ನಮಗೆ ಸಾಧ್ಯವಾಗಿಲ್ಲ."

"ಅವರೆಲ್ಲ ಆಷ್ಟೊಂದು ಮಾಡುತ್ತಾರಂತೆ," ಅವಳು ಹಸಿರು ಬಾವುಟದ ಕಡೆ ಕೈತೋರಿಸಿದಳು.

"ಹುಂ. ಅದು ಶ್ರೀಮಂತರ ಆಟ!"

"ಛೇ! ಛೇ!" ಅವಳು ವಿಷಾದದಿಂದ ಕೈ ಒದರಿದಳು.

"ಹೋಗಲಿ ಬಿಡವ್ವ. ನಿನ್ನ ಓಟಿನ ಅದೃಷ್ಟ ಕಾಂಗ್ರೆಸ್ಸಿಗಿಲ್ಲ. ಅವನು ಸಮಾಧಾನ ಹೇಳಿದನು.

ಈ ವರೆಗೆ ಮತ್ತೆ ಯಾರೋ ಓಟು ಕೊಡಲು ಬಂದರು. ಆತನು ಅವರ ಕಡೆಗೆ ಗಮನವನ್ನು ತಿರುಗಿಸಿದನು. ಬೀಬಿಯು ಅಷ್ಟು ಹೊತ್ತು ಮೌನವಾಗಿ ಕುಳಿತಿದ್ದು ಮೆಲ್ಲನೆ ಎದ್ದಳು. ಹತ್ತಿರದಲ್ಲೆ ನೀರನ್ನು ಹನಿಸುತ್ತಿದ್ದ ಆರವಟ್ಟಿಗೆಯ ಬಳಿಗೆ ಹೋಗಿ, ತನ್ನ ಸೊಂಟದ ಗಂಟಿನಿಂದ ಒಂದು ಉಂಡೆ ಬೆಲ್ಲವನ್ನು ತೆಗೆದು ಬಾಯಿಗೆ ಹಾಕಿಕೊಂಡು, ನೀರನ್ನು ಕುಡಿದು ಹಾಗೇ ನೆಲದ ಮೇಲೆ ಕುಳಿತು, ಕೊಂಚ ಸುಧಾರಿಸಿಕೊಳ್ಳುತ್ತ ಯೋಚಿಸಿದಳು. ಮುಖ ಕ್ಷಣದಲ್ಲಿ ತಟ್ಟನೆದ್ದು ಬೇಗಬೇಗನೆ ಹೊರಟುಹೋದಳು.

೪

"ಬಾಗಿಲು!" ಬೀಬಿಯು ತನ್ನ ಮನೆಯ ಬಾಗಿಲನ್ನು ತಟ್ಟಿ ಕೂಗಿದಳು.

"ಬಂದೆ!" ಒಳಗಿನಿಂದ ಅನ್ಸಾರಿಯ ಕ್ಷೀಣಸ್ವರವು ಕೇಳಿ ಬಂದಿತು.

ಅವನು ಕಾಫಿಲೆಯ ಹಾಸಿಗೆಯಿಂದ ಎದ್ದು ಬಂದು ಚಾಲನ್ನು ತೆಗೆಯುವುದು ತಡವಾಯಿತು. ಆಯಾಸದಿಂದ ತಡಗಿದ್ದ ಬೀಬಿಯು ನಿಂತಿರದೆ ಹಾಗೇ ಜಗಲಿಯ ಮೇಲೆ ಕುಳ್ಳಿರಿಕೊಂಡು ಗೋಡೆಯನ್ನು ಒರಗಿಕೊಂಡಳು. ಚಾ ಕೆರ್ರೆಂದು ಬಾಯಿಬಿಟ್ಟಿತು.

"ಓಹೋ ಬಂದೇಬಿಟ್ಟೆಯ, ಇಷ್ಟು ಬೇಗ?" ಅನ್ಸಾರಿಯು ಜೊಂಗೆ ತಲೆ ಹಾಕಿ ಬಹ್ಯತ್ಯರ್ಥದಿಂದ ಕೇಳಿದನು.

"ಹುಂ, ಹೋಗೋವಾಗ ಓಟು ಕೊಡುವ ಉತ್ಸಾಹ. ಹೋಯ್ತೆ. ಒಬ್ಬುವಾಗ ನಿಮ್ಮನ್ನು ಕರೆದುಕೊಂಡು ಹೋಗೋ ಅಂದರು. ಬೇಗ ಬೇಗ ಒಂಪೆ." ಬೀಬಿಯು ಏಳದೆಯೇ ಉತ್ತರಕೊಟ್ಟಳು

"ಅನ್ನು, ನನ್ನ ಕರೆದುಕೊಂಡು ಹೋಗೋದೆ?" ಅವನು ಜಗುಲಿಯ ಮೇಲೆ ಕುಳಿತುಕೊಳ್ಳುತ್ತ ಕೇಳಿದನು.

"ಹುಂ."

"ಯಾಕೆ? ನೀನು ಓಟು.."

"ಅನು ಕಾಯಿದೆ ಒಲ್ಲವಂತೆ. ನೀವೇ ಬರಬೇಕಂತೆ"

"ಏ, ಹಾಗೇ?"

ಇಬ್ಬರೂ ಒಂದೆರಡು ಕ್ಷಣ ಮೌನವಾಗಿದ್ದರು.

"ಮತ್ತೆ ಹೊರಡಬೇಕಲ್ಲ. ಹೊತ್ತಾಗುತ್ತಿದೆ" ಬೀಬಿಯ

ಯೋಚಿಸುತ್ತ ಹೇಳಿದಳು.

"ಏನು! ನಾನು ಹೋಗೋದೆ? ಹುಡುಗಾಟದ ಮಾತು. ಈ ಬಾಗಿಲು ತೆಗೆಯೋದಿಕ್ಕೇ ತತ್ತರಿಸಿಕೊಂಡು ನೋಡೆ ಹಿಡಿದುಕೊಂಡು ಬಂದೆ. ಮೂರು ಮೈಲಿ.."

"ಆದರೆ ಕಾಂಗ್ರೆಸ್ಸಿಗೆ ಓಟು ಕೊಡಬೇಕಲ್ಲ?" ಅವಳು ಒತ್ತಿ ಹೇಳಿದಳು.

"ಹೋಗಲಿ ಬಿಡು. ನಮಗೆ ಇಷ್ಟೇ ಲಭ್ಯ."

"ಇಲ್ಲ, ಹೇಗಾದರೂ ಹೋಗೋಣ."

"ನಿಂಗೆ ಹುಚ್ಚು."

"ಇದಕ್ಕೆ ಅಷ್ಟು ಪ್ರಯಾಸಪಟ್ಟು ಬಿಡೋಣ."

"ಅದು ಹೇಗಾಗುತ್ತೆ? ನಡೆಯೋದು ತೀರ ಅಸಾಧ್ಯ ನುಗ್ಗೆ, ಗಾಡಿ-ಗೀಡಿಗೆ ಏರ್ಪಾಡು.."

"ಅದಕ್ಕಾಗಿ ಹಳ್ಳೀನೆಲ್ಲ ಸುತ್ತಿ ಬಂದೆ. ಪ್ರಯೋಜನವಿಲ್ಲ. ಕಾಂಗ್ರೆಸ್ಸಿಗೆ ಓಟು ಕೊಡೋರಿಗೆ ಯಾವ ಸಹಾಯಾನೂ ಮಾಡಬಾರದು ಅಂತ ನವಾಬರು ಕಟ್ಟುಮಾಡಿದಾರಂತೆ. ಎಲ್ಲರೂ ಹೆದರುತ್ತಾರೆ."

"ಓ, ನೋಡಿದೆಯಾ ಮತ್ತೆ?"

'ಆದರೇನು? ನಾವು ಅವರಿಗೆ ಸೋಲೋದೆ— ಇದರಲ್ಲಿ? ನಾನು ಹೋಗೋವಾಗಲೂ ಅವರಿಗೆ ಓಟು ಕೊಡೋರನ್ನೆಲ್ಲ ಲಾರಿಲಿ ಕರೆದುಕೊಂಡು ಹೋದರು. ನನ್ನೂ ಕರೆದರು. ನಾನೇ ಬೇಡ ಅಂದೆ. ಬಯ್ಯುತ್ತ ಉನ್ನುತ್ತ ಆಸೆ ತೋರಿಸುತ್ತ ಬೆದರಿಸುತ್ತ ಹೋದರು. ನಾನು ನಡೆದೇ ಹೋದೆ, ಬಂದೆ. ಆಗಲಿಲ್ಲವೆ?"

"ಆದರೆ ನಾನು ಹಜ್ಜೆ ಹೇಗಿಟ್ಟೀನು ಹೇಳು? ಬಹಳ ನಿತ್ರಾಣ."

"ಸ್ವಲ್ಪ ಧೈರ್ಯಮಾಡಿ. ಮನಸ್ಸು ತೀರ್ಮಾನಿಸಿದರೆ ದೇಹ ಇಷ್ಟೂ ಇಷ್ಟೂ ದಾರಿಗೆ ಬರುತ್ತೆ. ಅದರ ಶಕ್ತಿ ಹಿಗ್ಗುತ್ತೆ."

"ಆದೇನೋ ಯೇಗೋ!"

"ಸುಮ್ಮನೆ ಅನುಮಾನಿಸಬೇಡಿ. ಹೊರಟು ಬಿಡಿ. ದಾರೀಲಿ ಹೇಗಾಗುತ್ತೆ ನೋಡೋಣ. ದೇವರದಾನೆ."

'ಒಂದು ಓಟಿಗೆ ಇಷ್ಟೊಂದು ಸಾಹಸವೆ? ಯಾಕೆ ಈ ಹಟ? ಹೋಗಲಿ ಬಿಡಜಾರನೆ...." ಎಂದು ಮುಂತಾಗಿ ಅನಾಸ್ಥೆಯು ಗೊಣಗಿದನು.

ಆದರೆ ಬೀಬಿಯು ಗೊಣಗನ್ನು ಕೇಳಲು ಕಾಯಲಿಲ್ಲ. ಎಗರೇ ಎದ್ದು ಒಳಗೆ ಹೋಗಿದ್ದಳು. ಇನ್ನೊಂದು ಕ್ಷಣದಲ್ಲಿ ತಳೆಯದಾದ ದೊಡ್ಡ ಹಚ್ಚಡವನ್ನೂ, ಬೀಗವನ್ನೂ ತೆಗೆದು ಕೊಂಡು ಹೊರಗೆ ಬಂದಳು. ಹಚ್ಚಡವನ್ನು ಅನಾಸ್ಥೆಗೆ ಕೊಡಿಸಿದಳು. ಮನೆಗೆ ಬೀಗವನ್ನು ಹಾಕಿದಳು. ಅವಳ ಧೃಢ ಸ್ವಭಾವವನ್ನು ತಿಳಿದಿದ್ದ ಅನಾಸ್ಥೆಯು ಇನ್ನು ವಿರೋಧಿಸಲಿಲ್ಲ. ಸುಮ್ಮನೆ "ಯಾ ಅಲ್ಲಾ, ಯಾ ಅಲ್ಲಾ" ಎಂದು ದೇವರ ಧ್ಯಾನವನ್ನು ಮಾಡುತ್ತಿದ್ದನು. ಅಪ್ಪೆ. ಕಾಫಿಲೆಯ ಮುದಿಗಂಡನನ್ನು ಕೈಹಿಡಿದು ನಡೆಸುತ್ತ ದಣಿದ ಮುದುಕಿಯು ಹೊರಟೇ ಬಿಟ್ಟಳು

೫

ಈಗ ಚುನಾವಣೆ ಕ್ಷೇತ್ರದಲ್ಲಿ ಬ್ಯಾಂಡು ಇನ್ನೂ ಮೊಳಗುತ್ತಿದ್ದರೂ, ಜನದ ಗಿಜಿಗಿಜಿಯು ಕಡಿಮೆಯಾಗಿತ್ತು. ಗುಂಪು ಮಧ್ಯಾನ್ಹದ ಸಂಬ್ಯೆಯು ಅರ್ಧಕ್ಕಿಂತ ಕೆಳಗೆ ಇಳಿದಿತ್ತು. ಜನರು ಜೆದರಿ ಹೋಗುತ್ತಿದ್ದರು. ಚುನಾವಣೆಯ ವಿನೋದವು ಹಳೆಯ ದಾಗಿ ವಾತಾವರಣವು ಕೊಂಚ ಶಾಂತಿಗೊಂಡಿತ್ತು. ಆಟವು ಮುಗಿದಾಗ ಕಾಣುವ ನಾಟಕಮಂದಿರದಂತೆ ದೃಶ್ಯವು ಬಯಲಾಗುತ್ತಿತ್ತು. ಚುನಾವಣೆ ನಡೆಸುತ್ತಿದ್ದವರ ಪೈಕಿಯೂ ಅನೇಕರು ಆರಾಮವಾಗಿ ಅತ್ತಿತ್ತ ಅಡ್ಡಾಡುತ್ತಿದ್ದರು. ನಾಲ್ಕಾರು ಜನರು ಅಲ್ಲಲ್ಲಿ ಕೂಡಿ ಸ್ಪರ್ಧಿಗಳ ಗೆಲವು ಸೋಲುಗಳನ್ನು ಚರ್ಚಿಸುತ್ತ; ಈ ಜೂಜು ಕುತ್ತಿಗೆ-ಕುತ್ತಿಗೆಯಷ್ಟು ಸರಿ ಸಮವಾಗಿದೆಯೆಂದು ಅನಿರ್ಧರವನ್ನು ಸೂಚಿಸುತ್ತಿದ್ದರು. ಇನ್ನು ಅರ್ಧ ಗಂಟೆಯಲ್ಲಿ ಚುನಾವಣೆಯು ಮುಗಿಯುವುದರಲ್ಲಿತ್ತು.

ಈ ಸಮಯದಲ್ಲಿ ಬೀದಿಯಿಂದ ಜನರ ದೊಡ್ಡ ಕೋಲಾಹಲವು ಕೇಳಿ ಬಂದಿತು. ಅವರಣದಲ್ಲಿದ್ದವರೆಲ್ಲ ಉತ್ಸುಕರಾಗಿ ಪ್ರಾಕಾರದ ಬಾಗಿಲಿಗೆ ಬಂದು ನೋಡಿದರು. ಹತ್ತಿರದಲ್ಲೇ ಜನರು ದೊಡ್ಡ ಗುಂಪುಗೂಡಿ ಮೆಲ್ಲಗೆ ಸರಿದು ಬರುತ್ತಿದ್ದರು. ಜನರು 'ಹ್ಹಾ! ಹ್ಹಾ!' ಎಂದು ಗಹಗಹಿಸಿ ನಗುತ್ತಲೂ ಜೆಪ್ಪಾಳೆತಟ್ಟುತ್ತಲೂ 'ಭಲೆ! ಭೇಷ್! ಅಹಹಾ!' ಎಂದು ಕೂಗುತ್ತಲೂ ಇದ್ದರು. ಜೆದರಿ ಹೋಗುತ್ತಿದ್ದ ಜನರೆಲ್ಲ ಮತ್ತೆ ಈ ಗುಂಪನ್ನು ಸುತ್ತಿಕೊಂಡು ನೋಡುತ್ತಿದ್ದರು. ಗುಂಪು ಪ್ರಾಕಾರದ ಬಾಗಿಲನ್ನು ಸೇರಿದೊಡನೆ, ಇಡ್ಲಯ ಜನರೂ ಸುತ್ತುಗಟ್ಟಿ ತುದಿಗಾಲಿನ ಮೇಲೆ ನಿಂತು ಏನು ವಿನೋದವೆಂದು ಇಣಕಿ ನೋಡಿದರು.

ಅಲ್ಲಿ ಅವರಿಗೆ ಕಂಡದ್ದೇನು? ಬೀಬಿಯು ಗುಂಪಿನ ಮಧ್ಯದಲ್ಲಿದ್ದಳು. ಮೊದಲೇ ಧೂಳು ಮುಚ್ಚಿದ್ದ ಅವಳ ಬಿರಿಗಾಲು ಗಳು ಈಗ ಬಾತಿದ್ದುವು. ಬಗ್ಗಿದ ಮಂಡಿಗಳು ನಡುಗುತ್ತಿದ್ದುವು. ಒದ್ದೆಯಾದ ತಲೆಗೂದಲು ಅಸ್ತವ್ಯಸ್ತವಾಗಿ ಇಳಿ ಬಿದ್ದಿತ್ತು. ಬತ್ತಿದ ಮೊಗದಿಂದ ಬೆವರು ಧಾರಾಳವಾಗಿ ಹರಿದು ಗಲ್ಲದಿಂದ ತೊಟ್ಟಿಕ್ಕುತ್ತಿತ್ತು. ಆದರೆ ಅವಳ ಅಳವಾದ ಕಿರುಗಣ್ಣುಗಳು ಮಾತ್ರ ಹೊಳೆಯುತ್ತಿದ್ದುವು. ನೋಟದಲ್ಲಿ ಗೆಲುವಿನ ಹೆಮ್ಮೆಯಿತ್ತು. ಮತ್ತೆ ಅನ್ಸಾರಿ ಎಲ್ಲಿ? ಅವನೆದ್ದ, ಕಿಲ್ಲೇ. ಅವಳ ಅರಬ್ಬಾಗಿದ ಬೆನ್ನಿನ ಮೇಲೆ; ದೊಡ್ಡ ಮೂಟೆಯಾಗಿ!

ಮುತವಾರನನ್ನು ಹೊತ್ತು ತಂದಿದ್ದಳು, ಹಮ್ಮತ್ ಬೀಬಿ!

ಪುಸ್ತಕಾಲಯ ಶಾಸ್ತ್ರ ೨.

ಪುಸ್ತಕಗಳ ವರ್ಗೀಕರಣ

ಶ್ರೀ. ಬರಣಿ ಶ್ರೀನಿವಾಸ ಬಿ. ಎ. (ಆನರ್ಸ್), ಸಾಂಗಲಿ.

ಬಂದ ಪುಸ್ತಕವನ್ನು ಎಲ್ಲಿಯೋ ಹೇಗೋ ಇರಿಸಿಬಿಡುವುದು ಪುಸ್ತಕ ಭಾಂಡಾರದಲ್ಲಿ ಗೊಂದಲವನ್ನೆಬ್ಬಿಸುವುದು. ಬೇಕಾದ ಪುಸ್ತಕ ಕೂಡಲೆ ಸಿಕ್ಕುವಂತೆ ಮಾಡುವುದರಿಂದಲೆ ಆ ಗೊಂದಲ ತಪ್ಪುವುದು.

Classification is the highest art of the Librarian."

ಪುಸ್ತಕಾಲಯ ತಂತ್ರದಲ್ಲಿ ಪುಸ್ತಕ ವರ್ಗೀಕರಣಕ್ಕೆ ಒಂದು ಮಹತ್ತ್ವದ ಸ್ಥಾನವಿದೆಯೆಂಬುದನ್ನು ರಿಚರ್ಡ್‌ಸನ್[೧] ಅವರ ಮೇಲಿನ ವಾಕ್ಯ ಸ್ಪಷ್ಟವಾಗಿ ಸೂಚಿಸುತ್ತದೆ. ನಿಜವಾಗಿ ನೋಡಿದರೆ ಪುಸ್ತಕಾಲಯಗಳ ಕಾರ್ಯದಿದ ಯಶಸ್ವಿತೆಯು, ಅಲ್ಲಿಯ ಪುಸ್ತಕಗಳ ವರ್ಗೀಕರಣವನ್ನೇ ಮುಖ್ಯವಾಗಿ ಅವಲಂಬಿಸಿದೆ. ಈ ಮಾತನ್ನು ವಿವರವಾಗಿ ಮುಂದೆ ನೋಡುವ: ಪುಸ್ತಕ ವರ್ಗೀಕರಣವೆಂದರೆ ಜ್ಞಾನರಾಶಿಯನ್ನೆಲ್ಲ ತಕ್ಕಮಟ್ಟಿಗೆ ಅರ್ಥಮಾಡಿಕೊಳ್ಳುವುದಿರುವುದರಿಂದ, ಆ ಕೆಲಸ ಮಾಡುವವರಿಗೂ ಕಲಿಯುವವರಿಗೂ, ಅಪೇಕ್ಷಿತ ಜ್ಞಾನವನ್ನು ಅದು ತಂದುಕೊಡುತ್ತದೆ! ಅಲ್ಲದೆ "ಒಂದು ಪುಸ್ತಕ ಯಾವುದರ ಬಗ್ಗೆ ಇದೆ, ಜ್ಞಾನಭಾಂಡಾರದಲ್ಲಿ ಅದರ ನಿರ್ದಿಷ್ಟ ಸ್ಥಾನವೇನು?—ಎಂಬುದನ್ನು ಗುರುತಿಸುವುದು ಹುಡುಗಾಟಿಕೆಯ ಮಾತಲ್ಲ" ಎಂದು ಆದಕ್ಕೇ ಗ್ರಂಥಾಧಿಕಾರಿಗಳಿಗೆ—ನಮ್ಮ ದೇಶದಲ್ಲಿ ಇಷ್ಟಲ್ಲದಿದ್ದರೂ—ಪಾಶ್ಚಾತ್ಯದೇಶಗಳಲ್ಲಿ ಬಹಳ ಹಚ್ಚಿನ ಮಹತ್ತ್ವವಿದೆ. ಈ ಮನ್ನಣೆಯ ಮುಖ್ಯ ಕಾರಣವೆಂದರೆ, ಈ ಪುಸ್ತಕ ವರ್ಗೀಕರಣ!

ಆದರೆ ನಮ್ಮ ನಾಡಿನ ಸದ್ಯದ ಪುಸ್ತಕಾಲಯಗಳಲ್ಲಿಯ ವರ್ಗೀಕರಣದ ರೀತಿಯನ್ನು ನೋಡಿದರೆ, ಮೇಲಿನ ಮಾತು ಬರಿ ಹೊಗಳಿಕೆಯಿದು ಎಂದೆನ್ನಿಸಬಹುದು. ಈ ತರೋಪವು ನಮ್ಮಲ್ಲಿಯ ವರ್ಗೀಕರಣದ ಅಶಾಸ್ತ್ರೀಯ ಹಾಗು ಅವ್ಯವಸ್ಥಿತ ರೀತಿಯನ್ನು ಎದ್ದು ಕಾಣುವಂತೆ ತೋರಿಸಿಕೊಡುವುದಾಗಿದೆಯೆ ಹೊರತು, ವರ್ಗೀಕರಣದ ಸಬಬಾದ ಜೆಲೆಗೆ ಏನೂ ಜ್ಯೋತಿಯಿಲ್ಲ.

ನಮ್ಮಲ್ಲಿ ಪುಸ್ತಕಾಲಯಗಳ ಉಪಯೋಗ ಮಾಡಿಕೊಳ್ಳುವವರಿಗೂ, ಉಪಯೋಗಮಾಡಿಕೊಳ್ಳುವವರಿಗೂ, ವರ್ಗೀಕರಣದ ಕಲ್ಪನೆ ಇರುವುದು ಇಷ್ಟೇ: ಒಟ್ಟು ಪುಸ್ತಕಗಳನ್ನು ಕವಿತೆ, ಕಾದಂಬರಿ, ಕತೆ, ವೇದಾಂತ, ಸಮ್ಮಿಶ್ರಗದ್ಯ—ಎಂದು ಮುಂತಾಗಿ ವಿಂಗಡಿಸಿ, ಪುಸ್ತಕ ಇದ್ದಹಾಗೆಲ್ಲ. ಮುಂದೆ ಬಂದ ಹಾಗೆಲ್ಲ, ಅನುಕ್ರಮವಾಗಿ ಸೇರಿಸಿಕೊಂಡು, ಅವಕ್ಕೆ ಅಂಕೆಗಳನ್ನು ಕೊಡುತ್ತ ಹೋದರಾಯಿತು. ಕೆಲವು ಕಡೆಗೆ ಗ್ರಂಥಕಾರರ ಅಥವಾ ಪುಸ್ತಕದ ತಲೆಬರೆಹದ ಅಕ್ಷರಾನುಕ್ರಮಣಿಕೆಯಿಂದ ಅಂಕೆಗಳನ್ನು ಹಾಕುವುದು ಕಂಡುಬರುತ್ತದೆ. ಯಾವುದೊಂದು ಪುಸ್ತಕಾಲಯದ ಗ್ರಂಥಸಂಗ್ರಹವು ಇಷ್ಟೇ, ಇನ್ನು ಹೊಸ ಪುಸ್ತಕ ಸೇರಿಸುವುದು ಇಲ್ಲ—ಎಂಬುದು ನಡೆಯುವಂತಿದ್ದರೆ ಇದು ಸರಿಹೋಗಬಹುದು. ಆದರೆ ಹಾಗಾಗುವುದು ಸಾಧ್ಯವಿಲ್ಲ. ಇಷ್ಟಕ್ಕೂ ಈ ಅಕ್ಷರಾನುಕ್ರಮಣಿಕೆಯಿಂದ ಅಂಕೆಗಳನ್ನು ಹಾಕಿದಾಗ, ಅದು ಗ್ರಂಥಸೂಚಿ (Catalogue) ಯ ಒಂದು ನಮೂನೆಯೆನ್ನಿಸಿಕೊಳ್ಳಬಹುದಲ್ಲದೆ, ವರ್ಗೀಕರಣವಾಗಲಾರದು. ಇರಲಿ, ಒಂದು ಪುಸ್ತಕ ಬೇಕಾದವರು, ಆ ರೀತಿಯಲ್ಲೇ ಸಿದ್ಧಪಡಿಸಿದ ಕ್ಯಾಟಲಾಗನ್ನು ಉದ್ದಕ್ಕೂ ನೋಡುತ್ತಹೋಗಬೇಕು; ಒಮ್ಮೆ ಸಿಕ್ಕಲಿಲ್ಲ ಎಂದರೆ ಇನ್ನೊಮ್ಮೆ ಇಡೀ ಪಟ್ಟಿಯನ್ನೇ ತಿರುವಿಹಾಕಬೇಕು. ಕೆಲವು ಸಲ ಆ ಪುಸ್ತಕವು ಓದುಗನು ತಿಳಿದುಕೊಂಡ ವಿಭಾಗದಲ್ಲಿಗಿರದೆ, ಬೇರೆ ಕಡೆಗೆ ಅದನ್ನು ಹುಡುಕಬೇಕಾಗುವುದು. ರಾಮಕೃಷ್ಣ ಪರಮಹಂಸರ ಬಗ್ಗೆ ತಿಳಿದುಕೊಳ್ಳಬೇಕೆಂದು ಒಬ್ಬ ಅಧ್ಯಾಸಿಯು ಬಯಸಿದರೆ, ಅವರ ಅಧ್ಯಾತ್ಮದ ತತ್ತ್ವಗಳನ್ನು ತಿಳಿದುಕೊಳ್ಳಲು ಒಂದು ವಿಭಾಗವನ್ನು ನೋಡಬೇಕು. ಅವರ ಚರಿತ್ರೆಗೆ ಇನ್ನೊಂದನ್ನು ಕಾಣಬೇಕು. ತತ್ತ್ವಗಳನ್ನು ಕಥಾರೂಪದಲ್ಲಿ ಹೇಳಿದ ಅವರ ಉಪದೇಶಗಳಿಗೆ, ಕತೆ-ಕಾದಂಬರಿಗಳ ವಿಭಾಗವನ್ನು ಬೆದಕಬೇಕು. ಇನ್ನು ರಾಮಕೃಷ್ಣ ಪರಮಹಂಸರ ಮೇಲೆ ಬರೆದ ವಿಮರ್ಶಾಗ್ರಂಥಗಳಿಗೆ ಸಮ್ಮಿಶ್ರಗದ್ಯವೇ ಗತಿ. ಬೆಲ್ಲ ಪುಸ್ತಕಾಲಯಗಳು ಇದಕ್ಕೂ ಸ್ವಲ್ಪ ಸುಧಾರಿಸಿರಬಹುದು. ಇಂತು ಇದು ಸಾಮಾನ್ಯ ಸ್ಥಿತಿ. ಈ ಮಾತನ್ನು ಇನ್ನು ಹೆಚ್ಚಿಗೆ ಬೆಳೆಯಿಸದೆ, ಪುಸ್ತಕಾಲಯಗಳು ಬೆಳೆಯಬೇಕಾದ ಸಂಸ್ಕೃತಿಯ ಎಂಬುದನ್ನು ನೆನೆದು, ಶಾಸ್ತ್ರೀಯ ವರ್ಗೀಕರಣದ ರೀತಿಯನ್ನು ಕಲಿತು, ಬೇಗ ನಮ್ಮ ಪುಸ್ತಕಾಲಯಗಳಲ್ಲಿ ಅದನ್ನು ಆಚರಣೆಗೆ ತರುವುದಕ್ಕೆ ಯತ್ನಿಸುಣ.

ಪುಸ್ತಕಗಳನ್ನೊಂದೇ ಅಲ್ಲದೆ, ಇತರ ಎಲ್ಲ ವಸ್ತುಗಳನ್ನೂ ನಾವು ವರ್ಗೀಕರಣಮಾಡುತ್ತೇವೆ. ಇದು ನಿಸರ್ಗಜನ್ಯವಾಗಿ ಮೊದಲಿನಿಂದಲೂ ನಡೆದುಕೊಂಡುಬಂದಿದೆ. ಇಂದಿಗೂ ಇ ನಮಗೇ ಗೊತ್ತಾಗದಂತೆ ಪ್ರತಿನಿತ್ಯ ನಡೆದುಕೊಂಡುಬಂ

ಮು

೧. ಬರ್ಕರ್ ಸೇಪರ್ಟ್ಸ್, Introduction to Library Classification.

ದನ್ನು ನಾವು ಕಾಣಬಹುದು. ನೈಸರ್ಗಿಕವಾದುದು ಎಂದು ಹೇಳಿದೆ: ಅಡವಿಯಲ್ಲಿ ಚಿಗರೆಗಳು ತಮ್ಮಷ್ಟಕ್ಕೇ ಒಂದು ಗುಂಪಾಗಿ ಇರುತ್ತವಲ್ಲವೆ? ಕಾಗೆಗಳ ಬಳಗ, ಕೋಗಿಲೆ ತಮ್ಮಂತೇ ಜಾತಿಯಲ್ಲ— ಎಂದು ಸೇರಿಸಿಕೊಳ್ಳುವುದಿಲ್ಲ ಅದರಂತೆ ಉಳಿದ ಪ್ರಾಣಿಗಳೂ ತಮ್ಮದೊಂದು ವರ್ಗವನ್ನು ಕಲ್ಪಿಸಿಕೊಂಡಿರುತ್ತವೆ. ಮಾನವವರ್ಗ ಎಂದು ಕರೆಯುವುದರ ಅರ್ಥವೇ ಇದು. ಪೇಟೆಯಲ್ಲಿ ನಾವು ಬೇಕಾದ ಅಂಗಡಿಗೆ ಹೋದರೂ ವರ್ಗೀಕರಣವನ್ನು ಕಾಣುತ್ತೇವೆ ಹಣ್ಣು ಮಾರುವವನಲ್ಲಿ ಹೋದರೆ, ಮೊದಲಿಗೆ ಬೇರೆ ಬೇರೆ ತರದ ಹಣ್ಣುಗಳನ್ನು ಬೇರೆಯಾಗಿಟ್ಟದ್ದು ಕಂಡುಬರುತ್ತದೆ. ಅನಂತರ ಅವುಗಳ ಒಂದೊಂದರಲ್ಲೂ ತರಗತಿ. ಅಂತೂ ಏಂಗಡಿಸುವುದು, ಒಂದೆಡೆ ಸೇರಿಸುವುದು ಎರಡೂ ಒಂದಿಲ್ಲೊಂದು ಬಗೆಯಿಂದ ನಮ್ಮ ಪ್ರತಿನಿತ್ಯದ ಜೀವನದಲ್ಲಿ ಕಾಣಸಿಕ್ಕುತ್ತದೆ. ಇನ್ನೊಂದು ರೀತಿಯಿಂದ ನೋಡುವ: ಮಲ್ಲಿಗೆ ಎಂದಕೂಡಲೇ ಹೂಗಳ ಸಮುದಾಯದಲ್ಲಿ ಇದು ಒಂದು ಬಗೆಯದು; ಒಂದು ಪತ್ರಿಕೆಯ ಹೆಸರು ಹೇಳಿದಾಗ, ಪತ್ರಿಕೆಗಳ ಗುಂಪಿನಲ್ಲಿ ಇದು ಒಂದು— ಎಂದು ಮುಂತಾಗಿ ನಾವು ತಿಳಿಯುತ್ತೇವಷ್ಟೆ. ಹೀಗಿರುವುದರಿಂದ ಪ್ರತಿಯೊಂದು ವಸ್ತುವಿನ ಹೆಸರೂ ವರ್ಗನಾಮವೇ ಆಗಿರುತ್ತದೆ. ಇಷ್ಟೆಲ್ಲದರಲ್ಲಿ ಒಂದು ಸಮುದಾಯದಿಂದ, ವಸ್ತುಗಳನ್ನೆಲ್ಲ ಒಂದುಕಡೆ ತಂದು, ಸಾಮ್ಯವಿಲ್ಲದುವುಗಳನ್ನು ಬೇರ್ಪಡಿಸುತ್ತೇವೆ ವರ್ಗೀಕರಣವೆಂದರೆ, ಹೋಲಿಕೆಯ ಪ್ರಮಾಣದ ಮೇಲಿಂದ ವಸ್ತು ಅಥವಾ ವಿಷಯವಸ್ತುವನ್ನು ಒಂದೆಡೆ ತರುವ ಇಲ್ಲವೆ ಬೇರ್ಪಡಿಸುವ ಮನೋಯೋಜನೆ'[3]

ಇದು ಮನೋಯೋಜನೆ; ಏಕೆಂದರೆ ವಸ್ತುಗಳಲ್ಲಿ ಹೋಲಿಕೆಯಿದೆ— ಇಲ್ಲ.— ಎಂಬುದನ್ನು, ಅವುಗಳ ವಿಷಯಕ್ಕೆ ನಮ್ಮ ಮನಸ್ಸಿನಲ್ಲಿದ್ದ ಪೂರ್ವಬಾವನೆಗಳಿಂದಲೆ ಹೇಳುತ್ತೇವಷ್ಟೆ? ಈ ಹೋಲಿಕೆಯೆನ್ನುವುದು ಕೆಲವು ವಸ್ತುಗಳನ್ನು ಒಂದೆಡೆ ತರುವುದಕ್ಕೆ ಒಂದು ಆಸುಕೂಲ್ಯ. ಇನ್ನು ಈ ಹೋಲಿಕೆಯ ಪ್ರಮಾಣವು ನಾವಿಟ್ಟುಕೊಂಡ ಉದ್ದೇಶಕ್ಕೆ ಸರಿಹೋಗುವಂತಿರಬೇಕು. ಮಾನವವರ್ಗವನ್ನು ಏಂಗಡಿಸುವಾಗ, ಮೂಗಿನ ಸಾದೃಶ್ಯದ ಪ್ರಮಾಣದ ಮೇಲಿಂದ ಬೇರ್ಪಡಿಸುವುದು ಅಬದ್ಧವಾಗುವುದು; ಮತ್ತು ಅದು ನಿರುಪಯೋಗಿ. ಜನಾಂಗದ ಇಲ್ಲವೆ ದೇಶದ ಹೋಲಿಕೆಯನ್ನು ಅಳತೆಗೋಲಾಗಿಟ್ಟುಕೊಂಡಾಗ, ಅದು ಸರಿ ಈ ಹೋಲಿಕೆಯ ಪ್ರಮಾಣದ ವಿಷಯದಲ್ಲಿ ಇನ್ನೊಂದು ಮಹತ್ತ್ವದ ಮಾತೆಂದರೆ, ಯಾವುದೊಂದನ್ನು ಅಳತೆಗೋಲಾಗಿಟ್ಟುಕೊಂಡಿರುವಲ್ಲಿ, ಅದು ಮೊದಲಿನಿಂದ ಕೊನೆಯವರೆಗೆ ಒಂದೆಯಾಗಿರಬೇಕು ಪುಸ್ತಕಗಳನ್ನು ಇವು ಕಾದಂಬರಿ, ಇವು ಇಂಗ್ಲಿಶ್ ಗ್ರಂಥಗಳು, ಇವು ನಕಾಶೆಗಳು, ಇವು ಶಿಲೆಯಾವೃತ್ತಿಯ ಗ್ರಂಥಗಳು ಎಂದು ಗುಂಪು

3. ಅದೇ ಪುಸ್ತಕ, ಪುಟ ೮.

ಮಾಡುತ್ತ ಹೋಗುವುದು ಸಾಧ್ಯವಾಗಬಲ್ಲದೆ?

ಪುಸ್ತಕವರ್ಗೀಕರಣವು ಮೇಲಣ ವಿವರಣೆಗೆ ಹೊರತಲ್ಲ. ಸಾಮಾನ್ಯ ವರ್ಗೀಕರಣದಲ್ಲಿ ಪುಸ್ತಕಗಳ ವರ್ಗೀಕರಣವು, ಅದರ ಒಂದು ಅಂಗವಾಗಿದೆ. ಆದರೂ ಪುಸ್ತಕವರ್ಗೀಕರಣದ ಅಳವಾದ ಅಭ್ಯಾಸ ನಡೆದು ಒಲವೂರ ಹೋಗಿದೆ. ತನ್ನದೆ ಆದ ಒಂದು ವೈಶಿಷ್ಟ್ಯವನ್ನು ಬಳಸಿಕೊಂಡಿದೆ. ಜ್ಞಾನಸಾಧನೆಯು ಮಾರ್ಗದಲ್ಲಿ ಓದುಗನಿಗೆ, ನಿರ್ದಿಷ್ಟವಾಗಿಯೂ ಮಿಕ್ಕು, ಬಲುಬೇಗ ಸಲಕರಣೆಗಳು ಸಿಕ್ಕಬೇಕು— ಎಂಬ ಪುಸ್ತಕಾಲಯದ ಉದ್ದೇಶಕ್ಕನುಗುಣವಾಗಿ, ಪುಸ್ತಕವರ್ಗೀಕರಣವು ಪ್ರತ್ಯೇಕವಾಗಿ ಬೆಳೆದುಕೊಂಡು ಒಂದು, ಉಳಿದ ವರ್ಗೀಕರಣಕ್ಕಿಂತ ಹೆಚ್ಚು ಆಳವಾಗಿಯೂ, ಶಾಸ್ತ್ರೀಯವಾಗಿಯೂ ಮಾರ್ಪಟ್ಟಿದೆ

ಯಾವುದೇ ವಸ್ತುವಿನ ವರ್ಗೀಕರಣ ಮಾಡಿದಾಗಲೆಲ್ಲ, ಅದರಿಂದ ನಮ್ಮ ಕೆಲಸ ಸುಲಭವಾಗಲಿ ಎಂಬುದೇ ಆಗಿರುತ್ತದೆಂಬುದನ್ನು ಮೇಲೆಹೇಳಿದ ಉದಾಹರಣೆಗಳಿಂದ ನಾವು ಕಂಡುಕೊಳ್ಳಬಹುದು. ಇದರಿಂದ ವರ್ಗೀಕರಣವು, ಇನ್ನೊಂದು ಕಾರ್ಯವನ್ನು ಸಾಧಿಸುವುದಕ್ಕಾಗಿ, ಒಂದು ಸಾಧನವೆಂದ ಹಾಗಾಯಿತು.[4] ವಿಜ, ಪುಸ್ತಕಗಳ ಸುವ್ಯವಸ್ಥಿತ ಹೊಂದಾಣಿಕೆಯಿಂದ, ಓದುಗನು ಪುಸ್ತಕಗಳ ಉಪಯೋಗವನ್ನು ಮಾಡಿಕೊಳ್ಳುವುದರ ಪ್ರತಿಯೊಂದು ಬಗೆಯಲ್ಲಿ ಅವನಿಗೆ ನೆರವಾಗುವುದೇ ವರ್ಗೀಕರಣದ ಮುಖ್ಯಧ್ಯೇಯ.

ರಾ. ಸಾ. ರಂಗನಾಥನ್ನವರು, ಪುಸ್ತಕಾಲಯ ಶಾಸ್ತ್ರದ ಕಾರ್ಯವನ್ನೆಲ್ಲ ಐದು ಸೂತ್ರಗಳಲ್ಲಿ ಹೇಳಿದ್ದಾರೆ.[4]

೧. ಪುಸ್ತಕಗಳು ಉಪಯೋಗಕ್ಕಾಗಿ ಇವೆ.

೨. ಎಲ್ಲರಿಗೂ ತಂತಮ್ಮ ಪುಸ್ತಕಗಳು ದೊರೆಯಬೇಕು.

೩. ಪ್ರತಿ ಪುಸ್ತಕಕ್ಕೆ ಓದುಗ ದೊರೆಯಬೇಕು.

೪. ಓದುಗನ ಬೇಳೆಉಳಿಸುವುದು ಮತ್ತು ಪುಸ್ತಕಾಲಯದ ಕೆಲಸಗಾರರ ಬೇಳೆ ಉಳಿಸುವುದು.

೫. ಪುಸ್ತಕಾಲಯವು ಬೆಳೆಯುತ್ತಿರುವ ಸಂಸ್ಥೆ.

ಈ ಐದು ಸೂತ್ರಗಳಲ್ಲಿ ಅಡಕವಾದ ಕೆಲಸದ ನಿರ್ವಹಣೆ ಸಾಧ್ಯವಾಗಬೇಕಾದರೆ, ಪುಸ್ತಕಾಲಯ ತಂತ್ರದಲ್ಲಿ, ವರ್ಗೀಕರಣ, ಗ್ರಂಥಸೂಚಿ, ಸಂದರ್ಭಸೇವೆ—ಮುಂತಾದ ಸಾಧನಗಳಿವೆ. ಅವುಗಳಲ್ಲೆಲ್ಲ ವರ್ಗೀಕರಣವೇ ಹೆಚ್ಚು ನೇರವಾಗಿ ಉಪಯೋಗವಾಗುವಂತಹದು. ಅಲ್ಲದೆ ಉಳಿದುವುಗಳ ಉಪಯುಕ್ತತೆ ಗಮ್ಯವಾಗಬೇಕಾದರೆ, ವರ್ಗೀಕರಣದ ಸುವ್ಯವಸ್ಥೆಯೇ ಕಾರಣವಾಗಿರುತ್ತದೆ. ಪ್ರತಿಯೊಬ್ಬ ಓದುಗನಿಗೆ ಸುಲಭವಾಗಿ ಮತ್ತು ತೀರ ಅಲ್ಪವೇಳೆಯಲ್ಲಿ ಅವನಿಗೆ ಬೇಕಾದ ಪುಸ್ತಕ ದೊರೆಯುವಂತೆ ನೋಡಿಕೊಳ್ಳುವುದೂ

3. Classification of Marathi Literature ಪು ೬.

4 Five Laws of Library Science. ೧೯೩೧.

ಮುಖ್ಯಕೆಲಸವಾಗಿದೆ. ಅಂತು ವರ್ಗೀಕರಣವು ಸಾಧಿಸ-ಬೇಕಾದ ಇನ್ನು ಕೆಲವು ಸಂಗತಿಗಳನ್ನು ಸೇರಿಸಿ ಒಟ್ಟಿಗೆ ಇಲ್ಲಿ ನಿರ್ದೇಶಿಸಿದೆ: [5]

೧. ಒಬ್ಬ ಓದುಗನು ಒಂದು ಪುಸ್ತಕಕ್ಕೇ ಬೇಡಿದಾಗ, ಆ ಗ್ರಂಥಾಲಯದಲ್ಲಿ ಎಷ್ಟೇ ಸಾವಿರ ಪುಸ್ತಕಗಳಿರಲಿ, ಕೂಡಲೇ ಅದು ಅವನಿಗೆ ದೊರೆಯಬೇಕು.

೨. ಆ ಪುಸ್ತಕವು ತಿರುಗಿ ಬಂದಮೇಲೆ, ಆ ಕೂಡಲೆ, ಕವಾಟಿನಲ್ಲಿ ಅದಕ್ಕೆ ತನ್ನ ಮೊದಲಿನ ಸ್ಥಾನ ದೊರೆಯಬೇಕು.

೩. ಒಂದು ವಿಷಯದ ಮೇಲಿನ ಅಭ್ಯಾಸಕ್ಕೆಂದು ಎಲ್ಲ ಪುಸ್ತಕಗಳನ್ನು ಕೇಳಿದಾಗ, ಅದರ ಒಟ್ಟು ನಿರ್ದೇಶನ ಸಾಧ್ಯವಾಗಿರಬೇಕು.

೪. ಹೊಸ ಪುಸ್ತಕವೊಂದು ಬಂದಾಗ, ಆ ವಿಷಯಕ್ಕ-ವಾಗಿದ್ದ ಉಳಿದ ಪುಸ್ತಕಗಳ ಸಾಲಿನಲ್ಲಿ, ಅದರ ನಿರ್ದಿಷ್ಟ ಸ್ಥಾನ ಯಾವಾಗಲೂ ದೊರೆವಂತಿರಬೇಕು.

೫. ಸಂಪೂರ್ಣ ಹೊಸತಾದ ಒಂದು ವಿಷಯದ ಮೇಲೆ ಬಂದ ಮೊದಲನೆಯ ಪುಸ್ತಕವನ್ನು ನಿರ್ದೇಶಿಸಲಿಕ್ಕೂ, ವರ್ಗೀ-ಕರಣ ಪದ್ಧತಿಯಲ್ಲಿ ಅನುಕೂಲತೆಯಿರಬೇಕು.

ಈಗ ಪುಸ್ತಕ ವರ್ಗೀಕರಣದ ನಿಜವಾದ ಪರಿಚಯಕ್ಕೆ ತೊಡಗುವ: ಸ್ಕೂಲನೋಟಕ್ಕೆ ವರ್ಗೀಕರಣವು ಎರಡು ಸ್ವರೂ-ಪದಲ್ಲಿ ಕಂಡುಬರುವುದು. ಒಂದು, ಪುಸ್ತಕಗಳನ್ನು ವರ್ಗ-ಗಳಲ್ಲಿ ವಿಂಗಡಿಸುವುದು. ಇನ್ನೊಂದು, ಈ ವರ್ಗಗಳನ್ನು ಗುರುತಿಸುವುದಕ್ಕಾಗಿ ಮಾಡಿಕೊಂಡ ಸಾಂಕೇತಿಕ ಭಾಷೆ. ಒಂದರ ಕೊನೆಯೆ ಇನ್ನೊಂದರ ಮೊದಲು. ಅಂತು ಪುಸ್ತಕ ವರ್ಗೀಕರಣದ ವ್ಯಾಖ್ಯೆಯನ್ನು, ರಂಗನಾಥನ್ನರ ಮಾತಿನಲ್ಲಿ ಹೀಗೆ ಹೇಳಬಹುದು:— 'ಪುಸ್ತಕವರ್ಗೀಕರಣವೆಂದರೆ, ಕ್ರಮುದರ್ಶಕ ಸಂಕೇತಗಳನ್ನೊಳಗೊಂಡ ಒಂದು ನಿರ್ಮಿತ-ಭಾಷೆಯಲ್ಲಿ, ಒಂದು ಗ್ರಂಥದ ನಿರ್ದಿಷ್ಟ ವಿಷಯವನ್ನು ಭಾಷಾಂತರಿಸುವುದು; ಮತ್ತು ಇನ್ನೊಂದು ಕಡೆ, ಕ್ರಮದರ್ಶಕ ಸಂಕೇತಗಳಿಂದ, ಒಂದೇ ನಿರ್ದಿಷ್ಟ ವಿಷಯದ ಮೇಲಿನ ಎಲ್ಲ ಪುಸ್ತಕಗಳನ್ನು ಅವುಗಳ ಬಾಹ್ಯಲಕ್ಷಣಗಳಿಂದ ಪ್ರತ್ಯೇಕೀಕರಿ-ಸುವುದು—ಆಗಿದೆ.

ಈ ವ್ಯಾಖ್ಯೆ ಹಲವು ಪಾರಿಭಾಷಿಕ ಶಬ್ದಗಳನ್ನೊಳಗೊಂಡಿರು-ವುದರಿಂದ ವಿವರಣೆ ಅತ್ಯವಶ್ಯವಾಗುತ್ತದೆ.

'ಒಂದು ಪುಸ್ತಕದ ನಿರ್ದಿಷ್ಟ ವಿಷಯ' ಎನ್ನುವುದು ಇಲ್ಲಿ ಮೊದಲಿಗೆ ಮಹತ್ತ್ವದ್ದಾದುದು. ಇದು ವರ್ಗೀಕರಣ ಪದ್ಧತಿಯ ಮುಖ್ಯ ತಳಹದಿ. ಪುಸ್ತಕವೊಂದರ ವಿಷಯ ಇದು— ಎಂಬುದನ್ನು ನಾವು ಬಹಳ ಸಲಿಲಾಗಿ ಉಪಯೋಗಿಸುತ್ತೇವೆ. ಅನೇಕ ಸಲ ಅದು ಸರಿಯಾಗಿರುವುದಿಲ್ಲ. ಎ ಸೀ. ಯವರ 'ಆತ್ಮತ್ಯಾಮನ್' ಎಂಬ ಪುಸ್ತಕದ ವಿಷಯವಾವುದು? ತೀರ ಸರಳವಾಗಿ 'ವಿಮರ್ಶೆ' ಎಂದಿಷ್ಟು ನಾವು ಹೇಳಿ ಬಿಡುತ್ತೇವೆ. ಆದರೆ ಅದು ಸಂಪೂರ್ಣ ಸರಿಯಲ್ಲ, ಕಾರಣ ಬರಿಯೆ 'ವಿಮರ್ಶೆ' ಎನ್ನದೆ, ಅದನ್ನು ಸ್ಪಷ್ಟಪಡಿಸುವುದಕ್ಕೆ ನಿರ್ದಿಷ್ಟ ವಿಷಯ (Specific subject) ಎಂದು ಹೇಳಲಾಗಿದೆ.

ಈ ನಿರ್ದಿಷ್ಟ ವಿಷಯವನ್ನು ಹಿಡಿದು ವರ್ಗೀಕರಣದ ತಳಹದಿಗಳಲ್ಲಿ ಬೇರೆ ಕೆಲವೂ ಇವೆ. ಗ್ರಂಥಕರ್ತನ ದೃಷ್ಟಿಯಿಂದಲೂ ಇನ್ನು ಕೆಲವು ಆಕಾರದೃಷ್ಟಿಯಿಂದಲೂ, ಇಲ್ಲವೆ ಭಾಷೆ, ದೇಶ-ವರ್ಷ-ಗಳನ್ನು ಗಮನಿಸಿಯೂ ಮತ್ತು ಇನ್ನು ಕೆಲವು ರೀತಿಯಲ್ಲೂ, ಪುಸ್ತಕಗಳನ್ನು ಹೊಂದಿಸಿಡುವುದು ಸಾಧ್ಯವಿದೆ. ಆದರೆ ಇಪ್ಪತ್ತು ದಿನದ ಗ್ರಂಥಾಲಯಗಳ ಬಳಕೆಯಲ್ಲಿ ಈ 'ವಿಷಯ'ವನ್ನೆ ತಳಹದಿಯಾಗಿಟ್ಟುಕೊಳ್ಳುವುದು ಅನುಕೂಲವೆಂಬುದು ಕಂಡು-ಬಂದಿದೆ. ಏಕೆಂದರೆ ಓದುಗರು ಪುಸ್ತಕಗಳನ್ನು, ಆ ಪುಸ್ತಕದ ವಿಷಯವನ್ನೇ ಹೆಚ್ಚಾಗಿ ಗಮನಿಸಿ ಬೇಡುತ್ತಿರುತ್ತಾರೆ. ಓದು-ಗರ ಉಪಯೋಗಕ್ಕಾಗಿಯೆ ಪುಸ್ತಕಗಳಿರುವುದರಿಂದ, ಅವರು ಯಾವ 'ರೀತಿ'ಯಲ್ಲಿ, ಪುಸ್ತಕಗಳನ್ನು ಅಪೇಕ್ಷಿಸುತ್ತಾರೋ ಆ ರೀತಿಯನ್ನು ಅನುಸರಿಸುವುದು ಅವಶ್ಯ. ಅಲ್ಲದೆ ಪುಸ್ತಕ-ಗಳನ್ನು ವಿಷಯಾನುಸಾರ ಹೊಂದಿಸಿಡುವುದರಿಂದಲೆ, ಜ್ಞಾನ-ಸಾಧನೆಗೆ ಹೆಚ್ಚಿನ ಅನುಕೂಲ್ಯವಿದೆ, ಸುಲಭವಿದೆ. ಆದರಿಂದ ಪ್ರತಿಯೊಬ್ಬ ಓದುಗನಿಗೆ ತಾನು ಬಯಸಿದ ಪುಸ್ತಕ ಸಿಗುತ್ತದೆ. ಪ್ರತಿಯೊಂದು ಪುಸ್ತಕಕ್ಕೂ ಓದುಗನು ದೊರೆಯುವುದು ಸಾಧ್ಯವಾಗುತ್ತದೆ. ಓದುಗನ ವೇಳೆಯನ್ನು ಉಳಿಸುತ್ತದೆ ಒಟ್ಟಿನಲ್ಲಿ ವಿಷಯಾನುಸಾರ ಪುಸ್ತಕಗಳನ್ನು ಹೊಂದಿಸಿಡುವಲ್ಲಿ, ಪುಸ್ತಕಾಲಯಶಾಸ್ತ್ರದ, ಮೇಲಣ ಐದು ಸೂತ್ರಗಳಲ್ಲಿಯ ಕಾರ್ಯ ಸಾಧಿಸುತ್ತದೆ.

ಎಷ್ಟೋ ಸಲ ನಾವು ಪುಸ್ತಕಗಳನ್ನು ಲೇಖಕರ ದೃಷ್ಟಿ-ಯಿಂದಲೂ ಹುಡುಕುವುದಿಲ್ಲವೆ?—ಎಂದು ಕೇಳಬಹುದು. ಶ್ರೀನಿವಾಸರು ಬರೆದ ಸಣ್ಣ ಕತೆಗಳು, ಕಾರಂತರ ಕಾದಂಬರಿ-ಗಳು, ಬೇಂದ್ರೆಯವರ ಕವನಗಳು—ಎಂದು ನಾವು ಬೇಡು-ವುದು ನಿಜ ಆದರೆ ಇದು 'ಸಾಹಿತ್ಯ' ವಿಷಯವೊಂದಕ್ಕೆ ಮಾತ್ರ ಹೆಚ್ಚಾಗಿ ಅನ್ವಯಿಸುವಂತಹದು. ಉಳಿದ ವಿಷಯ-ಗಳಲ್ಲಿ ಹೀಗಿಲ್ಲ. ಅಂತು ಈ ಬರೆಹಗಾರನ ದೃಷ್ಟಿಯು ವರ್ಗೀಕರಣದಲ್ಲಿಯು ವಿಷಯಾನುಸಾರ ಹೊಂದಾವಣೆಯ ಅನಂತರ ಬರುವಂತಹದು.

ಇನ್ನು, ಒಂದು ಪುಸ್ತಕದ ವಿಷಯವನ್ನು ಕಂಡುಹಿಡಿಯು-ವುದು ಸ್ವಲ್ಪ ಶ್ರಮದ ಕೆಲಸವೆ ಆಗಿದೆ. ಉದಾಹರಣೆಗಳಿಂದಲೆ ಇದನ್ನು ಗಮನಿಸುವ: ರಾಜರತ್ನಂ ಅವರ ಹತ್ತು ವರುಷದ ನಿರ್ದಿಷ್ಟ ವಿಷಯವಾವುದು? ಸಾಹಿತ್ಯವೊ, ರಾಜರತ್ನಂ ಎಂದೊ? ಆತ್ಮಚರಿತ್ರೆ ಎಂಬುವು ಬಹಳ ವ್ಯಾಪಕ-ವಾದುವು ನಿರ್ದಿಷ್ಟವಾಗಲಿಲ್ಲ. 'ರಾಜರತ್ನಂರವರ ಜೀವನದ

5. Ranganathan S. R., Elements of Library Classification,

ಕೆಲ ವರುಷಗಳ ಆತ್ಮಚರಿತ್ರೆ' ಎಂಬುದೇ ಅದರ ನಿರ್ದಿಷ್ಟ ವಿಷಯ. ಮೇಲೆ ಹೇಳಿದ 'ಅಶ್ವತ್ಥಾಮನ್' ಪುಸ್ತಕವನ್ನೇ ನೋಡುವ. ಅದು ಶ್ರೀಯುವರ 'ಅಶ್ವತ್ಥಾಮನ್' ಮೇಲೆ ಬರೆದ ವಿಮರ್ಶಾ ಗ್ರಂಥ. ಅದರ ನಿರ್ದಿಷ್ಟ ವಿಷಯವು ಸೊಫೊಕ್ಲಿಸ್‌ನ 'ಐಯಾಕ್ಸ್' ನಾಟಕದ ಪರಿವರ್ತನವಾದ ಅಶ್ವತ್ಥಾಮನ್' ನಾಟಕದ ಮೇಲಿನ ಪ್ರಬಂಧ.

ಸಾಹಿತ್ಯವಿಭಾಗದಲ್ಲಿ ಈ ವಿಷಯವನ್ನು ಗುರುತಿಸುವುದು ಕುಸುಹಗುರು. ಬೇರೆ ವಿಷಯಗಳಾದ ಶಾಸ್ತ್ರ, ತತ್ತ್ವಜ್ಞಾನ ಮುಂತಾದುವುಗಳ ಮೇಲಿನ ಪುಸ್ತಕಗಳ ನಿರ್ದಿಷ್ಟವಿಷಯವನ್ನು ಕಂಡುಹಿಡಿಯುವುದು ಸುಲಭವಾದ ಮಾತಲ್ಲ. ವರ್ಗೀಕರಣ ಮಾಡುವವನು ಹೆಚ್ಚು ಓದಿಕೊಂಡವನಾಗಿರುವುದು ಅವಶ್ಯ ಎಂಬುವನ್ನು ಇದು ಒತ್ತಿಹೇಳುವುದಿಲ್ಲವೆ? ವರ್ಗೀಕರಣದಲ್ಲಿ ದೋಷಗಳು ಏನಾದರೂ ಇದ್ದರೆ, ಅದು ನಿರ್ದಿಷ್ಟ ವಿಷಯವನ್ನು ಕಂಡು ಹಿಡಿಯಲು ಆಗದೆ ಹೋದುದರಿಂದ—ಎಂದು ಹೇಳಬಹುದು. ಒಂದುಪುಸ್ತಕವನ್ನು— ಗೊತ್ತಾಗದೆ ಹೋಗಿ— ಅದರ ನಿರ್ದಿಷ್ಟಸ್ಥಾನದಲ್ಲಿ ಸೇರಿಸದೆ ಇದ್ದು, ಬೇರೆಡೆಯಲ್ಲಿ ಇಟ್ಟಿದ್ದಾದರೆ, ಪ್ರತಿಯೊಂದು ಪುಸ್ತಕಕ್ಕೆ ಓದುಗ ದೊರೆಯುವೇಕೆಂಬ ಕನೆಯ ಸೂತ್ರಕ್ಕೆ ಹಿನ್ನೇಟು ಹಾಕಿದಂತೆ.

ಇನ್ನು ಈ ನಿರ್ದಿಷ್ಟ ವಿಷಯವನ್ನು ನಿರ್ಮಿತ (Artificial) ಭಾಷೆಗೆ ಪರಿವರ್ತಿಸುವುದನ್ನು ಕುರಿತು ನೋಡುವ. ವರ್ಗೀಕರಣದ್ದೂ ಒಂದು ಭಾಷೆಯಿದೆ ಆದರೆ ಅದು ನಾವು ಮಾತನಾಡುವ ಸಹಜ ಭಾಷೆಯಲ್ಲ. ಅನುಕೂಲಕ್ಕಾಗಿ ನಿರ್ಮಿಸಿಕೊಂಡದ್ದು. ಶೀಘ್ರಲಿಪಿ (Shorthand) ಯ ನಿರ್ಮಿತ ಭಾಷೆಯನ್ನು ನಾವು ನೋಡಿದ್ದೇವೆ. ಗಣಿತ ಶಾಸ್ತ್ರದಲ್ಲಿ ಉಪಯೋಗಿಸುವ ಅಂಕಿ ಅಕ್ಷರಗಳದ್ದೂ ಒಂದು ನಿರ್ಮಿತ ಭಾಷೆಯೇ. ಹೀಗೆ ಈ ನಿರ್ಮಿತಭಾಷೆಗಳು ಸಂಕ್ಷಿಪ್ತತೆ, ಸ್ಪಷ್ಟ ಮುಂ. ಗಳನ್ನು ಮುಂದಿಟ್ಟುಕೊಂಡು ಮಾಡಿದುವುಗಳಾಗಿವೆ. ಇಲ್ಲಿಯ ನಿರ್ಮಿತಭಾಷೆಯು, ವರ್ಗೀಕರಣ ಪದ್ಧತಿಯನ್ನು ರೂಢಿಸುವ (Mechanise) ದೃಷ್ಟಿಯಿಂದ ಮಾಡಿದುದು; ಇದು ಅಸಂಖ್ಯ ಪುಸ್ತಕಗಳನ್ನೊಳಗೊಂಡಿರುವ ಗ್ರಂಥಾಲಯಗಳಿಗೆ ಅನಿವಾರ್ಯವೆಂಬುದನ್ನು ನೆನೆಯಬೇಕು. ಹೀಗೆ ಒಂದು ಪುಸ್ತಕದ ನಿರ್ದಿಷ್ಟವಿಷಯವನ್ನು, ಇಂತಹ ಒಂದು ಭಾಷೆಯಲ್ಲಿ ಹೇಳಿದಾಗ, ಆ ವಿಷಯದ ಮೇಲಿನ ಎಲ್ಲ ಪುಸ್ತಕಗಳು ಒಂದೆಡೆ ಬರುತ್ತವೆ. ಮತ್ತು ಮುಖ್ಯ ವಿಷಯದ ಕ್ರಮವಾಗಿ, ವರ್ಗಗಳನ್ನು ಕಲ್ಪಿಸುತ್ತ ಹೋಗಿ, ಒಂದು ಪುಸ್ತಕದ ನಿರ್ದಿಷ್ಟ ಹಾಗೂ ನೇರವಾದ ವಿಷಯವನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಉದಾಹರಣೆಗೆ 'ಶಾಂತಿಪರ್ವ' ಪುಸ್ತಕವನ್ನು ತೆಗೆದುಕೊಳ್ಳುವ: 'ದ್ವಿವಿಂದು' ವರ್ಗೀಕರಣ ಪದ್ಧತಿಯ ಪ್ರಕಾರ, ಇದರ ವರ್ಗೀಕರಣದ ಮೆಟ್ಟಿಲುಗಳು ಕ್ರಮವಾಗಿ ಹೀಗೆ ಇವೆ:—

೧. ಇದು ಜ್ಞಾನ ಸಮುದಾಯದಲ್ಲಿ ಯಾವ ಮುಖ್ಯ ವಿಭಾಗಕ್ಕೆ ಸಂಬಂಧಿಸಿದುದು?

೨. ಯಾವ ಭಾಷೆಯಲ್ಲಿಯದು?

೩. ಯಾವ ರೂಪವುಳ್ಳದ್ದು? (form)

೪. ಬರೆದವರಾರು?

೫. ಅವರ ಎಷ್ಟನೆಯ ಪುಸ್ತಕ?

ಇವನ್ನು ಒಂದೆಡೆ ತಂದರೆ, ಈ ಪುಸ್ತಕದ ನಿರ್ದಿಷ್ಟ ವಿಷಯ ಸೂಚಿಯು ಈ ರೀತಿ:—

(ಸಾಹಿತ್ಯ) (ಕನ್ನಡ ಭಾಷೆ) (ಕಾದಂಬರಿ)
೧ ೩ ೩
(ಆನಂದಕಂದ) (೩ನೆಯದು).
೪ ೫

ಈ ಕ್ರಮದರ್ಶಕದ ವಿಶೇಷವೇನೆಂದರೆ, ಮೊದಲಿಗೆ ಸಾಹಿತ್ಯದ ಮೇಲಿನ ಎಲ್ಲ ಪುಸ್ತಕಗಳೂ ಒಂದೆಡೆ ಬರುವುವು. ಆ ಮೇಲೆ ಅದರ ಉಪವಿಭಾಗವಾಗಿ ಕನ್ನಡ ಗ್ರಂಥಗಳಲ್ಲಿ ಒಂದೆಡೆ ಬರುತ್ತವೆ. ಮುಂದೆ ಒಟ್ಟು ಕನ್ನಡ ಕಾದಂಬರಿಗಳೆಷ್ಟು, ಎಂದು ತಿಳಿಯಬಹುದು. ಆಮೇಲೆ ಲೇಖಕರು. ಅನಂತರ, ಆ ಲೇಖಕರು ಬರೆದ ಪುಸ್ತಕಗಳಾವುವು ಎಂಬುದೂ ತಿಳಿಯುವುದು. ಹೀಗೆ ಪ್ರತಿಯೊಂದೂ ಒಂದೊಂದು ಗುಂಪು ಆಗುತ್ತ ಹೋಗಿ, ಒಂದು ಗುಂಪಿನಿಂದ ಇನ್ನೊಂದು ಗುಂಪಿಗಿರುವ ಕ್ರಮವಾದ ಮೆಟ್ಟಿಲುಗಳನ್ನು ನಾವು ಗುರುತಿಸಬಹುದಲ್ಲವೆ? ಅಂತು ಒಂದು ಪುಸ್ತಕದ ನಿರ್ದಿಷ್ಟವಿಷಯವನ್ನು ಕ್ರಮವಾದ ಮೆಟ್ಟಿಲುಗಳಿಂದ, ನಿರ್ಮಿತ ಭಾಷೆಯಲ್ಲಿ ಗುರುತಿಸಿದಾಗ, ಅದಕ್ಕೆ ವರ್ಗೀಕರಣಶಾಸ್ತ್ರದಲ್ಲಿ **ವರ್ಗೀಯ ಸಂಕೇತ** (Class Number) ಎಂದು ಕರೆಯಲಾಗಿದೆ.

ಆದರೆ ಇಷ್ಟರಿಂದಲೆ ಪ್ರತಿಯೊಂದು ಪುಸ್ತಕವೂ ಪ್ರತ್ಯೇಕೀಕರಿಸಲ್ಪಡಲಾಗುವುದಿಲ್ಲ. ಏಕೆಂದರೆ ಪ್ರತಿಯೊಂದು ಪುಸ್ತಕವು ಸಮಗ್ರದಲ್ಲಿ ಪ್ರತ್ಯೇಕವಾಗಿ ಆ ಆ ವಿಷಯವಾಗಲಾರವು ಮೇಲಿನ ಗ್ರಂಥವನ್ನೇ ತೆಗೆದುಕೊಳ್ಳುವ: ವರ್ಗೀಯ ಸಂಕೇತದಿಂದ, 'ಶಾಂತಿಪರ್ವ'ದ ನಿರ್ದಿಷ್ಟ ವಿಷಯವನ್ನು ಹೇಳುವುದು ಸಾಧ್ಯವಾಗಿದೆ. ಈ ಗ್ರಂಥದ ೩ನೆಯ ಆವೃತ್ತಿಯ ಪುಸ್ತಕ ಹೊರಬಿದ್ದಿದೆ. ಅದನ್ನು ಗುರುತಿಸುವುದು ಈಗಿದ್ದ ಸಂಕೇತದಿಂದ ಪೂರ್ಣವಾಗಲಿಲ್ಲ. ಮುಂದೆ ಈ ಪುಸ್ತಕವು ಬೇರೊಂದು ಭಾಷೆಯಲ್ಲಿ ಭಾಷಾಂತರವಾಗಬಹುದು. ಅದನ್ನು ಯಾವರೀತಿಯಾಗಿ ಗುರುತಿಸುವುದು? ಅಥವಾ 'ಶಾಂತಿಪರ್ವ'ದ ೩ನೆಯ ಭಾಗ ಹೊರಡಬಹುದು. ಹೀಗೆ ಬರಿ ವರ್ಗೀಯ ಸಂಕೇತದಿಂದ, ವರ್ಗೀಕರಣ ಪೂರ್ಣವಾಗಲಿಲ್ಲ. ಪ್ರತಿ ಪುಸ್ತಕವು ಸಾಧ್ಯವಿದ್ದಷ್ಟು ಪ್ರತ್ಯೇಕೀಕರಿಸಲ್ಪಡುವಂತಹದಾಗಬೇಕು, (individualisation). ಇನ್ನೊಂದು ಮಹತ್ತ್ವದ ಮಾತೆಂದರೆ ಈಗ ಎತ್ತಿದ ಸಮಸ್ಯೆಗಳು ಆ ಪುಸ್ತಕದ "Book Subject.

(ಎಲ್ಲನೆಯ ಪುಟಕ್ಕೆ ಮುಂದುವರಿದಿದೆ)

ರಾಜಕೀಯ ಲೋಕದ ಅವಲೋಕನ

'ರಾಯರ ಅಪ್ಪಾಜಿ'ಯಿಂದ

ನಿಜಾಮರೊಡನೆ ಯಥಾಸ್ಥಿತಿ

ಸುದೀರ್ಘಚರ್ಚೆ, ವಿಚಾರವಿನಿಮಯ, ಪ್ರಕಟನೆ-ಪ್ರತಿ ಪ್ರಕಟನೆ, ಉತ್ತರ-ಪ್ರತ್ಯುತ್ತರ, ಗುಡುಗು-ಮಿಂಚು, ತರ್ಕ-ವಿತರ್ಕಗಳೆಲ್ಲ ಮುಗಿದು ಕೊನೆಗೆ ಹಿಂದುಸ್ತಾನ ಮತ್ತು ಹೈದ್ರಾಬಾದ್ ನಿಜಾಮರ ನಡುವೆ 'ಯಥಾಸ್ಥಿತಿ' ಒಪ್ಪಂದವಾಯಿತು. ಇವೆರಡು ಸರಕಾರಗಳ ನಡುವೆ ಶಾಶ್ವತ ಒಪ್ಪಂದ ಇನ್ನೂ ಸಾಧ್ಯವಾಗದುದರಿಂದ ಹಾಗೂ ಶಾಶ್ವತ ಒಪ್ಪಂದ ಆಗುವವರೆಗೆ, ಆಗಸ್ಟ್ ೧೫ ರ ಮೊದಲು— ಹಿಂದುಸ್ತಾನ ಸರಕಾರ ಮತ್ತು ನಿಜಾಮರ ನಡುವೆ—ಸಂರಕ್ಷಣ, ವಿದೇಶವ್ಯವಹಾರ ಮತ್ತು ಸಂಪರ್ಕ ಮೊದಲಾದ ಉಭಯ ಸಾಮಾನ್ಯ ವಿಷಯಗಳಲ್ಲಿ ಇದ್ದ ವ್ಯವಸ್ಥೆ ಇರಬೇಕೆಂದು ಗೊತ್ತಾಯಿತು. ಈ ಒಪ್ಪಂದದನ್ವಯ ನಿಜಾಮರಿಗೆ ವಿದೇಶದಲ್ಲಿ (ಪಾಕಿಸ್ತಾನದಲ್ಲಿ ಕೂಡ) ತಮ್ಮ ವ್ಯಾಪಾರೀ ಪ್ರತಿನಿಧಿಗಳನ್ನು ನೇಮಿಸುವ ಮತ್ತು ವಿದೇಶಗಳೊಡನೆ ಆರ್ಥಿಕ ಮತ್ತು ವ್ಯಾಪಾರ ಸಂಬಂಧವನ್ನು ಸ್ವತಂತ್ರವಾಗಿ ಇಟ್ಟುಕೊಳ್ಳುವ ಅಧಿಕಾರ ದೊರೆತಿದೆ. ಯುದ್ಧಕಾಲದಲ್ಲಿಯಲ್ಲದೆ ಇನ್ನಿತರ ಸಮಯದಲ್ಲಿ ಹಿಂದುಸ್ತಾನವು ಸಂಸ್ಥಾನದಲ್ಲಿ ಸೈನ್ಯವನ್ನಿಡಬಾರದು. ಆಂತರಿಕ ಶಾಂತಿ-ಸ್ಥಾಪನೆಗಾಗಿ ಹಿಂದುಸ್ತಾನ ಸರಕಾರವು ನಿಜಾಮರಿಗೆ ಸೈನ್ಯ ಕಳಿಸಬಾರದು; ಅದಕ್ಕೆ ಆ ಹಕ್ಕು ಇಲ್ಲ. ಒಪ್ಪಂದದಿಂದ ನಿಜಾಮರ ವರಿಷ್ಠಾಧಿಕಾರಕ್ಕೆ ಚ್ಯುತಿಬರುವುದಿಲ್ಲ. ಉಭಯತರಲ್ಲಿ ತಂಟೆ ಉದ್ಭವಿಸಿದರೆ (ಅರ್ಥಾತ್ ಈ ಒಪ್ಪಂದದ ವಿಷಯದಲ್ಲಿ) ಉಭಯತರೂ ಒಬ್ಬೊಬ್ಬರನ್ನು ನೇಮಿಸಿ, ಆ ಇಬ್ಬರ ಮಧ್ಯಸ್ಥಮಂಡಳಿಕ್ಕೆ ತಲೆಪಾಗಬೇಕು. ನಿಜಾಮರು ಶಸ್ತ್ರಾಸ್ತ್ರಗಳನ್ನು ವಿದೇಶದಿಂದ ಕೊಳ್ಳತಕ್ಕದ್ದಲ್ಲ. ಹಿಂದುಸ್ತಾನವೇ ಅವರಿಗೆ ಯೋಗ್ಯಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಪೂರಯಿಸಬೇಕು— ಇವೇ ಮೊದಲಾದುವುಗಳು ಒಪ್ಪಂದದ ವಿವರಗಳಾಗಿವೆ.

ನಿಜಾಮರು ತಾವು ಹಿಂದುಸ್ತಾನಕ್ಕೂ ಸೇರುವುದಿಲ್ಲ, ಪಾಕಿಸ್ತಾನಕ್ಕೂ ಸೇರುವುದಿಲ್ಲ— ಎಂದು ಸಾರಿದ್ದರು. ಆ ಮಾತನ್ನು ಇವರು ಗೆದ್ದಂತಾಯಿತು. ಯಾಕೆಂದರೆ ಈ ಒಪ್ಪಂದದಿಂದ ನಿಜಾಮರು ಹಿಂದುಸ್ತಾನ್ ಒಕ್ಕೂಟಕ್ಕೆ ಸೇರಿದರೆಂದು ಹೇಳಲಿಕ್ಕಾಗದು. ನಿಜಾಮರು ಪಾಕಿಸ್ತಾನ್ ಸೇರಲಿಲ್ಲವೆಂದು ಮಾತ್ರ ಹಿಂದುಸ್ತಾನ್ ಸರಕಾರವು ಅನಂದಪಡಬಹುದು—ಅಷ್ಟೇ. ಹೈದ್ರಾಬಾದಿನ ಪ್ರಜೆಗಳ ಸಾರ್ವಭೌಮತ್ವವನ್ನು ಉಭಯತರೂ ಮನ್ನಿಸಲಿಲ್ಲ. ಇದೊಂದು ದೊಡ್ಡ ದುರ್ದೈವದ ಸಂಗತಿ. ಹಿಂದುಸ್ತಾನ್ ಒಕ್ಕೂಟಕ್ಕೆ ಹೈದ್ರಾಬಾದು ಸೇರುವವರೆಗೆ ಮತ್ತು ಹೈದ್ರಾಬಾದಿನಲ್ಲಿ ಹೊಣೆಗಾರ ಸರಕಾರ ಸ್ಥಾಪಿಸಲ್ಪಡುವ ವರೆಗೆ ತನ್ನ ಹೋರಾಟ ಜೋರಿನಿಂದ ನಾಗುವುದೇ ಎಂದು ಹೈದ್ರಾಬಾದ್ ಕಾಂಗ್ರೆಸ್ಸು ಗರ್ಜಿಸಿದೆ. ಕಾಂಗ್ರೇಸೇತರ ವರ್ಗಗಳಲ್ಲಿಯೂ ಅಸಂತೋಷ ಸಾಕಷ್ಟು ಹರಡಿದೆ ನಿಜಾಮರನ್ನು ಕೊಲ್ಲಲು ಯತ್ನ ನಡೆಯಿತು. ಹೈದ್ರಾಬಾದಿನಲ್ಲಿ ಒಂದು ಹೊಣೆಗೇಡಿ ನಡುಗಾಲ ಮಂತ್ರಿಮಂಡಳವು ಸ್ಥಾಪಿತವಾಗಿದೆ. ಹಿಂದುಸ್ತಾನ್ ಸರಕಾರಕ್ಕೆ ಹೈದ್ರಾಬಾದ್ ಪ್ರಜೆಗಳಿಗೆ ಹೊಣೆಗಾರ ಸರಕಾರ ದೊರೆಕಿಸುವ ಕಾರ್ಯದಲ್ಲಿ ಸಹಾಯ ಮಾಡಲು ಕ್ರಮಬದ್ಧವಾಗಿ ಬರಲಾರದೆಂದು ವಿಷಾದವೆನಿಸಿವ ಸರದಾರ್ ಪಟೇಲರು, ಜಯಪುರದಲ್ಲಿ ಹೇಳಿದ ಕೆಳಗಿನ ಮಾತುಗಳು ಆಶಾದಾಯಕವೆನಿಸುತ್ತವೆ: "ಹೈದ್ರಾಬಾದ್ ಪ್ರಜೆಗಳು ಹೊಣೆಗಾರ ಸರಕಾರ ಕೇಳುತ್ತಿರುವರು; ಅದು ಅವರ ಹಕ್ಕು ಸಂಸ್ಥಾನವು ತನ್ನಷ್ಟಕ್ಕೆ ತಾನೇ ಹಾದಿಗೆ ಬರುತ್ತದೆ ಅಲ್ಲಿ ಹಿಂದೂ ನೂರಕ್ಕೆ ೮೫ ರಷ್ಟಿರುವಾಗ ನೂರಕ್ಕೆ ೧೫ ರಷ್ಟಿರುವ ಮುಸಲ್ಮಾನರು ಸಮ ಪ್ರಾತಿನಿಧ್ಯ ಕೇಳುತ್ತಿರುವರು. ಇದು ಅಸಂಬದ್ಧ ಜನಾಭಿಪ್ರಾಯಕ್ಕೆ ಬ್ರಿಟಿಶ್ ಸರಕಾರವು ತಲೆವಾಗಿ ಹಿಂದುಸ್ತಾನದಿಂದ ಕಾಲ್ತೆಗೆಯಿತು ನಿಜಾಮರ ಪಾಡೇನು?' ಯಥಾಸ್ಥಿತಿ ಒಪ್ಪಂದವು ಒಂದು ವರ್ಷ ಅವಧಿಯದಾಗಿದೆಯೆಂದು ಹಿರಿಯೋಲಗದಲ್ಲಿ ಸಂಸ್ಥಾನಶಾಖೆಯ ಮಂತ್ರಿ ಸರದಾರ್ ಪಟೇಲರು ಸ್ಪಷ್ಟೀಕರಿಸಿದರು.

ಕ್ರಮೇಣ ವಿ-ನಿಯಂತ್ರಣ

ಜನ್ಮವೆತ್ತಿದಾಗಿನಿಂದಲೇ ಹಿಂದುಸ್ತಾನ್ ಸರಕಾರಕ್ಕೆ ಗುರ್ದಂತಹ ಸಮಸ್ಯೆಗಳು ಗಂಟುಬಿದ್ದಿವೆ. ಇವುಗಳಲ್ಲಿ ಅಪಾಯ ಸಮಸ್ಯೆಯೊಂದು. ಆಹಾರ ನಿಯಂತ್ರಣಗಳಿಂದ ಎಂದು ಎಲ್ಲರಿಗೂ ಆಹಾರ ಒದಗಿಸುವ ಸೀದಾ ಪದ್ಧತಿಯು ಹೊಗೆ ಹೊತ್ತಿದ್ದರಿಂದ, ಹಿಂದುಸ್ತಾನ ಸರಕಾರಕ್ಕೆ ೨೦ ರಿಂದ ೨೫ ಕೋಟಿ ರೂಪಾಯಿ ಪ್ರತಿವರ್ಷ ಹಾನಿತಟ್ಟುತ್ತಿತ್ತು; ಮಿತಿಮೀರಿದ ಬೆಲೆತೆತ್ತು ವಿದೇಶದಿಂದ ಆಹಾರ ಕೊಳ್ಳಲು ೧೦೦ ಕೋಟಿ ರೂಪಾಯಿ ತೊಡಗಿಸಬೇಕಾಗುತ್ತಿತ್ತು. ಇದು ಆರ್ಥಿಕ ಹಾನಿಯಾಯಿತು ಇನ್ನು ನೈತಿಕ ಹಾನಿಯೆಂದರೆ ಆಹಾರ ನಿಯಂತ್ರಣಗಳಿಂದ ತಮ್ಮ ವ್ಯಾಪಾರ ಕುಗ್ಗಿಹೋಯಿ

ತೆಂದು ವ್ಯಾಪಾರಸ್ಥರು ಅಸಂತುಷ್ಟರಾಗಿದ್ದರು. ಆಹಾರ ನಿಯಂತ್ರಣಗಳಿಂದ ತಮ್ಮ ಧಾನ್ಯಕ್ಕೆ ಯೋಗ್ಯ ಬೆಲೆ ಸಿಕ್ಕಲೊಲ್ಲದೆಂದು ರೈತರು ರೊಚ್ಚಿಗೆದ್ದಿದ್ದರು. ಹಣಕೊಟ್ಟರೂ ನೈಯೆಲ್ಲ ತಿಂಡಿಬಿಡುವ ಕೆಟ್ಟ ಆಹಾರವನ್ನು ತಿನ್ನುವ ಪ್ರಸಂಗ ತಮ್ಮ ಮೇಲೆ ಬಂದದ್ದು ಆಹಾರ ನಿಯಂತ್ರಣಗಳಿಂದಲೇ— ಎಂದು ಜನಸಾಮಾನ್ಯರು ಸಿಟ್ಟಿಗೆದ್ದಿದ್ದರು. ಲಂಚಗುಳಿತನ, ಕಳ್ಳಪೇಟೆ, ಲಾಭಬಡಕತನ, ಕಳ್ಳಸಂಗ್ರಹ, ಜೊಟ್ಟಿಸೀದಾ ಕಾರ್ಡುಗಳು ಮೊದಲಾದ ಅನೈತಿಕ ಮಾರ್ಗಗಳಿಂದ ಜನರು ಪರಿಸ್ಥಿತಿಯ ದುರ್ಲಾಭ ತೆಗೆದುಕೊಂಡು, ಸರಕಾರವನ್ನು ಗೋಳಾಡಿಸತೊಡಗಿದರು. ಆದುದರಿಂದ ಹಿಂದುಸ್ತಾನ ಸರಕಾರವು ಕ್ರಮೇಣ ವಿ-ನಿಯಂತ್ರಣಧೋರಣವನ್ನು ಸ್ವೀಕರಿಸಿ, ಆಹಾರ ನಿಯಂತ್ರಣಗಳ ಇತಿಶ್ರೀ ಮಾಡಲು ನಿರ್ಧರಿಸಿತು. ಕೇಂದ್ರ ಸರಕಾರದ ಈ ನಿರ್ಣಯವನ್ನು ತಮ್ಮ ಪರಿಸ್ಥಿತಿಗೆ ಅನುಗುಣವಾಗುವಂತೆ ಅಮಲಿನಲ್ಲಿ ತರುವ ಸ್ವಾತಂತ್ರ್ಯವನ್ನು ಪ್ರಾಂತಗಳಿಗೂ ಸಂಸ್ಥಾನಗಳಿಗೂ ಕೊಡಲಾಯಿತು. ಮುಂಬಯಿ ಸರಕಾರವು ಪುಣೆ, ಮುಂಬಯಿ, ಅಹಮ್ಮದಾಬಾದ್ ಮತ್ತು ಸೊಲ್ಲಾಪೂರ ಈ ನಾಲ್ಕು ಪಟ್ಟಣಗಳನ್ನು ಬಿಟ್ಟು ಉಳಿದ ಪ್ರದೇಶದಲ್ಲಿ ಸೀದಾ ಪದ್ಧತಿಯನ್ನು ಮುಕ್ತಾಯಗೊಳಿಸಿತು. ಸಾಗಾಟದ ಮೇಲಿನ ನಿರ್ಬಂಧಗಳನ್ನು ತೆಗೆದೊಗೆಯಿತು. ಇಷ್ಟು ಮುಂದೆ ಹೆಜ್ಜೆ ಹಾಕದಿದ್ದರೂ ಮದ್ರಾಸ್ ಸರಕಾರವು ವಿನಿಯಂತ್ರಣ ಧೋರಣವನ್ನು ಕ್ರಮೇಣ ಅಮಲಿನಲ್ಲಿ ತರಲು ಯೋಚಿಸಿತು. ಮೈಸೂರ ಸಂಸ್ಥಾನವು ಮಾತ್ರ ಸದ್ಯದ ಧಾನ್ಯ ಎತ್ತುವಳಿ ಮತ್ತು ಸೀದಾಪದ್ಧತಿಯಲ್ಲಿ ಒದಲಾವಣೆ ಮಾಡುವುದು ಗಂಡಾಂತರಕ್ಕೆ ಕಾರಣವಾಗಬಹುದೆಂದು ಭಾವಿಸಿ, ವಿನಿಯಂತ್ರಣದ ವಿಚಾರವನ್ನು ಮುಂದೆ ದೂಡಿದೆ; ನಿಜಾಮ ಸರಕಾರವೂ ಆಹಾರ ನಿಯಂತ್ರಣಗಳಿಗೆ ಜೀವದಾನ ಕೊಟ್ಟಿದೆ.

ಆಹಾರ ನಿಯಂತ್ರಣಗಳು ಅಯಶಸ್ವಿಯಾಗುವುದಕ್ಕೆ ಕೊರತೆಯು ಮುಖ್ಯಕಾರಣವಾಗಿದ್ದರೂ, ಅತಿ ಪ್ರಸರಣವೂ ಎಂದರೆ ಸರಕಾರದವರು ಹೆಚ್ಚು ನೋಟುಗಳನ್ನು ಹೊರಡಿಸಿದುದೂ ಇದಕ್ಕೆ ಕಾರಣವಾಗಿದೆ. ಜನರ ಕೈಯಲ್ಲಿ ದುಡ್ಡು ಹೆಚ್ಚಾದುದರಿಂದ ಕಳ್ಳಪೇಟೆ ಮೊದಲಾದುವುಗಳು ನಡೆಯುವುವೇ. ಎಲ್ಲರ ಕೈಯಲ್ಲಿ ಹೆಚ್ಚು ಹಣ ಹೋಗಲವಕಾಶಕೊಟ್ಟ ಸರಕಾರವು ಕೇವಲ ರೈತನಿಗೆ ಹೆಚ್ಚು ಹಣ ದೊರೆಯದಂತೆ ಆಹಾರ ನಿಯಂತ್ರಣಗಳಿಂದ ಪರಿಸ್ಥಿತಿಯನ್ನುಂಟು ಮಾಡಿದರೆ, ಅದು ಅನೈಸರ್ಗಿಕವಾಗದಿರದು. ವಿ-ನಿಯಂತ್ರಣದಿಂದ ಇದು ದೂರಾಗುವುದು. ಕೊರತೆಯಿದ್ದುದರಿಂದ ಧಾನ್ಯದ ಬೆಲೆಯು ಮಿತಿಮೀರಿ ಏರಿ ಬಡವರ ಬಗ್ಗರ—ವಿಶೇಷತಃ ಕೂಲಿಕಾರರ ಸ್ಥಿತಿಯು ಹದಗೆಡುವ ಸಂಭವವಿದೆ. ಹೀಗಾಗಬಾರದೆಂದು ಸರಕಾರದವರು ತಕ್ಕ ಮಟ್ಟಿಗೆ ವ್ಯವಸ್ಥೆ ಮಾಡಿದ್ದಾರೆ. ಅದರೂ ಅದು ಸಾಲದು. ಮುಖ್ಯವಾಗಿ ಸರಕಾರದವರು ಕೊರತೆಯನ್ನು ನೀಗಲು ಶ್ರಮವಹಿಸತಕ್ಕದ್ದು ಭೂಮಿಯ ಒಡೆಯರಲ್ಲಿಯೂ ರೈತರಲ್ಲಿಯೂ ಹಿತಸಂಬಂಧ ಉಂಟಾಗುವಂತೆ ಮಾಡಿ, ಉತ್ಪಾದನೆ ಹೆಚ್ಚಿಸಬೇಕು.....ಮತ್ತು ಇಷ್ಟೇ ಆಸ್ಥೆಯಿಂದ ಜನರ ಹಾರ್ದಿಕ ಬೆಂಬಲವನ್ನೂ ಸಂಪಾದಿಸಿಕೊಳ್ಳಲು ಪ್ರಚಾರ ನಡೆಯಿಸತಕ್ಕದ್ದು. ನಿಯಂತ್ರಣವಾಗಲಿ, ವಿ-ನಿಯಂತ್ರಣವಾಗಲಿ, ಜನರ ಬೆಂಬಲವಿಲ್ಲದೆ ಯಶಸ್ವಿಯಾಗಲಾರವು.

ಕರ್ನಾಟಕ ವಿಕೀಕರಣ

ಕರ್ನಾಟಕ ವಿಕೀಕರಣದ ಮುಂದಿನ ಹೋರಾಟವು ಘಟನಾ ಸಮಿತಿಯಲ್ಲಿ ನಡೆಯುತಕ್ಕದ್ದೆಂದು ನಾವು ಈ ಮೊದಲೇ ಒರೆದಿದ್ದೆವು. ಆದರೆ ಘಟನಾ ಸಮಿತಿಯು ಅಧಿವೇಶನಕ್ಕೆ ಮೊದಲು ಕೇಂದ್ರಶಾಸನ ಸಮಿತಿಯು (ಕಾಯಿದೆ ಮಂಡಳದ) ಅಧಿವೇಶನವು ಸೇರಿತು. (ಸ್ವಾತಂತ್ರ್ಯದಾನ ಕಾಯಿದೆ ಪ್ರಕಾರ ಹಿಂದುಸ್ತಾನದ ಘಟನಾ ಸಮಿತಿಯೆ ಹಿಂದುಸ್ತಾನದ ಕೇಂದ್ರ ಕಾಯಿದೆ ಮಂಡಳವಾಗಿ, ಘಟನೆ ಸಿದ್ಧವಾಗಿ ಅದರನ್ವಯ ಕಾಯಿದೆಮಂಡಳದ ರಚನೆಯಾಗುವವರೆಗೆ, ಕೆಲಸ ನಡೆಸುವುದು.) ಈ ಅಧಿವೇಶನದಲ್ಲಿ ಶ್ರೀ. ಪಾಟಸ್ಕರ ಎಂಬ ಮಹಾರಾಷ್ಟ್ರದ ಸದಸ್ಯರು ಭಾಷಾವಾರ ಪ್ರಾಂತರಚನೆಯ ಗೊತ್ತುವಳಿಯನ್ನು ಮಂಡಿಸಿದರು. ಈ ಗೊತ್ತುವಳಿಯು ಘಟನಾ ಸಮಿತಿಯಲ್ಲಿ ಜರಿಯೇತೇ ಹೋದರು ಕಾಯಿದೆ ಮಂಡಳದಲ್ಲಿ ಒರತಕ್ಕದ್ದಲ್ಲವೆಂದು ಕಾಯಿದೆ ಶಾಖೆಯ ಮಂತ್ರಿ ಡಾ. ಅಂಬೇಡಕರರು ಆಕ್ಷೇಪ ಎತ್ತಿದರು; ಗೊತ್ತುವಳಿಯನ್ನು ಹಿಂತೆಗೆದುಕೊಳ್ಳುವಂತೆ ಶ್ರೀ. ಪಾಟಸ್ಕರರ ಮನ ಒಲಿಸಿದರು. ಈ ಸಂಗತಿ ತಿಳಿದ ಕೂಡಲೆ, ಭಾಷಾವಾರ ಪ್ರಾಂತರಚನೆಯಲ್ಲಿ ಆಸ್ಥೆಯಿದ್ದ ಎಲ್ಲ ಪ್ರಾಂತಗಳ ಸದಸ್ಯರೂ ಸಭೆಸೇರಿ, ಹಿಂದುಸ್ತಾನ್ ಸರಕಾರದ ಧೋರಣವನ್ನು ತಿಳಿದುಕೊಳ್ಳುವ ದೃಷ್ಟಿಯಿಂದ, ಆಂಧ್ರದ ಪ್ರೊ. ರಂಗಾಚಾರವರು ಒಂದು ಪ್ರಶ್ನೆಯನ್ನು ಮುಖ್ಯಮಂತ್ರಿ ನೆಹರೂರವರಿಗೆ ಕೇಳಬೇಕೆಂದು ನಿರ್ಣಯವಾಯಿತು ಈ ಪ್ರಶ್ನೆಗೆ ಉತ್ತರರೂಪವಾಗಿ ಇತ್ತ ಹೇಳಿಕೆಯಲ್ಲಿ ಪಂಡಿತ ಜವಾಹರಲಾಲ ನೆಹರೂರವರು, ಸರಕಾರವು ಭಾಷಾವಾರ ಪ್ರಾಂತರಚನೆಯ ತತ್ತ್ವಕ್ಕೆ ಒಪ್ಪಿದೆಯೆಂದೂ ಆದರೆ ಸದ್ಯಕ್ಕೆ ಘೋರವಾದ ಸಮಸ್ಯೆಗಳನ್ನು ಎದುರಿಸಬೇಕಾದ ನಾವು ತೊಡಕಿನ ಪ್ರಶ್ನೆಯಾದ ಭಾಷಾವಾರ ಪ್ರಾಂತ ರಚನೆಯತ್ತ ನಮ್ಮ ಲಕ್ಷ್ಯವನ್ನು ಹರಿಸಿದರೆ ನಮ್ಮ ಶಕ್ತಿ-ಉತ್ಸಾಹಗಳು ಮಹತ್ತ್ವದ ಮತ್ತು ಅಗತ್ಯವಾದ ಕಾರ್ಯಗಳಿಂದ ಪರಾವೃತ್ತವಾಗುವ ಭಯವಿದೆಯೆಂದೂ ಸಾರಿದರು. ಪಂಡಿತರು ಇಷ್ಟೇ ಅಭಿಪ್ರಾಯವನ್ನು ವ್ಯಕ್ತಪಡಿಸಿ ಸುಮ್ಮನಾಗಿದ್ದರೆ ಅಷ್ಟೊಂದು ಆಕ್ಷೇಪ ಉಂಟಾಗುತ್ತಿರಲಿಲ್ಲ. ಆಂಧ್ರ ಪ್ರಾಂತ ರಚನೆಯ ಬೇಡಿಕೆಯು ಯಥಾರ್ಥವೂ ನ್ಯಾಯವಾದದ್ದೂ ಸುಲಭವೂ ಜಗಿದೆ; ಆದರೆ ಕರ್ನಾಟಕ-ಮಹಾರಾಷ್ಟ್ರ ಪ್ರಾಂತಗಳ ರಚನೆಯ ಪ್ರಶ್ನೆ ಹೆಚ್ಚು ತೊಡಗಿನದಾಗಿದೆ— ಎಂದೂ